

ಗೌರಿ ಲಂಕೇಶ್

ಬಹುಸಂಖ್ಯಾತ ವಿಚಾರಧಾರೆಯ ಪರಿ

13 ಸೆಪ್ಟೆಂಬರ್ 2017 ಪುಟ 16 ರೂ. 15/- ರಂಜನೆ • ಬೋಧನೆ • ಪ್ರಬೋಧನೆ







ಪೊಲಿಟಿಕಲ್ ಅನಾಟಮಿ ಆಫ್ ಬಾಬಾ ದಾಂಧಲೆ

ಸಿಎಂ ಖಟ್ಟರ್ ಆದಿಯಾಗಿ ಹರ್ಯಾಣ ಬಿಜೆಪಿ ಸರ್ಕಾರದ ಬಹುಪಾಲು ಸಚಿವರಿಗೆ ರೇಪಿಸ್ಟ್ ಬಾಬಾನ ಜೊತೆ ನಿಕಟ ಒಡನಾಟವಿತ್ತು. ಕಳೆದ ಆರು ತಿಂಗಳ ಅವಧಿಯಲ್ಲಿ ಮೂವರು ಸಚಿವರು ಗುರ್ಮಿತ್‌ಗೆ 1.13 ಕೋಟಿ ರೂಪಾಯಿ ದೇಣಿಗೆ ನೀಡಿದ್ದರು. ಅಕ್ಷರಶಃ ಖಟ್ಟರ್ ಸರ್ಕಾರ ಒಂದು ಕೋಟಿಗೂ ಹೆಚ್ಚಿರುವ ಡೇರಾ ಅನುಯಾಯಿಗಳ ವೋಟ್‌ಬ್ಯಾಂಕ್‌ಗೆ ಶರಣಾಗತವಾದಂತೆ ವರ್ತಿಸಿದ್ದೇ ಗಲಭೆಗೆ ಕಾರಣ......




ಕೆ.ಆರ್ ನಗರ



ಜೆಡಿಎಸ್ ಸಾರಾ ಎದುರು ರಮ್ಯಾ ಕೈ ಅಭ್ಯರ್ಥಿ?

ಚಿತ್ರದುರ್ಗ



ಕಾಂಗ್ರೆಸ್ ಗದ್ದಲದ ಹಿಂದೆ ಉಮಾಪತಿಯ ಕಿತಾಪತಿ

ಶ್ರೀರಂಗಪಟ್ಟಣ




ರವೀಂದ್ರ ಜೆಡಿಎಸ್‌ಗೆ ಬಂದ್ರೆ ರೈತನಾಯಕನ ಕತೆ ಏನು?

ಯಡ್ಡಿ ಶಿಷ್ಯನ ಸುತ್ತ



ಕಿಡ್ನಾಪ್ ಆದ ಈಶೂ ಬಂಟನ ಬಳಿ ಇದ್ದದ್ದು ಯಾರ ಸಿಡಿ?



ಸಮೀಕ್ಷೆಗಳ ಸಂಕೋಲೆ: ಚಡ್ಡಿ ಪಡೆಯ ಚಡಪಡಿಕೆ

ಗೊಬೆಲ್ಸ್ ಸಹಾ ಆತ್ಮಹತ್ಯೆ ಮಾಡಿಕೊಂಡೇ ಸತ್ತಿ

ಅಂಚಿನಿಂದ....




ಡಾ.ವಾಸು ಎಚ್.ವಿ.



ಹಿಟ್ಲರ್



ಇವಾ ಬ್ರೌನ್



ಗೊಬೆಲ್ಸ್



ಗೊಬೆಲ್ಸ್ ಪ

ಏಪ್ರಿಲ್ 30 1945ರಂದು ಹಿಟ್ಲರ್ ಆತ್ಮಹತ್ಯೆ ಮಾಡಿಕೊಂಡ. ಅಷ್ಟು ಹೊತ್ತಿಗೆ ಸೋವಿಯತ್ ಒಕ್ಕೂಟದ ಸೈನ್ಯ ಜರ್ಮನಿಯನ್ನು ಸೋಲಿಸಿಯಾಗಿತ್ತು. ಬರ್ಲಿನ್ ನಗರವನ್ನು ಸಂಪೂರ್ಣ ವಶಮಾಡಿಕೊಳ್ಳುವುದಷ್ಟೇ ಬಾಕಿಯಿತ್ತು. ಹಿಂದಿನ ರಾತ್ರಿ ಹಿಟ್ಲರನೆಂಬ ಈ ವಿಕ್ಷಿಪ್ತ ವ್ಯಕ್ತಿ ಇವಾ ಬ್ರೌನ್ ಎಂಬಾಕೆಯನ್ನು ಮದುವೆಯಾಗಿದ್ದ! ಮದುವೆಯ ನಂತರ 'ವೆಡ್ಡಿಂಗ್ ಬ್ರೇಕ್‌ಫಾಸ್ಟ್' ಸೇವಿಸಿ, ತನ್ನ ಕಡೆಯ ಆದೇಶವನ್ನೂ, ವಿಲ್ ಅನ್ನೂ ಕಾರ್ಯದರ್ಶಿಗೆ ಹೇಳಿ ಬರೆಸಿದ. ಅದರಲ್ಲಿದ್ದ ಹಲವು ಸಂಗತಿಗಳಲ್ಲಿ ಗೊಬೆಲ್ಸ್‌ಅನ್ನು ಜರ್ಮನಿಯ ಛಾನ್ಸಲರ್ ಮಾಡಿ ಆದೇಶಿಸಿದ್ದೂ ಒಂದಾಗಿತ್ತು. ಅದೇದಿನ ಮಧ್ಯಾಹ್ನ ಹಿಟ್ಲರ್ ತನಗೆ ತಾನೇ ಗುಂಡಿಕ್ಕಿಕೊಂಡು ಸತ್ತ.

ಮೇ 1ರಂದು ಗೊಬೆಲ್ಸ್ ಜರ್ಮನಿಯ ಛಾನ್ಸೆಲರ್ ಆದ. ಜರ್ಮನಿಯ ಅತೀದೊಡ್ಡ ಕಾರ್ಯನಿರ್ವಾಹಕ ಹುದ್ದೆಯಿಂದ ಆತ ಮಾಡಿದ ಒಂದೇ ಕೆಲಸವೆಂದರೆ, ಸೋವಿಯತ್ ಒಕ್ಕೂಟದ ಸೈನ್ಯದ ಕಮ್ಯಾಂಡರ್‌ಗೆ ಪತ್ರ ಬರೆದಿದ್ದು. ಹಿಟ್ಲರ್ ಸತ್ತನೆಂದೂ, ಕದನವಿರಾಮ ಘೋಷಿಸಬೇಕೆಂದೂ ಅದರಲ್ಲಿ ಕೋರಲಾಗಿತ್ತು. ಸೋವಿಯತ್ ಕಮ್ಯಾಂಡರ್ ಚ್ಯುಕೊವ್ ಅದನ್ನು ಒಪ್ಪದೇ, ಸೈನ್ಯವನ್ನು ಮುನ್ನಡೆಸಿದ್ದರಿಂದ ಬರ್ಲಿನ್ ಸಂಪೂರ್ಣ ಅವರ ವಶವಾಯಿತು. ಅದೇ ದಿನ ಸಂಜೆ ಗೊಬೆಲ್ಸ್‌ನ ಸೂಚನೆಯಂತೆ ಆತನ ಆರೂ ಮಕ್ಕಳಿಗೆ ಮತ್ತು ಬರಿಸುವ ಔಷಧ ನೀಡಿ, ಅವರು ಮಲಗಿದನಂತರ ಬಾಯೊಳಗೆ ಸಯನೈಡ್ ತುರುಕಿ ಸಾಯಿಸಲಾಯಿತು. ಅದರ ನಂತರ ರಾತ್ರಿ ಗೊಬೆಲ್ಸ್ ಮತ್ತು ಆತನ ಪತ್ನಿ ಪಕ್ಕದ ಪ್ರತಿಷ್ಠಿತ ಉದ್ಯಾನದಲ್ಲಿ ಆತ್ಮಹತ್ಯೆ ಮಾಡಿಕೊಂಡು ಸತ್ತರು.

ಹಿಟ್ಲರ್ ಆತ್ಮಹತ್ಯೆ ಮಾಡಿಕೊಂಡು ಸತ್ತಿದ್ದು ಎಲ್ಲರಿಗೂ ಗೊತ್ತಿದೆ. ಆದರೆ, ಹಿಟ್ಲರನ ಸುಳ್ಳಿನ ಫ್ಯಾಕ್ಟರಿಯನ್ನು ನಿರ್ವಹಿಸುತ್ತಿದ್ದ ಮತ್ತು ಅದರಲ್ಲಿ ವಿಶೇಷ ಪರಿಣಿತ ಪಡೆದಿದ್ದ ಗೊಬೆಲ್ಸ್ ಒಂದು ದಿನದ ಮಟ್ಟಿಗೆ ಜರ್ಮನಿಯ ಛಾನ್ಸೆಲರ್ ಆಗಿದ್ದ ಸಂಗತಿ ಹೆಚ್ಚಿನವರಿಗೆ ಗೊತ್ತಿಲ್ಲ, ಆತ ಕುಟುಂಬ ಸಮೇತ ಆತ್ಮಹತ್ಯೆ ಮಾಡಿಕೊಂಡಿದ್ದಂತೂ ಬಹುತೇಕರು ಕೇಳಿಲ್ಲ.

ನಮ್ಮ ದೇಶದಲ್ಲಿ ಸುಳ್ಳಿನ ಫ್ಯಾಕ್ಟರಿಗಳು ದೊಡ್ಡ ಪ್ರಮಾಣದಲ್ಲಿ ಚಾಲೂ ಆಗಿ ಬಹಳ ಕಾಲವಾಯಿತು. ಬಹುಶಃ ಅವು ಇತಿಹಾಸದಲ್ಲೇ ಅತೀಹೆಚ್ಚು ಸಕ್ರಿಯವಾಗಿರುವುದು ಈಗಲೇ ಆಗಿದೆ. ದುರಂತವೆಂದರೆ, ಅದು ಕೇವಲ ಒಬ್ಬ ವ್ಯಕ್ತಿಯ ಮೇಲುಸ್ತುವಾರಿಯಲ್ಲಿ ನಡೆಯುತ್ತಿರುವ ಒಂದು ಫ್ಯಾಕ್ಟರಿಯಾಗಿಲ್ಲ. ನೂರಾರು ಫ್ಯಾಕ್ಟರಿಗಳು ಸಕ್ರಿಯವಾಗಿವೆ ಮತ್ತು ದೇಶದ ಗಣನೀಯ ಸಂಖ್ಯೆಯ ಮಾಧ್ಯಮಗಳು (ಅದರಲ್ಲೂ ಟಿವಿ ಚಾನೆಲ್‌ಗಳು) ಅವನ್ನು ಉತ್ಪಾದಿಸುವ ಮತ್ತು ಹರಡುವ ಕೆಲಸ ಮಾಡುತ್ತಿವೆ. ಅವನ್ನು ಪುನರುತ್ಪಾದಿಸುವ ಕೆಲಸದಲ್ಲಿ ದೇಶದ ಅತ್ಯಂತ ಸಾಮಾನ್ಯ ಜನರು ಸಾಮಾಜಿಕ ಜಾಲತಾಣಗಳ ಮೂಲಕ ತೊಡಗಿಕೊಂಡಿದ್ದಾರೆ. ಈ ಹಸೀ ಸುಳ್ಳುಗಳಿಗೆದುರಾಗಿ, ಪುರಾವೆಯ ಸಮೇತ ಹಾಗೂ ತರ್ಕದ ಸಮೇತ ಸತ್ಯವನ್ನು ಮುಂದಿಟ್ಟರೂ ಒಪ್ಪದೇ ಇರಲು ಬೇಕಾದ ತರ್ಕವನ್ನು ಮತ್ತು ಕುರುಡನ್ನು ಬೆಳೆಸಿಕೊಂಡಿರುವ 'ಸುಶಿಕ್ಷಿತ ಜನ'ರ ಸಮೂಹ ದೇಶದಲ್ಲಿದೆ. ಸತ್ಯವನ್ನು ಒಪ್ಪದಿರಲು ಅವರಲ್ಲಿ ಸಿದ್ಧ ಅತಾರ್ಕಿಕ ವಾದಗಳಿರುತ್ತವೆ.


ಇದನ್ನು ಸತ್ಯದಿಂದ ಎದುರಿಸುವುದಲ್ಲದೇ ಬೇರೆ ದಾರಿ ಇಲ್ಲ. ಆದರೆ ತರ್ಕ ಮತ್ತು ನಿಜವಾದ ಮಾಹಿತಿಯನ್ನು ಮುಂದಿಡುವುದರಿಂದಷ್ಟೇ ಅದನ್ನು ಎದುರಿಸಲು ಸಾಧ್ಯವಾಗದು ಎಂದು ಬಗೆದಿರುವ ಕೆಲವರು ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕೆಂದು ಬಯಸಿ, ಅಲ್ಪ ಸ್ವಲ್ಪ ಸುಳ್ಳು ಸೇರಿಸಿ ತಿರುಗೇಟು ಕೊಡುತ್ತಿರುವುದೂ ಉಂಟು. ಮೊನ್ನೆನ ಪಾಟ್ನಾ ರ್‍ಯಾಲಿಯ ಕುರಿತಾಗಿ ಲಾಲೂ ಪ್ರಸಾದ್ ಯಾದವ್ ಅವರ ಅಕೌಂಟಿನಿಂದ ಅಂತಹದೊಂದು ಸುಳ್ಳನ್ನು ಸೇರಿಸಿದ ಫೋಟೋವನ್ನು ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡಲಾಯಿತು. ನಮ್ಮ ಸಂಪಾದಕರು ಅದನ್ನು ಶೇರ್ ಮಾಡಿದ್ದರು. ಆದರೆ, ಆ ಫೋಟೋ ಅಸಲೀ ಫೋಟೋ ಅಲ್ಲ; ಫೋಟೋಶಾಪ್ ಬಳಸಿ ಜನರ ಪ್ರಮಾಣವನ್ನು ಹಿಗ್ಗಿಸಲಾಯಿತೆಂದು ಗೊತ್ತಾದ ತಕ್ಷಣ ಮೂಲ ಫೋಟೋ ಮತ್ತು ಫೋಟೋಶಾಪ್ ಮಾಡಿದ ಫೋಟೋ ಎರಡನ್ನೂ ಹಾಕಿ ಇನ್ನೊಮ್ಮೆ ಬರೆದರು. ನೀವು ಮೊದಲು ಹಾಕಿದ್ದ ಫೋಟೋ ಸರಿಯಿಲ್ಲ ಎಂದು ಬೇರೆಯವರು ಹೇಳಿ, ಇವರನ್ನೇನೂ ಟ್ರೋಲ್ ಮಾಡಿರಲಿಲ್ಲ. ತಾವೇ ಮುಂದಾಗಿ ಸತ್ಯ ತಿಳಿಸುವ ಕೆಲಸ ಮಾಡಿದರು. ಹಾಗೆ ನೋಡಿದರೆ ಲಾಲೂ ಅವರ ರ್‍ಯಾಲಿಗೆ ನಿಜವಾಗಲೂ ಸೇರಿದ ಜನರ ಸಂಖ್ಯೆಯೂ ಬಹಳ ದೊಡ್ಡದಾಗಿತ್ತು! ಅಷ್ಟರಮಟ್ಟಿಗಿನ ವ್ಯತ್ಯಾಸವೂ ಉಂಟಾಗಬಾರದೆಂಬ ಕಾಳಜಿ ಅವರದ್ದಾಗಿತ್ತು. ಇದು ಸುಳ್ಳನ್ನು ಎದುರಿಸುವ ನಿಜವಾದ ದಾರಿಯಾಗಿದೆ.

ವಾಸ್ತವದಲ್ಲಿ, ನಿಜಕ್ಕೂ ನಡೆದಿರುವ ಸಂಗತಿಯನ್ನೇ ಕಚ್ಚಾವಸ್ತುವನ್ನಾಗಿ ತೆಗೆದುಕೊಂಡು, ಅದನ್ನು ಸಾವಿರಾರು ಪಟ್ಟು ಹಿಗ್ಗಿಸುವುದು ಮಾತ್ರವಲ್ಲದೇ, ಇರದೇ ಇರುವ ಸಂಗತಿಯನ್ನು ಇದ್ದಂತೆ ಬರೆಯುವುದರಲ್ಲಿ ಪ್ರಾವೀಣ್ಯ ಪಡೆದಿರುವ ದೊಡ್ಡ ಪಡೆ ದೇಶದಲ್ಲಿದೆ. ಆದರೆ, ಬೇರೆಯವರು ಉದ್ದೇಶಪೂರ್ವಕವಾಗಿಯೋ, ಅಕಸ್ಮಾತ್ತಾಗಿಯೋ ಒಂದು ಸಣ್ಣ ತಪ್ಪನ್ನು ಮಾಡಿದರೂ ಈ ಪಡೆ ಅದನ್ನೇ ಹಿಗ್ಗಿಸಿ ಪ್ರಚಾರ ಮಾಡುತ್ತದೆ. ಇದರಿಂದ ಎರಡರಲ್ಲಿ ಒಂದು ಉದ್ದೇಶ ಸಾಧನೆಯಾಗುತ್ತದೆ. ಒಂದು, ತಮ್ಮ ಪರಿವಾರವು ದೇಶವನ್ನು ಶುದ್ಧೀಕರಿಸುವ ಕೆಲಸ ಮಾಡುತ್ತಿದ್ದರೆ ಉಳಿದವರು ತೊಂದರೆ ಕೊಡುತ್ತಿದ್ದಾರೆ ಎಂದು ಬಿಂಬಿಸಲಾಗುತ್ತದೆ. ಎರಡು, ಎಲ್ಲರೂ ಸುಳ್ಳು ಹೇಳುವವರೇ ಬಿಡಿ ಎಂಬ ಸಾರಾಸಗಟು ಅಭಿಪ್ರಾಯ ಮೂಡುವಂತೆ ಆಗುತ್ತದೆ. ಹೀಗಾಗಿ ಸುಳ್ಳನ್ನು ಸತ್ಯದಿಂದ ಎದುರಿಸುವ ಮಾರ್ಗ ಮಾತ್ರ ಗೆಲ್ಲಲು ಸಾಧ್ಯ. ಈ ಸತ್ಯ ಗೆದ್ದೇ ಗೆಲ್ಲುತ್ತದೆ ಎಂಬುದರಲ್ಲಿ ಸಂಶಯವಿಲ್ಲ.

ಆದರೆ, ನಮ್ಮನ್ನು ಕಾಡಬೇಕಾದ ಮತ್ತೊಂದು ಸಂಗತಿಯಿದೆ. ಅದೇನೆಂದರೆ, ಗೊಬೆಲ್ಸ್ ಎಂಬ ಸುಳ್ಳಿನ ಫ್ಯಾಕ್ಟರಿಯು ಅಂತಿಮವಾಗಿ ಕುಟುಂಬ ಸಮೇತ ಆತ್ಮಹತ್ಯೆ ಮಾಡಿಕೊಂಡಿದ್ದು. ಈ ಗೊಬೆಲ್ಸ್‌ನ ಖಾತೆಯ ಹೆಸರೇ 'ಪ್ರಾಪಗಾಂಡಾ ಮಿನಿಸ್ಟ್ರಿ' (ಪ್ರಸಾರ ಖಾತೆ). ಇದು ನಮ್ಮ ವಾರ್ತಾ ಮತ್ತು ಪ್ರಸಾರ ಇಲಾಖೆಯ ರೀತಿಯದ್ದಲ್ಲ. ಅದು ಪರ್ಯಾಯ ಸಾಂಸ್ಕೃತಿಕ ಮಾದರಿಯನ್ನು ನಿರ್ಮಿಸುವುದು. ಪರ್ಯಾಯ ನಾಗರಿಕತೆಯ ಮಾದರಿಯನ್ನು ಮುಂದಿಡುವುದು. ಸುಳ್ಳುಗಳ ಅಡಿಪಾಯದ ಮೇಲೆ ಸುಳ್ಳುಗಳ ಸೌಧಗಳನ್ನು ಕಟ್ಟಿ, ನರಮೇಧಕ್ಕೂ ಹೇಸದ ಸಾರ್ವಜನಿಕ ಮನಸ್ಥಿತಿಯನ್ನು ರೂಪಿಸುವುದು. ಇದನ್ನು ಗೊಬೆಲ್ಸ್ ಮತ್ತು ನಾಝೀ ಸಂಘಟನೆಗಳು ಎಷ್ಟು ವ್ಯವಸ್ಥಿತವಾಗಿ ಮಾಡಿದರೆಂದರೆ, ಇಡೀ ಜಗತ್ತು ಹತ್ಯಾಕಾಂಡ ಕೇಳಿ ಬೆಚ್ಚಿ ಬಿದ್ದರೆ, ಅದನ್ನು ಕಣ್ಣಾರೆ ಕಂಡ ಜರ್ಮನಿಯ ಜನರಿಗೆ ಆ ರೀತಿಯ ಆಘಾತ ಆಗಿರಲಿಲ್ಲ. ಅವರಿಗೆ ಜರ್ಮನಿ ಮಾತ್ರವಲ್ಲ, ಇಡೀ ಜಗತ್ತನ್ನು ಆಳುವ ಶಕ್ತಿ ಸಾಮರ್ಥ್ಯಗಳಿರುವ ಮಹಾನ್ ಜನಾಂಗ ತಾವೆಂಬ ಅಫೀಮನ್ನೂ ತಿನ್ನಿಸಲಾಗಿತ್ತು! ಆದರೆ, ಅದರ ನೇತಾರ ಕೊನೆಯಲ್ಲಿ ತನಗೆ ತಾನೇ ಗುಂಡಿಕ್ಕಿಕೊಂಡ. ಕಡೆಯವರೆಗೂ ಆತನನ್ನು ಬಿಟ್ಟು ಓಡದ ನಿಷ್ಠಾವಂತ ಸುಳ್ಳಿನ ಫ್ಯಾಕ್ಟರಿ ಗೊಬೆಲ್ಸ್ ಸಹ ತಾನೇ ಕೈಯ್ಯಾರೆ ಕೊಂದುಕೊಂಡ. ಅದಕ್ಕೆ ಮುಂಚೆ ಆತನ ಮಕ್ಕಳಿಗೆ ಅಫೀಮು ತಿನ್ನಿಸಿ, ಅವರ ಸಾವನ್ನು ಅವರು ಕಾಣದಂತೆ ಮಾಡಿದರು. ಜರ್ಮನಿಯ ಸಾಮಾನ್ಯ ಜನರ ಮನಸ್ಥಿತಿಯೂ ಜನಾಂಗ ಶ್ರೇಷ್ಠತೆ ಮತ್ತು ದ್ವೇಷದ ಅಫೀಮನ್ನು ತಿಂದು ಅದಕ್ಕಿಂತ ... ಸತ್ತುಹೋಗಿತ್ತು.



ಗೊಬೆಲ್ಸ್, ಆತನ ಪತ್ನಿ, ಆರು ಮಕ್ಕಳು



ಭಾರತದ ಪರಿಸ್ಥಿತಿ ಸಂಕೀರ್ಣವಾದುದು. ... ಹೋಲಿಸಿದರೆ ಇದು ಭಾರೀ ದೊಡ್ಡ ದೇಶ. ... ಬೇರೆ. ಸಾವಿರಾರು ಜಾತಿಗಳು, ನೂರಾರು ... ಸುಲಭದಲ್ಲಿ ಏಕರೂಪಕ್ಕೆ ಎಳೆದು ತರಲಾಗದ ... ಸಂಸ್ಕೃತಿಗಳು. ಈ ದೇಶದ ಈ ಕಾಲದ ಅ... ಸಂಕೀರ್ಣವಾದುದು. ಏಕಕಾಲದಲ್ಲಿ ... ಯಾಮಾರಿಸುವುದು ಸುಲಭವಲ್ಲ. ನೋಟು ರ... ಹುಸಿ ಸರ್ಜಿಕಲ್ ಸ್ಟ್ರೈಕ್‌ಗಳನ್ನು ... ಮಾಡುತ್ತಿರಲೇಬೇಕಾಗುತ್ತದೆ. ಏಕೆಂದರೆ, ಸುಳ್ಳಿನ ... ಮಾಲೀಕರು ಹುಲಿ ಸವಾರಿ ಮಾಡುತ್ತಿದ್ದಾ... ಸಾಕಿದ ಹುಲಿಯಾದರೂ, ನರಮಾಂಸದ ರುಚಿ ... ಹುಲಿ. ಅವರು ಇಳಿದೊಡನೆ ಅದು ... ಬೇಟೆಯಾಡುತ್ತದೆ. ಆ ಹುಲಿಯು ಅವರ ... ವಿಸ್ತರಣೆಯಾದ್ದರಿಂದ, ಆ ಬೇಟೆಯೂ ... ಆಗಿರುತ್ತದೆ.

ಜರ್ಮನಿಯಲ್ಲಿ ಒಬ್ಬ ಗೊಬೆಲ್ಸ್ ಮತ್ತು ... ಯಂತ್ರಾಂಗವಿತ್ತು. ಇಲ್ಲಿ ಸಾವಿರಾರು ಫ್ಯಾಕ್ಟರಿಗಳ... ಮಾಧ್ಯಮಗಳು ಮತ್ತು ಸಾಮಾಜಿಕ ಜಾಲತಾಣ... ಹಸೀ ಹಸೀ ಸುಳ್ಳನ್ನು ಯಾವ ಮುಜುಗರ... ಹರಡುವ ಕೋಟ್ಯಾಂತರ ಸುಶಿಕ್ಷಿತರು ಇದ್ದಾ... ನಮ್ಮ ಮನೆ ಮನೆಗಳಲ್ಲೂ ಇದ್ದಾರೆ. ಅಂದು ... ಹೊಸ ಮಾಧ್ಯಮಗಳಾಗಿದ್ದ ರೇಡಿಯೊ ... ಸಿನೆಮಾವನ್ನು ಅವರು ವ್ಯವಸ್ಥಿತವಾಗಿ ಬಳಸಿದ್ದ... ಹಾಗೆಯೇ, ಸಾಪೇಕ್ಷವಾಗಿ ಹೊಸ ಮಾಧ್ಯ... ಟಿವಿ ಚಾನೆಲ್‌ಗಳು ಮತ್ತು ಸಾಮಾಜಿಕ ಜಾಲ... ಬಳಸಿಕೊಳ್ಳಲಾಗುತ್ತಿದೆ.

ಇವೆಲ್ಲಾ ಏನೇ ಇರಲಿ, ನಮ್ಮನ್ನು ... ಸಂಗತಿಯ ವಿಚಾರಕ್ಕೆ ಮರಳಿ ಬರುವ... ಕೊನೆಗೊಂದು ದಿನ ಸುಳ್ಳುಗಳು ... ಮಾಡಿಕೊಳ್ಳಬೇಕಾಗುತ್ತದೆ. ಆಗ ಈ ಫ್ಯಾಕ್ಟರಿಗಳ... ಸಿದ್ಧಪಡಿಸಿದ ವಸ್ತುಗಳನ್ನು ವಿತರಣೆ ಮಾ... ಕೋಟ್ಯಾಂತರ ಜನರ ಕತೆ ಏನಾಗುತ್ತದೆ? ... ಮನೆಗಳಲ್ಲೂ ಇರುವ, ನಮ್ಮ ನೆರೆಯವರ... ಇವರೆಲ್ಲರ ಕತೆ ಏನಾಗುತ್ತದೆ? ಈ ದೇಶದಲ್ಲಿ ದ... ಮಾರಣಹೋಮ ಮತ್ತೆ ಮತ್ತೆ ನಡೆಯ... ನಡೆಯದಿರಬಹುದು. ಆದರೆ, ಈ ದೊಡ್ಡ... ವಿತರಣೆಗಾರರಂತೂ ಆತ್ಮಹತ್ಯೆ ಮಾಡಿಕೊಳ್ಳ... ಅವರು ದೈಹಿಕವಾಗಿ ಬದುಕಿರಬಹು... ನರಮಾಂಸದ ರುಚಿ ಹತ್ತಿದ ಹುಲಿಯ ... ಇರುತ್ತಾರಾದ್ದರಿಂದ ದಿಕ್ಕೆಟ್ಟು ಹೋಗುತ್ತಾರೆ. ... ಅಫೀಮನ್ನು ಒದಗಿಸುತ್ತಿದ್ದ ಸವಾರಿಗಾರರು ... ಸೇರಿರುತ್ತಾರೆ. ಅಸಾಧ್ಯವಾಗಿ ನಾರುವ, ... ಪಿತಗುಡುವ ಆ ತಿಪ್ಪೆಗಳಲ್ಲಿ, ಅಫೀಮಿನ ... ಮಾಡುತ್ತಾ, ಕೆದಕುತ್ತಾ ಕೆದಕುತ್ತಾ ಆಳಕ್ಕಿಳಿಯ... ಅದು ಸಾವೋ, ಸತ್ತ ನಂತರ ಭೀಕರ ಸ್ಥಿತಿಗೆ ... ಭೂತಗಳೋ ಎಂಬಂತೆ ಕಾಣುತ್ತಿರುತ್ತದೆ.

ನಮ್ಮ ದೇಶದ ಸಹವಾಸಿಗಳಿಗೆ ಈ ಸ್ಥಿತಿ ... ಕಾರುಣ್ಯವನ್ನೂ, ದಯೆಯನ್ನೂ ಬೋಧಿಸಿದ ... ಧರ್ಮ ನೆಲೆತಾಳಿದ ನಾಡಿದು. ಇಲ್ಲಿ ನಮ... ಹುಟ್ಟಿ ಬೆಳೆದ ಬಂಧುಗಳಿಗೆ ಅಂತಹ ಸ್ಥಿತಿ ... ನೋಡಿಕೊಳ್ಳುವ ಕರ್ತವ್ಯ ನಮ್ಮದೇ ಆಗಿದೆ.

ಹಾಗಾಗಿ ಅಸಹನೆಗೆ ಪ್ರತಿಯಾಗಿ ಅಸ... ಬದಲಿಗೆ ಸುಳ್ಳು, ದ್ವೇಷಕ್ಕೆ ಬದಲಿ ದ್ವೇಷ ... ಹರಡುವುದು ಬೇಡ. ನಮ್ಮ ಸಹವಾ... ಪ್ರೀತಿಯಿಟ್ಟುಕೊಳ್ಳೋಣ. ನಿಷ್ಠುರ ಸತ್ಯ ಮತ್ತು ... ಅಸತ್ಯವನ್ನು ಎದುರಿಸುವುದು ಸಾಧ್ಯವಾಗಲಿ.

ಸುಳ್ಳು ಸುದ್ದಿಗಳ ಯುಗದಲ್ಲಿ...

ಕಂಡಹಾಗೆ




• ಗೌರಿ ಲಂಕೇಶ್
editorlankesh@gmail.com

ಈ ವಾರ ಮಿತ್ರ ಡಾ. ವಾಸು ಗೊಬೆಲ್ಸ್ ತರಹ ಇಲ್ಲೂ ಸುಳ್ಳುಗಳನ್ನು ಸೃಷ್ಟಿಸುವ ಫ್ಯಾಕ್ಟರಿಗಳ ಬಗ್ಗೆ ಬರೆದಿದ್ದಾರೆ. ಮೋದಿ ಭಕ್ತರೇ ಹೆಚ್ಚಾಗಿ ನಡೆಸುವ ಈ ಸುಳ್ಳು ಫ್ಯಾಕ್ಟರಿಗಳು ಎಂತೆಂತಹ ಅನಾಹುತಗಳನ್ನು ಮಾಡುತ್ತವೆ ಎಂದು ವಿವರಿಸಲು ಇಲ್ಲಿ ಪ್ರಯತ್ನ ಮಾಡುತ್ತೇನೆ.

ಮೊನ್ನೆ ತಾನೆ ಗಣೇಶನ ಹಬ್ಬ ನಡೆಯಿತಲ್ಲ... ಆಗ ಚಡ್ಡಿಗಳು ಒಂದು ಸುಳ್ಳು ಸುದ್ದಿಯನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಿಯಬಿಟ್ಟರು. ಅದೇನೆಂದರೆ ಈ ವರ್ಷ ಗಣೇಶನ ಮೂರ್ತಿಯನ್ನು ಕೂರಿಸಲು ಹತ್ತು ಲಕ್ಷ ರೂಪಾಯಿಗಳನ್ನು ಡಿಪಾಸಿಟ್ ಕಟ್ಟಬೇಕಂತೆ, ಗಣೇಶನ ಮೂರ್ತಿ ಕೂಡ ಇಂತಿಷ್ಟು ಎತ್ತರವನ್ನು ಮೀರಿರಬಾರದಂತೆ, ಸರ್ಕಾರ ಹೇಳಿದ ನಿರ್ದಿಷ್ಟ ದಿನಗಳಲ್ಲಿ ಮಾತ್ರ ಗಣೇಶನ ಮೂರ್ತಿಯನ್ನು ಕೂರಿಸಬಹುದಂತೆ, ಅನ್ಯ ಧರ್ಮೀಯರು ವಾಸಿಸುವ ರಸ್ತೆಗಳಲ್ಲಿ ಮೆರವಣಿಗೆ ತೆಗೆದುಕೊಂಡು ಹೋಗಬಾರದಂತೆ, ಮೆರವಣಿಗೆಯಲ್ಲಿ ಪಟಾಕಿ ಹೊಡೆಯಬಾರದಂತೆ... ಎಂದೆಲ್ಲಾ ಸುದ್ದಿ ಹಬ್ಬಿಸಿದರು. ಇದು ಅದೆಷ್ಟು ವ್ಯಾಪಕವಾಗಿ ಹಬ್ಬಿತೆಂದರೆ ಕೊನೆಗೆ ರಾಜ್ಯದ ಡಿಜಿಪಿ ಆರ್.ಕೆ.ದತ್ತ ಅವರೇ ಪತ್ರಿಕಾಗೋಷ್ಠಿ ಕರೆದು "ಅಂತಹ ಯಾವ ನಿಯಮಗಳನ್ನು ಸರ್ಕಾರ ಜಾರಿಗೆ ತಂದಿಲ್ಲ. ಅದೆಲ್ಲಾ ಸುಳ್ಳು" ಎಂದು ಸ್ಪಷ್ಟಪಡಿಸಬೇಕಾಯಿತು.

ಈ ಸುದ್ದಿಯ ಮೂಲವನ್ನು ಹುಡುಕಿಕೊಂಡು ಹೋದಾಗ ಸಿಕ್ಕಿದ್ದು ಪೋಸ್ಟ್‌ಕಾರ್ಡ್.ನ್ಯೂಸ್ ಎಂಬ ಸುದ್ದಿ ಜಾಲತಾಣ. ಇದು ಹೇಳಿಕೇಳಿ ಹಿಂದೂತ್ವವಾದಿಗಳ ಗುಂಪು. ಪ್ರತಿನಿತ್ಯ ಸುಳ್ಳು ಸುದ್ದಿಗಳನ್ನು ಸೃಷ್ಟಿಸಿ ಅವುಗಳನ್ನು ಹರಿಬಿಡುವುದೇ ಇದರ ಕೆಲಸ. ಆಗಸ್ಟ್ 11ರಂದು ಈ





ಪೋಸ್ಟ್‌ಕಾರ್ಡ್.ನ್ಯೂಸ್ ವೆಬ್‌ಸೈಟಿನಲ್ಲಿ ನಿಪಿಕಾ ರಾಮ್ ಎಂಬಾಕೆ 'ಕರ್ನಾಟಕದಲ್ಲಿ ತಾಲಿಬಾನ್ ಆಡಳಿತ' ಎಂಬ ಶೀರ್ಷಿಕೆಯಡಿ ಇಂತಹ ಸುಳ್ಳುಗಳು ಇರುವ ವರದಿಯೊಂದನ್ನು ಬರೆದಿದ್ದಳು. ಅದನ್ನು ಎಲ್ಲೆಡೆ ಹಬ್ಬಿಸುವುದರಲ್ಲಿ ಚಡ್ಡಿಗಳು ಯಶಸ್ವಿಯಾಗಿದ್ದರು. ಅದರಲ್ಲೂ ಸಿದ್ದು ಸರ್ಕಾರದ ವಿರುದ್ಧ ಕೆಂಡಕಾರುತ್ತಿರುವವರು ಇದನ್ನು ತಮ್ಮ ಅಸ್ತ್ರವಾಗಿ ಬಳಸಿಕೊಂಡಿದ್ದರು. ವಿಪರ್ಯಾಸದ ಸಂಗತಿ ಯಾವುದೆಂದರೆ ಜನ ಇಂತಹ ಸುಳ್ಳು ಸುದ್ದಿಗಳನ್ನು ಕಣ್ಣು ಕಿವಿ ಮಾತ್ರವಲ್ಲದೆ ತಮ್ಮ ಮೆದುಳನ್ನೂ ಮುಚ್ಚಿ ಸುಲಭವಾಗಿ ನಂಬಿಬಿಡುವುದು.

ಹೋದವಾರ ರಾಮ್ ರಹೀಮ್ ಎಂಬ ಢೋಂಗಿ ಬಾಬಾ ಅತ್ಯಾಚಾರವೆಸಗಿದ್ದಕ್ಕಾಗಿ ನ್ಯಾಯಾಲಯ ಆತನ ಬಂಧನವನ್ನು ಆದೇಶಿಸಿದಾಗ ಆ ಅತ್ಯಾಚಾರಿಯೊಂದಿಗೆ ಬಿಜೆಪಿ ಪಕ್ಷದ ಸಖ್ಯ ಎಂತಹದ್ದೆಂದು ತೋರಿಸಲು ಹಲವಾರು ರಾಜಕಾರಣಿಗಳು ಆತನೊಂದಿಗೆ ಇರುವ ಫೋಟೋಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಲಾರಂಭಿಸಿದವು. ಮೋದಿ ಆದಿಯಾಗಿ ಹರಿಯಾಣ ರಾಜ್ಯದ ಚಡ್ಡಿ ಶಾಸಕರೂ ಆತನ ಮುಂದೆ ಹಲ್ಲು ಕಿರಿಯುತ್ತಿದ್ದ ಫೋಟೋ ಮತ್ತು ವೀಡಿಯೋಗಳವು. ಇದೆಲ್ಲದರಿಂದ ಸಹಜವಾಗಿಯೇ ಚಡ್ಡಿಗಳಿಗೆ ಮುಜುಗರವಾಯಿತು. ಆಗ ಅವರು ಏನು ಮಾಡಿದರೆಂದರೆ ಅದೇ ಬಾಬಾನ ಪಕ್ಕ ಕೇರಳದ ಸಿಪಿಎಂ ಮುಖ್ಯಮಂತ್ರಿ ಪಿಣರಾಯಿ ವಿಜಯ್ ಕುಳಿತಿರುವ ಚಿತ್ರವನ್ನು ತೇಲಿಬಿಟ್ಟರು. ಆದರೆ ಅದು ಫೋಟೋಶಾಪ್ ಮಾಡಲಾಗಿದ್ದ ಚಿತ್ರವಾಗಿತ್ತು. ಏನಿತ್ತೆಂದರೆ ಕಾಂಗ್ರೆಸ್‌ನ ಚಾಂಡಿ ದೇಹಕ್ಕೆ ಪಿಣರಾಯಿ ಅವರ ರುಂಡವನ್ನು ಅಂಟಿಸಿದ್ದರು ಚಡ್ಡಿಗಳು. ಆದರೆ ಅವರ ಆಟ ಹೆಚ್ಚು ಹೊತ್ತು ನಡೆಯಲಿಲ್ಲ, ಯಾಕೆಂದರೆ ಕೆಲವರು ಮೂಲಚಿತ್ರವನ್ನು ಪತ್ತೆ ಹಚ್ಚಿ, ಅದನ್ನು ಹೇಗೆ ತಿರುಚಲಾಗಿದೆ ಎಂದು ತೋರಿಸಿದ್ದರು.

ವಾಸ್ತವವಾಗಿ ಹೋದ ವರ್ಷದ ತನಕ ಚಡ್ಡಿಗಳ ಇಂತಹ ಸುಳ್ಳು ಸುದ್ದಿಗಳಿಗೆ ಕಡಿವಾಣ ಹಾಕುವುದಿರಲಿ, ಅವರ ಸುಳ್ಳುತನವನ್ನು ಎತ್ತಿ ತೋರಿಸುವವರೇ ಇರಲಿಲ್ಲ. ಆದರೀಗ ಹಲವರು ಅಂತಹ ಕೆಲಸಕ್ಕೆ ಮುಂದಾಗಿರುವುದು ಸ್ವಾಗತಾರ್ಹ. ಹಿಂದೆಲ್ಲಾ ಇಂತಹ ಸುಳ್ಳು ಸುದ್ದಿಗಳೇ ಚಾಲ್ತಿಗೆ ಬರುತ್ತಿದ್ದದ್ದು ಹೆಚ್ಚು, ಆದರೀಗ ಅಸಲಿ ಸುದ್ದಿಗಳೂ ಹೆಚ್ಚು ಪ್ರಚಾರ ಪಡೆಯುತ್ತಿವೆ. ಉದಾಹರಣೆಗೆ ಆಗಸ್ಟ್ 15ರಂದು ಕೆಂಪುಕೋಟೆಯಿಂದ ಮೋದಿ ಮಾಡಿದ ಭಾಷಣದ ವಿಮರ್ಶೆಯೊಂದು ಆಗಸ್ಟ್ 17ರಂದು ವೈರಲ್ ಆಯಿತು. ಅದರ ಸೃಷ್ಟಿಕರ್ತ ಧ್ರುವ್ ರಥೀ ಎಂಬಾತ. ನೋಡಲು ಕಾಲೇಜ್ ಹುಡುಗನಂತಿರುವ ಈ ಧ್ರುವ್ ರಥೀ ಕಳೆದ ಹಲವಾರು ತಿಂಗಳುಗಳಿಂದ ಮೋದಿಯ ಸುಳ್ಳುಗಳನ್ನು ವಿಶ್ಲೇಷಿಸುತ್ತಾ ವಿಡಿಯೋಗಳನ್ನು ಮಾಡಿ ಜಾಲತಾಣಗಳಲ್ಲಿ ಬಿಡುಗಡೆ ಮಾಡುತ್ತಿದ್ದಾನೆ. ಅವು ನಮ್ಮಂಥವರ ಗಮನಕ್ಕೆ ಬರುತ್ತಿದ್ದವಾದರೂ ಸಾಮಾನ್ಯ ಜನರನ್ನು ತಲುಪುತ್ತಿರಲಿಲ್ಲ. ಆದರೆ ಆಗಸ್ಟ್ 17ರಂದು ಆತ ಬಿಡುಗಡೆ ಮಾಡಿದ ವೀಡಿಯೋ ಒಂದೇ ದಿನದಲ್ಲಿ ಒಂದು ಲಕ್ಷಕ್ಕಿಂತಲೂ ಹೆಚ್ಚು ಜನರನ್ನು ತಲುಪಿತ್ತು, ಕಾರಣ ಆತ ಅದರಲ್ಲಿ ಸ್ಪಷ್ಟಪಡಿಸಿದ ಅಂಕಿಅಂಶಗಳು.

ತನ್ನ ಆಗಸ್ಟ್ 15ರ ಭಾಷಣದಲ್ಲಿ ಬೂಸಿ ಬಸ್ಯಾ ಮೋದಿ ನೋಟು ಅನಗಣ್ಯೀಕರಣದಿಂದಾಗಿ 56 ಲಕ್ಷ ಹೆಚ್ಚು ತೆರಿಗೆದಾರರು ಸೃಷ್ಟಿಯಾಗಿದ್ದಾರೆ ಎಂದಿದ್ದ, ಆದರೆ ಒಂದು ತಿಂಗಳ ಕೆಳಗೆ ರಾಜ್ಯಸಭೆಯಲ್ಲಿ ಮೋದಿ ಸರ್ಕಾರ 33 ಲಕ್ಷ ತೆರಿಗೆದಾರರು ಹೆಚ್ಚಾಗಿದ್ದಾರೆ ಎಂದಿತ್ತು, ಮೂರು ತಿಂಗಳ ಕೆಳಗೆ ಆರ್ಥಿಕ ಸಚಿವ ಅರುಣ್ ಜೈಟ್ಲಿ 91 ಲಕ್ಷ ತೆರಿಗೆದಾರರು ಹೆಚ್ಚಾಗಿದ್ದಾರೆ ಎಂದಿದ್ದ. ಆದರೆ ಆರ್ಥಿಕ ಸಮೀಕ್ಷೆಯೊಂದು ಕೇವಲ 5.4 ಲಕ್ಷ ತೆರಿಗೆದಾರರು ಹೊಸದಾಗಿ ಸೃಷ್ಟಿಯಾಗಿದ್ದಾರೆ ಎಂದಿತ್ತು. ಹಾಗಾದರೆ ಇವರಲ್ಲಿ ಯಾರು ಸತ್ಯ ನುಡಿಯುತ್ತಿದ್ದಾರೆ ಎಂಬ ಪ್ರಶ್ನೆ ಧ್ರುವ್ ರಥೀಯದಾಗಿತ್ತು.

ಇವತ್ತು ನಮ್ಮ ಮುಖ್ಯವಾಹಿನಿಯ ಮಾಧ್ಯಮಗಳು ಸರ್ಕಾರ ಅಥವಾ ಬಿಜೆಪಿ ನೀಡುವ ಅಂಕಿಅಂಶಗಳನ್ನು ಪ್ರಶ್ನಿಸದೆ ಅದೇ ವೇದವಾಕ್ಯ ಎಂಬಂತೆ ಬಿತ್ತರಿಸುತ್ತಿವೆ. ಅದರಲ್ಲೂ ಟಿವಿ ಸುದ್ದಿ ಚಾನೆಲ್‌ಗಳು ಇದರಲ್ಲಿ ಹತ್ತು ಹೆಜ್ಜೆ ಮುಂದು ಎಂದೇ ಹೇಳಬಹುದು. ಉದಾಹರಣೆಗೆ, ರಾಮನಾಥ್ ಕೋವಿಂದ್ ರಾಷ್ಟ್ರಪತಿಯಾಗಿ ಪ್ರಮಾಣ ಸ್ವೀಕರಿಸಿದ ದಿನ ಬಹಳಷ್ಟು ಇಂಗ್ಲಿಷ್ ಟಿವಿ ಚಾನೆಲ್‌ಗಳು "ಒಂದು ಗಂಟೆಯಲ್ಲೇ ಕೋವಿಂದ್ ಅವರ ಟ್ವಿಟರ್ ಫಾಲೋಯರ್ಸ್ ಸಂಖ್ಯೆ ಮೂವತ್ತು ಲಕ್ಷ ದಾಟಿತು" ಎಂದು ಅಬ್ಬರಿಸಿದ್ದವು. ಹಾಗೆ ಮಾಡುವ ಮೂಲಕ ಕೋವಿಂದ್ ಅವರಿಗೆ ಅಷ್ಟು ಜನರ ಬೆಂಬಲವಿದೆ ಎಂದು ತೋರಿಸುವುದು ಚಡ್ಡಿ ಪಟಾಲಂಗಳಂತಾಗಿರುವ ಟಿವಿ ಚಾನಲ್‌ಗಳ ಉದ್ದೇಶವಾಗಿತ್ತು. ಆದರೆ ವಾಸ್ತವವಾಗಿ ಆಗಿದ್ದೇನೆಂದರೆ, ಹಿಂದಿನ ರಾಷ್ಟ್ರಪತಿ ಪ್ರಣಬ್ ಮುಖರ್ಜಿಯವರ ಟ್ವಿಟರ್ ಅಕೌಂಟ್ 'ರಾಷ್ಟ್ರಪತಿ ಭವನ್' ಸರ್ಕಾರದ ಸ್ವತ್ತಾಗಿದ್ದು ಅದು ಸಹಜವಾಗಿಯೇ ಕೋವಿಂದ್ ಅವರ ಅಕೌಂಟಾಗಿ ಬದಲಾಗಿತ್ತು, ಹಾಗೆ ಬದಲಾದಾಗ ಮುಖರ್ಜಿ ಅವರ ಫಾಲೋಯರ್ಸ್ ಆಗಿದ್ದವರೆಲ್ಲ ಕೋವಿಂದ್ ಅವರ ಅಕೌಂಟಿಗೆ ಜಮೆ ಆಗಿದ್ದರಷ್ಟೇ. ಅಂದಹಾಗೆ ಮುಖರ್ಜಿಯವರಿಗೂ 30 ಲಕ್ಷಕ್ಕಿಂತ ಹೆಚ್ಚು ಟ್ವಿಟರ್ ಫಾಲೋಯರ್ಸ್ ಇದ್ದರು!!

ಇರಲಿ, ಈಗ ಚಡ್ಡಿಗಳ ಇಂತಹ ಸುಳ್ಳು ಸುದ್ದಿಗಳನ್ನು ಬಟಾಬಯಲು ಮಾಡಲು ಹಲವರು ಇವತ್ತು ಸಜ್ಜಾಗಿದ್ದಾರೆ. ಧ್ರುವ್ ರಥೀ ಅಂತಹ ಕೆಲಸವನ್ನು ವೀಡಿಯೋಗಳ ಮೂಲಕ ಮಾಡುತ್ತಿದ್ದರೆ ಪ್ರತೀಕ್ ಸಿನ್ಹಾ 'ಆಲ್ಟ್‌ನ್ಯೂಸ್.ಇನ್' ಮತ್ತು 'ಟ್ರೂಥ್ ಆಫ್ ಗುಜರಾತ್' ಎಂಬ ವೆಬ್‌ಸೈಟ್‌ಗಳ ಮೂಲಕ ಮಾಡುತ್ತಿದ್ದಾರೆ. ಜೊತೆಗೆ ಹೋಕ್ಸ್ ಸ್ಲೇಯರ್, ಬೂಮ್ ಮತ್ತು ಫ್ಯಾಕ್ಟ್‌ಚೆಕ್ ತರಹದ ವೆಬ್‌ಸೈಟ್‌ಗಳೂ ಈಗ ತಲೆ ಎತ್ತಿವೆ. ಇವುಗಳ ಜೊತೆಗೆ ದಿವೈರ್.ಇನ್, ಸ್ಕ್ರೋಲ್, ದಿಕ್ವಿಂಟ್, ನ್ಯೂಸ್‌ಲಾಂಡ್ರಿ ಮತ್ತು ಓ ಎಂಬ ಸುದ್ದಿ ಜಾಲತಾಣಗಳೂ ಕ್ರಿಯಾಶೀಲವಾಗಿವೆ. ಇವರೆಲ್ಲ ಇತ್ತೀಚೆಗೆ ಬಟಾಬಯಲು ಮಾಡಿರುವ ಚಡ್ಡಿಗಳ ಸುಳ್ಳು ಸುದ್ದಿಗಳ ಹಲವು ಸ್ಯಾಂಪಲ್‌ಗಳನ್ನು ನೀಡುತ್ತೇನೆ. ಮಜಾ ಎಂದರೆ ಇವರೆಲ್ಲರ ಕೆಲಸದಿಂದಾಗಿ ಈಗ ಚಡ್ಡಿಗಳೇ ತಮ್ಮ ಮುಖ ಎಲ್ಲಿ ಮುಚ್ಚಿಕೊಳ್ಳಬೇಕು ಎಂಬ ಬಿಕ್ಕಟ್ಟಿಗೆ ಬಿದ್ದಿರುವುದು. ಇಲ್ಲಿ ಮುಖ್ಯವಾದ ಅಂಶ ಯಾವುದೆಂದರೆ ಇವರ್ಯಾರೂ ಹಣಕ್ಕಾಗಿ ಈ ಕೆಲಸವನ್ನು ಮಾಡುತ್ತಿಲ್ಲ, ಬದಲಾಗಿ ಫ್ಯಾಸಿಸ್ಟರ ಸುಳ್ಳು ಫ್ಯಾಕ್ಟರಿಗಳನ್ನು ಬೆತ್ತಲಾಗಿಸಬೇಕೆಂಬ ಏಕೈಕ ಉದ್ದೇಶದಿಂದ ಇವನ್ನೆಲ್ಲ ಮಾಡುತ್ತಿದ್ದಾರೆ.

ಕೆಲವಾರಗಳ ಹಿಂದೆ ಬೆಂಗಳೂರಿನಲ್ಲಿ ಧಾರಾಕಾರ ಮಳೆ ಸುರಿದಾಗ ಚಡ್ಡಿಗಳು ಒಂದು ಫೋಟೊ ಬಿಡುಗಡೆ ಮಾಡಿದ್ದರು. ಅದರಲ್ಲಿ 'ನಾಸಾ ಸಂಸ್ಥೆಯವರು ಮಂಗಳಗ್ರಹದಲ್ಲಿ ಜನರು ಓಡಾಡುವುದನ್ನು ಪತ್ತೆ ಹಚ್ಚಿದ್ದರು. ಆದರೆ ಆನಂತರ ಬೃಹತ್ ಬೆಂಗಳೂರು ನಗರಪಾಲಿಕೆ ಅದು ಬೆಂಗಳೂರಿನ ರಸ್ತೆ ಎಂದು ಸ್ಪಷ್ಟಪಡಿಸಿತು' ಎಂದು ಲೇವಡಿ ಮಾಡಲಾಗಿತ್ತು. ಆ ಫೋಟೋದಲ್ಲಿ ಮಳೆನೀರು ತುಂಬಿರುವ ರಸ್ತೆಗುಂಡಿಗಳಿದ್ದವು. ಅಂದರೆ ಸಿದ್ದು ಸರ್ಕಾರದ ದೆಸೆಯಿಂದಾಗಿ ಬೆಂಗಳೂರು ಎಕ್ಕುಟ್ಟಿಹೋಗಿದೆ ಎಂದು ಪ್ರಚಾರ ಮಾಡುವುದು ಅವರ ದುರುದ್ದೇಶವಾಗಿತ್ತು, ತಮಾಷೆ ಏನೆಂದರೆ ಆ ಫೋಟೋ ಕಾಂಗ್ರೆಸ್ ಆಡಳಿತ ಇರುವ ಬೆಂಗಳೂರಿನದ್ದಾಗಿರಲಿಲ್ಲ, ಬದಲಾಗಿ ಅದು ಬಿಜೆಪಿ ಅಧಿಕಾರದಲ್ಲಿರುವ ಮುಂಬೈ ರಸ್ತೆಯ ಫೋಟೋ ಆಗಿತ್ತು!

ಇತ್ತೀಚೆಗೆ ಪಶ್ಚಿಮ ಬಂಗಾಲದಲ್ಲಿ ಗಲಭೆ ನಡೆದಾಗ ಚಡ್ಡಿಗಳು ಆ ರಾಜ್ಯದಲ್ಲಿ ಆಗುತ್ತಿರುವ ವಿದ್ಯಮಾನಗಳಿಗೆ ಸಂಬಂಧಿಸಿದವು ಎಂದು ಎರಡು ಪೋಸ್ಟರ್‌ಗಳನ್ನು ಬಿಡುಗಡೆ ಮಾಡಿದ್ದರು. ಒಂದರಲ್ಲಿ ಆಸ್ತಿಪಾಸ್ತಿಗಳು ಬೆಂಕಿಗೆ ಆಹುತಿ ಆಗುತ್ತಿದ್ದ ಫೋಟೋಗಳಿದ್ದು "ಬಂಗಾಲ ಹತ್ತಿ ಉರಿಯುತ್ತಿದೆ, ಅದನ್ನು ತಡೆಯಿರಿ" ಎಂಬ ಕರೆ ಇತ್ತು, ಇನ್ನೊಂದರಲ್ಲಿ ಮಹಿಳೆಯೊಬ್ಬಳ ಸೀರೆಯನ್ನು ಒಬ್ಬಾತ ಸೆಳೆಯುತ್ತಿರುವ ಚಿತ್ರ ಇದ್ದು "ಬಂಗಾಲದಲ್ಲಿ ಹಿಂದೂ ಮಹಿಳೆಯರ ಮಾನಾಪಹರಣ ನಡೆಯುತ್ತಿದೆ" ಎಂದು ಕೆಂಡಕಾರಲಾಗಿತ್ತು. ಆದರೆ ಸುಳ್ಳು ಸುದ್ದಿ ಪ್ರಚಾರಕರ ಅಸಲಿಯತ್ತನ್ನು ಕೆಲವರು ತೆರೆದಿಟ್ಟರು. ಯಾಕೆಂದರೆ ಮೊದಲನೆ ಪೋಸ್ಟರ್‌ನಲ್ಲಿ ಇದ್ದದ್ದು ಮೋದಿ ಗುಜರಾತಿನ ಮುಖ್ಯಮಂತ್ರಿ ಆಗಿದ್ದಾಗ ಆ ರಾಜ್ಯದಲ್ಲಿ ಸಂಭವಿಸಿದ 2002ರ ಗಲಭೆಯ ಚಿತ್ರಗಳಾಗಿದ್ದರೆ, ಎರಡನೆಯ ಪೋಸ್ಟರ್‌ನಲ್ಲಿ ಇದ್ದದ್ದು ಭೋಜಪುರಿ ಸಿನಿಮಾದ ಸ್ಟಿಲ್!!

ಬಿಜೆಪಿಯ ಕೇಂದ್ರ ಸಚಿವರೂ ಸುಳ್ಳು ಸುದ್ದಿಗಳನ್ನು ಹಬ್ಬಿಸುವಲ್ಲಿ ಎತ್ತಿದ ಕೈ ಎನಿಸಿಕೊಂಡಿದ್ದಾರೆ. ಉದಾಹರಣೆಗೆ ನಿತಿನ್ ಗಡ್ಕರಿ ಮುಸಲ್ಮಾನರು ಭಾರತದ ಬಾವುಟಕ್ಕೆ ಬೆಂಕಿ ಹಚ್ಚಿರುವ ಚಿತ್ರವನ್ನು ಶೇರ್ ಮಾಡುತ್ತಾ "ಗಣತಂತ್ರದ ದಿವಸ ಹೈದರಾಬಾದಿನಲ್ಲಿ ತಿರಂಗಕ್ಕೆ ಬೆಂಕಿ ಹಚ್ಚಿರುವುದು" ಎಂದು ಕಾಮೆಂಟ್ ಹಾಕಿದ್ದ. ಈಗ ಗೂಗಲ್ ಇಮೇಜ್ ಸರ್ಚ್‌ಗೆ ಸಂಬಂಧಿಸಿದಂತೆ ಒಂದು ಅಪ್ಲಿಕೇಶನ್ ಬಂದಿದೆ. ಅದನ್ನು ಉಪಯೋಗಿಸಿ ಅಸಲಿ ಚಿತ್ರ ಎಲ್ಲಿಯದ್ದು ಮತ್ತು ಯಾವತ್ತಿನದ್ದು ಎಂದು ಪತ್ತೆ ಹಚ್ಚಬಹುದು. ಆ ಅಪ್ಲಿಕೇಶನ್ ಉಪಯೋಗಿಸಿದ ಪ್ರತೀಕ್ ಸಿನ್ಹಾ ಗಡ್ಕರಿ ಹಂಚಿದ್ದ ಫೋಟೋ ಪಾಕಿಸ್ತಾನದಲ್ಲಿ ಬಹಿಷ್ಕಾರಗೊಂಡಿರುವ ಮೂಲಭೂತ ಸಂಘಟನೆಯ ಪ್ರತಿಭಟನೆಯ ಫೋಟೋ ಎಂದು ಪತ್ತೆ ಮಾಡಿದರು.

ಒಂದು ಟಿವಿ ಚರ್ಚೆಯಲ್ಲಿ ಬಿಜೆಪಿಯ ವಕ್ತಾರ ಸಂಬಿತ್ ಪಾತ್ರ "ಗಡಿ ಪ್ರದೇಶದಲ್ಲಿ ಭಾರತೀಯ ಸೈನಿಕರು ದೇಶದ ಬಾವುಟವನ್ನು ಹಾರಿಸಲು ಎಷ್ಟು ಹರಸಾಹಸ ಪಡುತ್ತಿದ್ದಾರೆ. ಹಾಗಿದ್ದಾಗ ಜೆಎನ್‌ಯು ತರಹದ ವಿವಿಗಳಲ್ಲಿ ಧ್ವಜ ಹಾರಿಸಿದರೆ ತಪ್ಪೇನು" ಎಂದು ವಾದಿಸುತ್ತಾ ಒಂದು ಫೋಟೋ ಪ್ರದರ್ಶಿಸಿದ್ದ. ತಮಾಷೆಯ ಸಂಗತಿ ಯಾವುದೆಂದರೆ ಒಂದಿಷ್ಟು ಓದಿರುವವರಿಗೂ, ಇತಿಹಾಸ ಅರಿತಿರುವವರಿಗೂ ಅದು ಖ್ಯಾತ ಛಾಯಾಗ್ರಾಹಕ ಜೋ ರೋಸೆಂಥಾಲ್ ಎಂಬುವವರು ತೆಗೆದಿದ್ದ ಫೋಟೋ ಎಂಬುದೂ, ಅದರಲ್ಲಿ ಇರುವುದು ಅಮೆರಿಕದ ಸೈನಿಕರು ಎಂಬುದೂ ಗೊತ್ತು, ಎರಡನೆ ವಿಶ್ವ ಯುದ್ಧ ನಡೆದಾಗ ಜಪಾನಿನ ಒಂದು ದ್ವೀಪವನ್ನು ಆಕ್ರಮಿಸಿದ ಅಮೆರಿಕದ ಸೈನಿಕರು ಅಲ್ಲಿ ತಮ್ಮ ದೇಶದ ಧ್ವಜವನ್ನು ಹಾರಿಸಿದ್ದರು. ಆದರೆ ಸಂಬಿತ್ ಪಾತ್ರ ಆ ಫೋಟೋದಲ್ಲಿದ್ದ ಅಮೆರಿಕದ ಧ್ವಜದ ಬದಲಾಗಿ ಭಾರತದ ಧ್ವಜವನ್ನು ಅಂಟಿಸಿ ಜನರನ್ನು ಮಂಗ ಮಾಡಲು ಯತ್ನಿಸಿದ್ದ. ಆದರೆ ಪರಿಣಾಮ ಭಿನ್ನವಾಗಿತ್ತು, ಟ್ವಿಟರ್ ಲೋಕದಲ್ಲಿ ಸಂಬಿತ್ ಪಾತ್ರನನ್ನು ಗೇಲಿ ಮಾಡಿದವರಿಗೆ ಲೆಕ್ಕವಿಲ್ಲ.

ಕೇಂದ್ರದ ಇಂಧನ ಮಂತ್ರಿ ಪಿಯೂಶ್ ಗೋಯಲ್ ಇತ್ತೀಚೆಗೆ "ಭಾರತದ 50,000 ಕಿಲೋಮೀಟರ್ ರಸ್ತೆಗಳಲ್ಲಿ 30 ಲಕ್ಷ ಎಲ್‌ಇಡಿ ಬಲ್ಬ್‌ಗಳನ್ನು ಸರ್ಕಾರ ಅಳವಡಿಸುವ ಮೂಲಕ ಬೆಳಕು ಹರಿಸಿದೆ" ಎಂದು ಕೊಚ್ಚಿಕೊಂಡು ಅದರೊಂದಿಗೆ ಒಂದು ಫೋಟೋ ಹಂಚಿಕೊಂಡಿದ್ದ. ಆದರೆ ಆ ಫೋಟೋ ಕೂಡ ನಕಲಿ ಆಗಿದ್ದು 2009ರಲ್ಲಿ ಕಂಪನಿಯೊಂದು ಜಪಾನಿನಲ್ಲಿ ಅಳವಡಿಸಿದ್ದ ರಸ್ತೆ ದೀಪಗಳ ಚಿತ್ರವಾಗಿತ್ತು.

ಇದೇ ಗೋಯಲ್ ಈ ಹಿಂದೆ "ಕಳೆದ ಮೂರು ವರ್ಷಗಳಲ್ಲಿ ದೇಶೀಯ ಇದ್ದಿಲು ಸರಬರಾಜು ಹೆಚ್ಚಾಗಿದ್ದು 25,900 ಕೋಟಿ ರೂಪಾಯಿ ಉಳಿತಾಯವಾಗಿದೆ" ಎಂದು ಹೇಳಿ ಅದರೊಂದಿಗೆ ಒಂದು ಫೋಟೋ ಹಂಚಿಕೊಂಡಿದ್ದ. ಅದೂ ಕೂಡ ನಕಲಿ ಫೋಟೋ ಆಗಿತ್ತು.

ಛತ್ತೀಸಗಡದಲ್ಲಿ ಲೋಕೋಪಯೋಗಿ ಇಲಾಖೆಯ ಸಚಿವನಾಗಿರುವ ರಾಜೇಶ್ ಮುನ್ನತ್ ಎಂಬಾತ ಒಂದು ಸೇತುವೆಯ ಚಿತ್ರವನ್ನು ಹಂಚಿಕೊಂಡು ಇದು ತನ್ನ ಸಾಧನೆ ಎಂದು ಕೊಚ್ಚಿಕೊಂಡಿದ್ದ. ಆತನನ್ನು ನಂಬಿದ 2,000 ಜನ ಅದಕ್ಕೆ 'ಲೈಕ್' ಬಟನ್ ಪ್ರೆಸ್ ಮಾಡಿದ್ದರು. ಆದರೆ ಆ ಸೇತುವೆ ವಿಯೆಟ್ನಾಮ್ ದೇಶದ್ದು ಎಂದು ಬಯಲಾಯಿತು.

ಇಂತಹ ಸುಳ್ಳು ಸುದ್ದಿ ಹಬ್ಬಿಸುವಲ್ಲಿ ನಮ್ಮ ಕರ್ನಾಟಕದ ಚಡ್ಡಿ ನಾಯಕರೇನು ಹಿಂದೆ ಬಿದ್ದಿಲ್ಲ. ಸಂಸದ ಪ್ರತಾಪ ಸಿಮ್ಹ ಟೈಮ್ಸ್ ಆಫ್ ಇಂಡಿಯಾದಲ್ಲಿ ಪ್ರಕಟಗೊಂಡಿದ್ದು ಎನ್ನಲಾದ 'ವರದಿ'ಯೊಂದನ್ನು ಹಂಚಿಕೊಂಡಿದ್ದ. ಆ ವರದಿಯ ಹೆಡ್‌ಲೈನ್ 'ಹಿಂದೂ ಯುವತಿಯನ್ನು ಇರಿದು ಕೊಲೆಗೈದ ಮುಸಲ್ಮಾನ' ಎಂಬುದಾಗಿತ್ತು. ಲೋಕಕ್ಕೆಲ್ಲಾ ಬುದ್ಧಿ ಹೇಳುವ ಪ್ರತಾಪ ಕಿಂಚಿತ್ತು ವಿಚಾರಿಸಿದ್ದರೂ ಅದು ಸುಳ್ಳು ವರದಿ ಎಂಬುದು ಗೊತ್ತಾಗುತ್ತಿತ್ತು, ಯಾಕೆಂದರೆ ಟೈಮ್ಸ್ ಆಫ್ ಇಂಡಿಯಾ ಇರಲಿ ಬೇರೆ ಯಾವ ಪತ್ರಿಕೆಯೂ ಅಂತಹ ಒಂದು ವರದಿಯನ್ನು ಪ್ರಕಟಿಸಿರಲಿಲ್ಲ. ಬದಲಾಗಿ 'ಸ್ತ್ರೀ ಪೀಡಕನಿಗೆ ಯುವತಿ ಬಲಿ' ಎಂಬ ವರದಿಯ ಹೆಡ್ಡಿಂಗ್‌ಅನ್ನು ಫೋಟೋಶಾಪ್ ಮೂಲಕ ಬದಲಾಯಿಸಿ ಅದಕ್ಕೆ ಕೋಮು ಕಿತಾಪತಿಯ ಟಚ್ ಕೊಡಲಾಗಿತ್ತು. ಇದು ಸುಳ್ಳು ಸುದ್ದಿ ಎಂದು ಗೊತ್ತಾದಾಗ ಪ್ರತಾಪ ಅದನ್ನು ಡಿಲೀಟ್ ಮಾಡಿದನಾದರೂ ಇಂತಹ ಕೋಮುಪ್ರಚೋದಕ ಸುಳ್ಳನ್ನು ಹಬ್ಬಿಸಿದ್ದಕ್ಕೆ ಪಶ್ಚಾತ್ತಾಪವನ್ನೇನು ವ್ಯಕ್ತಪಡಿಸಲಿಲ್ಲ.

ವಾಸು ತನ್ನ ಅಂಕಣದಲ್ಲಿ ಬರೆದಿರುವಂತೆ ನಾನೂ ಈ ವಾರ ಸುಳ್ಳು ಸುದ್ದಿಯೊಂದನ್ನು ಹಂಚಿಕೊಳ್ಳುವ ಪ್ರಮಾದ ಒಂದನ್ನು ಮಾಡಿದೆ. ಅದು ಕಳೆದ ಭಾನುವಾರ ಪಟ್ನಾದಲ್ಲಿ ಲಾಲೂ ಪ್ರಸಾದರ ನೇತೃತ್ವದಲ್ಲಿ ನಡೆದ ಸಭೆಯ ಚಿತ್ರ. ಅಲ್ಲಿ ಸೇರಿದ್ದಕ್ಕಿಂತ ಹೆಚ್ಚು ಜನರು ಇರುವಂತೆ ಫೋಟೋಶಾಪ್ ಮಾಡಲಾಗಿದ್ದ ಫೋಟೋ ಒಂದನ್ನು ಲಾಲೂ ಪ್ರಸಾದ್ ಯಾದವ್ ಹಂಚಿಕೊಂಡಿದ್ದರು. ಅದನ್ನೇ ನಾನೂ ಹಂಚಿಕೊಂಡೆ. ಆದರೆ ಸ್ವಲ್ಪ ಹೊತ್ತಿನಲ್ಲಿ ಮಿತ್ರ ಶಶಿಧರ್ ಹೆಮ್ಮಾಡಿ "ಅದು ಫೇಕ್ ಫೋಟೋ" ಎಂದು ನನ್ನನ್ನು ಎಚ್ಚರಿಸಿದರು. ಕೂಡಲೇ ನನ್ನ ತಪ್ಪನ್ನು ಒಪ್ಪಿಕೊಂಡು ನಕಲಿ ಮತ್ತು ಅಸಲಿ ಚಿತ್ರಗಳನ್ನು ಹಂಚಿಕೊಂಡೆ. ನನ್ನ ಪ್ರಮಾದದ ಹಿಂದೆ ಕೋಮುದ್ವೇಷವಾಗಲಿ, ಇನ್ನಾವುದೋ ಕಿತಾಪತಿಯ ಉದ್ದೇಶವಾಗಲಿ ಇರಲಿಲ್ಲ, ಬದಲಾಗಿ ಫ್ಯಾಸಿಸ್ಟರ ವಿರುದ್ಧ ಇನ್ನೂ ಅಪಾರ ಜನ ಶಕ್ತಿ ಇದೆ ಎಂಬ ಆಶಯ ಮಾತ್ರ ಇತ್ತು.

ಇರಲಿ, ಈಗ ಚಡ್ಡಿಗಳ ಸುಳ್ಳು ಸುದ್ದಿಗಳನ್ನು ಬಯಲು ಮಾಡುತ್ತಿರುವ ಏಕಾಂಗಿ ಸತ್ಯ ಸೈನಿಕರಿಗೆ ಸಲಾಂ ಎನ್ನುತ್ತಾ ಅವರ ಸಂಖ್ಯೆ ಇನ್ನೂ ವೃದ್ಧಿಸಲಿ ಎಂದು ಆಶಿಸುತ್ತೇನೆ...

ಈಶೂ ಬಂಟನ ಬಳಿಯಿದ್ದದ್ದು ಯಾರ ಸೀಡಿ

ಒಬ್ಬ ಮಾಜಿ ಮುಖ್ಯಮಂತ್ರಿ ಮತ್ತು ಪಕ್ಷವೊಂದರ ಘೋಷಿತ ಮುಖ್ಯಮಂತ್ರಿ ಅಭ್ಯರ್ಥಿಗಿದು ಎತ್ತಿಂದೆತ್ತ ಲೆಕ್ಕ ಹಾಕಿದರೂ ಸಲ್ಲದ ಉಸಾಬರಿಯೇ!

ತನ್ನ ಆಪ್ತ ಸಹಾಯಕನೊಬ್ಬ ಕಾಮಕಾಂಡಕ್ಕೆ ಸಿಲುಕಿ ಬಿದ್ದನೆಂದರೆ ಅಥವಾ ಅದನ್ನು ಮುಚ್ಚಿಕೊಳ್ಳಲು ಕಿಡ್ನಾಪ್‌ನಂಥ ಗಂಭೀರ ಅಪರಾಧವೊಂದರಲ್ಲಿ ಆರೋಪಿಯಾದನೆಂದರೆ ಬೇರೆ ಯಾರೇ ಮುತ್ಸದ್ದಿಯೊಬ್ಬ ಏನು ತಾನೇ ಮಾಡಿಯಾನು?

ಒಂದೋ ಆಪ್ತ ಸಹಾಯಕನನ್ನು ಉಗಿದಟ್ಟುವುದು ಅಥವಾ ಅಂಥವನನ್ನು ನಮ್ಮ ಮನೆಬಾಗಿಲು ಮುಟ್ಟಕೂಡದೆಂದು ತೆಗೆದುಹಾಕಿದ್ದೇನೆಂದು ಪತ್ರಿಕಾ ಹೇಳಿಕೆ ಕೊಡುವುದು ತಾನೆ?

ಇನ್ನು ಮಾನವಂತನಾಗಿದ್ದರೆ ಆತನಿಂದ ಅನ್ಯಾಯಕ್ಕೀಡಾದ ಯುವತಿಗೆ ನ್ಯಾಯ ಕೊಡಿಸುವ ನಾಟಕವಾಡಲೂಬಹುದು ಅಥವಾ ಅಪಹರಣಕ್ಕೀಡಾದವನಿಗೆ ಸಾಂತ್ವನದ ಪ್ರಹಸನಕ್ಕೂ ಮುಂದಾಗುವುದು. ಇದನ್ನು ಬಿಟ್ಟು ತನ್ನ ಆಪ್ತ ಸಹಾಯಕನ ಭಾನಗಡಿಗೆ ಬೆಂಬಲವಾಗಿ ನಿಲ್ಲುತ್ತಾನೆಂದರೆ, ಆತ ನಿರ್ದೋಷಿಯೆಂದು ಪೊಲೀಸ್ ಅಧಿಕಾರಿಗಳನ್ನೇ ದಬಾಯಿಸುತ್ತಾನೆಂದರೆ, ಜನ ಅದನ್ನು ಕುಮ್ಮಕ್ಕೆನ್ನದೆ ಮತ್ತೇನೆಂದು ಭಾವಿಸಲು ಸಾಧ್ಯ? ಅಷ್ಟೇ ಅಲ್ಲ; ಬಂಟನೊಬ್ಬನ ಅಪರಾಧಗಳೆಲ್ಲವನ್ನೂ ಆತನ ಧಣಿಗಾಗಿಯೇ ಆತ ಎಸಗಿದ್ದೆಂಬ ನಿರ್ಧಾರಕ್ಕೇ ಬರುತ್ತಾರೆ. ಬಿಜೆಪಿ ನಾಯಕ ಈಶ್ವರಪ್ಪ ಆಪ್ತ ಪರಿಚಾರಕ ವಿನಯ್ ಎಂಬಾತನನ್ನು ನಡುರಸ್ತೆಯಲ್ಲಿ ರೌಡಿಗಳನ್ನು ಬಿಟ್ಟು ಕಿಡ್ನಾಪ್ ಮಾಡಿಸಲು ಹೋಗಿ ಕಂಬಿ ಎಣಿಸುವ ಕರ್ಮಕ್ಕೆ ಬಿದ್ದವನು ಯಡ್ಡಿಯ ಪಿಎ ಎಂ.ಆರ್. ಸಂತೋಷ್.


ಕೋರ್ಟನ್ನೂ ಆತನಿಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡಿಲ್ಲ. ಬೆನ್ನಿಗೆ ಬಿದ್ದ ಮಹಾಲಕ್ಷ್ಮಿ ಲೇಔಟ್ ಪೊಲೀಸರು ನಿಂತಲ್ಲಿ ನಿಲ್ಲಲು ಬಿಡುತ್ತಿಲ್ಲ. ಬೆಂಗಳೂರಿನ ಎರಡು ಪೊಲೀಸ್ ಠಾಣೆಗಳ ರೌಡಿ ಶೀಟರುಗಳನ್ನು ಛೂಬಿಟ್ಟು ಮಾಜಿ ಉಪಮುಖ್ಯಮಂತ್ರಿ ಈಶ್ವರಪ್ಪನವರ ಆಪ್ತ ಸಹಾಯಕನನ್ನು ನಡುರಸ್ತೆಯಲ್ಲೇ ಅಪಹರಿಸಲೆತ್ನಿಸಿದ ದುಸ್ಸಾಹಸಕ್ಕಾತ ಕೈ ಹಾಕುವಂಥ ಯಾವ ಮಹಾ ಘಜೀತಿಗೆ ತಾನೇ ಸಿಲುಕಲು ಸಾಧ್ಯ?


ಹಾಗೊಮ್ಮೆ ತನ್ನದೇ ಸೆಕ್ಸ್ ಸಿಡಿಯಾಗಲಿ ಕಾಮಕಾಂಡದ ಪುರಾವೆಯಾಗಲಿ ಈಶ್ವರಪ್ಪನ ಭಟ್ಟಂಗಿಯ ಬಳಿಯಿದ್ದಿದ್ದರೆ ನೇರವಾಗಿ ಈಶ್ವರಪ್ಪ ಕಾಲಿಗೆ ಬಿದ್ದು ದಮ್ಮಯ್ಯ ಗುಡ್ಡೆ ಹಾಕಿದ್ದರೆ ಮುಗಿದೇಹೋಗುತ್ತಿತ್ತು ಅಥವಾ ತನ್ನ ಧಣಿಗೊಂದು ಮಾತು ಹೇಳಿದ್ದರೆ ಯಡ್ಡಿಯೇ ಈಶ್ವರಪ್ಪನ ಬಳಿ ಮಾತಾಡಿ ಭಾನಗಡಿಗೊಂದು ಗತಿ ಕಾಣಿಸುವ ಸಾಧ್ಯತೆಯಿತ್ತು, ಅಪಹರಣದಂಥ ಗಂಭೀರ ಅಪರಾಧದ ಪರಿಣಾಮ ಮತ್ತದರಿಂದ ಒದಗಬಹುದಾದ ಆಪತ್ತಿನ ಅರಿವಿದ್ದೂ ರೌಡಿಗಳನ್ನು ಬಿಟ್ಟು ಕಿಡ್ನಾಪ್ ಮಾಡಿಸಿ ಇನ್ನೆಂಥದ್ದೋ ಲ್ಯಾಪ್‌ಟಾಪ್ ಕಸಿದುಕೊಳ್ಳುವ ಅಂಥಾ ಹರಕತ್ತಾದರೂ ಯಡ್ಡಿ ಪಿಎ ಸಂತೋಷ್‌ಗೇನಿತ್ತು? ಅಸಲಿಗೆ ಈಶ್ವರಪ್ಪನಿಂದ ಆಪತ್ತಿದ್ದದ್ದು ಯಡ್ಡಿಗೋ ಅಥವಾ ಯಡ್ಡಿಯ ಬಂಟನಿಗೋ?


ಇದು ಈಶ್ವರಪ್ಪ ಆಪ್ತ ಸಹಾಯಕ ವಿನಯ್ ಕಿಡ್ನಾಪ್ ಯತ್ನ ಪ್ರಕರಣದಲ್ಲಿ ಎಂಥವರನ್ನೂ ಕಾಡುವ ಮೂಲಪ್ರಶ್ನೆ.


ಕಿಡ್ನಾಪ್ ಯತ್ನ ನಡೆದದ್ದು ಮೇ 11ರ ಅಪರಾಹ್ನ ರಾಜಾಜಿನಗರದ ಇಸ್ಕಾನ್ ದೇವಾಲಯದೆದುರಿನ ನಡುರಸ್ತೆಯಲ್ಲಿ, ಅವತ್ತು ವಿನಯ್‌ನ ಕಾರನ್ನು ಅಡ್ಡಗಟ್ಟಿದ ರೌಡಿ ಗ್ಯಾಂಗ್ ನಡುರಸ್ತೆಯಲ್ಲೇ ತಮ್ಮ ಕಾರಿಗೆ ಎತ್ತಾಕಿಕೊಳ್ಳಲು ಯತ್ನಿಸಿದೆ. ಇದರ ಸುಳಿವು ಮೊದಲೇ ಇತ್ತೇನೊ. ವಿನಯ್ ನೆಲಕ್ಕೆ ಬಿದ್ದು ಒದ್ದಾಡಿ ಬೊಬ್ಬೆ ಹಾಕಿದ್ದಾನೆ. ಧಾವಿಸಿ ಬಂದ ಜನ ರೌಡಿಗಳಿಂದ ವಿನಯ್‌ನನ್ನು ಬಿಡಿಸಲೆತ್ನಿಸಿದ್ದೇ ರೌಡಿ ಪಡೆ ಆತನ ಕೈಲಿದ್ದ ಲ್ಯಾಪ್‌ಟಾಪ್ ಕಿತ್ತುಕೊಂಡು ಪರಾರಿಯಾಗಿದೆ. ಎದ್ದೂಬಿದ್ದು ಮಹಾಲಕ್ಷ್ಮಿ ಲೇಔಟ್ ಪೊಲೀಸ್ ಠಾಣೆಗೆ ಓಡಿಬಂದ ವಿನಯ್ ನೇರವಾಗಿ ಯಡ್ಡಿ ಆಪ್ತ ಸಹಾಯಕ ಎಂ.ಆರ್. ಸಂತೋಷ್‌ನನ್ನೇ ಹೆಸರಿಸಿ ಅಪಹರಣ ಯತ್ನದ ದೂರು ದಾಖಲಿಸಿದ್ದಾನೆ.

ಆದರೆ ಅಪಹರಣಕ್ಕೆ ಬಂದವರ ಮಾಹಿತಿಯಿರಲಿಲ್ಲವಲ್ಲ, ಅದಕ್ಕೆ ಮಹಾಲಕ್ಷ್ಮಿ ಲೇಔಟ್ ಮೆಟ್ರೋ ಸ್ಟೇಷನ್ನಿನ ಸೀಸಿ ಟೀವಿಯ ದೃಶ್ಯಾವಳಿಯನ್ನು ತರಿಸಿಕೊಂಡು ನೋಡಿದ ಪೊಲೀಸರಿಗೆ ಗೊತ್ತಾಗಿದ್ದು ಕಿಡ್ನಾಪಿಗೆ ಬಂದವರ ಪೈಕಿ ಅನೇಕರು ಲೋಕಲ್ ಪುಡಿರೌಡಿಗಳೇ. ಈ ಪೈಕಿ ಒಬ್ಬ ಅಭಿಷೇಕ್ ಆದರೆ ಇನ್ನೊಬ್ಬ ಅಯ್ಯಪ್ಪ, ಸೀಸಿ ಟೀವಿಯ ಫೂಟೇಜುಗಳಲ್ಲಿ ಅವರ ಮುಖ, ಚಹರೆ ಸ್ಪಷ್ಟವಾಗೇ ದಾಖಲಾಗಿತ್ತು, ಅವರನ್ನು ಹಿಡಿದೊಯ್ದು ಸಮಾ ರಿಪೇರಿ ಮಾಡಿ ಬಾಯಿ ಬಿಡಿಸಿದಾಗ ಗೊತ್ತಾಗಿದ್ದು ಎಚ್‌ಎಎಲ್ ಪೊಲೀಸ್ ಠಾಣೆಯ ರೌಡಿ ಶೀಟರ್ ಪ್ರಶಾಂತ್‌ನ ಹೆಸರು. ಅಷ್ಟೇ ಅಲ್ಲ, ಅಪಹರಿಸಲೆತ್ನಿಸಿದ ಪುಡಿ ರೌಡಿಗಳೆಲ್ಲರೂ










ಮೈಕೋ ಲೇಔಟ್ ರೌಡಿ ಉಮಾಕಾಂತ್ ಎಂಬಾತನ ಹುಡುಗರು. ಇದೇ ಹೊತ್ತಿಗೆ ಎಚ್‌ಎಎಲ್ ಪೊಲೀಸರು ಉಪಾಯವಾಗಿ ಪ್ರಶಾಂತ್‌ನನ್ನು ಬಲೆಗೆ ಬೀಳಿಸಿಕೊಂಡಾಗಿತ್ತು. ಆತನನ್ನು ಮಹಾಲಕ್ಷ್ಮಿ ಲೇಔಟ್ ಪೊಲೀಸರು ಕರೆತಂದು ಬಾಯಿ ಬಿಡಿಸಿದಾಗ ಬಂದದ್ದು ಬೆಂಗಳೂರು ನಗರ ಬಿಜೆಪಿ ಯುವಮೋರ್ಚಾದ ಕಾರ್ಯದರ್ಶಿ ರಾಜೇಂದ್ರ ಅರಸ್ ಮತ್ತು ಯಡ್ಡಿ ಆಪ್ತ ಸಹಾಯಕ ಎಂ.ಆರ್. ಸಂತೋಷ್ ಎಂಬ ಎರಡು ಹೆಸರುಗಳು.

2017ರ ಆಗಸ್ಟ್ ಮೊದಲ ವಾರದ ಹೊತ್ತಿಗೆ ಇಡೀ ಪ್ರಕರಣವೇ ನಿಗೂಢದ ಹುತ್ತದಂತಾಗಿಹೋಗಿತ್ತು. ಈಶ್ವರಪ್ಪ ಮತ್ತು ಯಡಿಯೂರಪ್ಪರಂಥ ಬಿಜೆಪಿ ದಿಗ್ಗಜರ ನಡುವೆ ಹೊತ್ತಿ ಉರಿಯುತ್ತಿದ್ದ ಕಾಲವದು. ಈಶ್ವರಪ್ಪ ರಾಜ್ಯ ಬಿಜೆಪಿ ಅಧ್ಯಕ್ಷ ಯಡ್ಡಿಯ ವಿರುದ್ಧ ಬೀದಿ ರಂಪಕ್ಕಿಳಿದದ್ದು, ರಾಯಣ್ಣ ಬ್ರಿಗೇಡ್ ಸ್ಥಾಪಿಸಿದ್ದು, ಯಡ್ಡಿ ಮತ್ತು ಈಶೂ ಬೆಂಬಲಿಗರ ನಡುವೆ ನಡುಬೀದಿ ಮಾರಾಮಾರಿಗಳೇ ನಡೆದದ್ದು, ಖುದ್ದು ಯಡ್ಡಿಯೇ ಈಶ್ವರಪ್ಪ ವಿರುದ್ಧ ರಾಷ್ಟ್ರೀಯ ಅಧ್ಯಕ್ಷ ಅಮಿತ್ ಶಾಗೆ ದೂರು ಸಲ್ಲಿಸಿದ್ದು ಮತ್ತು ಕಚ್ಚಾಟದ ಉಪಶಮನಕ್ಕೆಂದು ಅಮಿತ್ ಶಾನೇ ಹುಬ್ಬಳ್ಳಿಗೆ ಬಂದು ಈಶ್ವರಪ್ಪನ ಕಿವಿ ಹಿಡಿದಷ್ಟೇ ಅಲ್ಲಿ ಯಡ್ಡಿಯೇ ಬಿಜೆಪಿಯ ಮುಖ್ಯಮಂತ್ರಿ ಅಭ್ಯರ್ಥಿಯೆಂದು ತಿಪ್ಪೆಸಾರಿಸಿದ್ದೂ ಆಗಿತ್ತು, ಇಂಥ ಕಚ್ಚಾಟದ ಬಿಸಿಯಲ್ಲೇ ಅಂದರೆ ಮೇ 11 ರಂದು ಈಶೂ ಆಪ್ತ ಸಹಾಯಕ ವಿನಯ್‌ನ ಅಪಹರಣ ಯತ್ನ ನಡೆದಿತ್ತು.



ರೌಡಿ ಪ್ರಶಾಂತ್

ಯಾವತ್ತು ರೌಡಿ ಪ್ರಶಾಂತ್ ಬೆಂಗಳೂರು ನಗರ ಬಿಜೆಪಿ ಯುವಮೋರ್ಚಾ ಕಾರ್ಯದರ್ಶಿ ರಾಜೇಂದ್ರ ಅರಸ್ ಮತ್ತು ಯಡ್ಡಿ ಆಪ್ತ ಸಹಾಯಕ ಸಂತೋಷ್ ಹೆಸರನ್ನು ಬಾಯಿ ಬಿಟ್ಟನೋ ಆಗ ಸಮಸ್ತ ಮೀಡಿಯಾಗಳ ಕಣ್ಣು ಬಿದ್ದದ್ದು ಯಡಿಯೂರಪ್ಪನವರ ಮೇಲೆ. ಈಶ್ವರಪ್ಪ ಆಪ್ತ ಸಹಾಯಕನನ್ನು ಯಡ್ಡಿಯ ಆಪ್ತ ಸಹಾಯಕ ಅಪಹರಿಸಲೆತ್ನಿಸುತ್ತಾನೆಂದರೆ ಪ್ರಕರಣದ ನಿಗೂಢತೆಯೇ ಬೇರೆಯಿದೆ. ಇದು ಕೇವಲ ಆಪ್ತ ಸಹಾಯಕರ ನಡುವಿನ ಜಿದ್ದಾಜಿದ್ದಿಯಾಗಿರದೇ ಅವರ ಧಣಿಗಳ ಗುದ್ದಾಟದ ನೇರ ಪರಿಣಾಮದ ಘಟಸ್ಫೋಟ. ಕೇವಲ ರಾಜಕೀಯಕ್ಕಷ್ಟೇ ಸೀಮಿತವಲ್ಲದ ಇನ್ನೆಂಥದ್ದೋ ಅತ್ಯಂತ ಖಾಸಗಿ ರಹಸ್ಯದ ಸುತ್ತಣದ ಘಾತಕ ವೃತ್ತಾಂತ!

ಮಾಧ್ಯಮ ಮತ್ತು ಪೊಲೀಸರ ಈ ಲೆಕ್ಕಾಚಾರ ಹುಸಿಯಾಗುವ ಯಾವ ಲಕ್ಷಣಗಳೂ ಇರಲಿಲ್ಲ. ಬಿಜೆಪಿ ನಾಯಕ ರಾಜೇಂದ್ರ ಅರಸ್ ಹೇಳಿಕೇಳಿ ಯಡ್ಡಿಯ ನಂಬಿಕಸ್ಥ ಬಂಟ. ಈತನನ್ನು ಕರೆಸಿ ಬಾಯಿಬಿಡಿಸಿದ ಪೊಲೀಸರಿಗೆ ಆತ ಹೇಳಿದ್ದು ಯಡ್ಡಿ ಪಿಎ ಸಂತೋಷ್ ಮತ್ತು ಯಾರೋ ನಟಿಮಣಿಯೊಬ್ಬಳ ನಡುವಿನ ಸಂಭಾಷಣೆಯ ಆಡಿಯೋ ವಿನಯ್ ಲ್ಯಾಪ್‌ಟಾಪ್‌ನಲ್ಲಿದ್ದುದರಿಂದ ಅದನ್ನು ಕಿತ್ತುಕೊಳ್ಳುವುದು ತಮ್ಮ ಉದ್ದೇಶವಾಗಿತ್ತು ಎಂದು. ಆಕೆ ಅರೆಕಾಲಿಕ ಮಾಡೆಲ್ ಮತ್ತು ಅರೆಬರೆ ಚಿತ್ರನಟಿಯಷ್ಟೆ. ಹೇಳಿಕೊಳ್ಳುವಂಥ ಒಂದೇ ಒಂದು ಚಿತ್ರದಲ್ಲಿ ನಟಿಸಿಲ್ಲ. ಮಾಡೆಲ್ ಅನ್ನಲು ಹೇಳಿಕೊಳ್ಳುವಂಥ ಯಾವುದೇ ಈವೆಂಟ್‌ನಲ್ಲಾಗಲಿ, ಜಾಹೀರಾತಿನಲ್ಲಾಗಲಿ ಭಾಗವಹಿಸಿರಲಿಲ್ಲ. ಮೊದಮೊದಲು ಇದನ್ನೇ ಪೊಲೀಸರು ನಿಜವೆಂದು ನಂಬಿದ್ದರು. ಆದರೆ ಒಂದೇ ಪಕ್ಷದ ಇಬ್ಬರು ನಾಯಕರ ಭಟ್ಟಂಗಿಗಳು ತಮ್ಮ ಧಣಿಗಳು ಕಿತ್ತಾಡಿದ ಮಾತ್ರಕ್ಕೇ ತಾವುಗಳೂ ಒಬ್ಬರನ್ನೊಬ್ಬರು ಮುಗಿಸಲೆತ್ನಿಸುತ್ತಾರೆಂಬುದು ನಂಬಲಸಾಧ್ಯ ಮಾತು. ಧಣಿಗಳ ಮೇಲೆ ಅದೇನೇ ನಿಯತ್ತು, ನಿಷ್ಠೆ ಅಂತಿದ್ದರೂ ಧಣಿಯ ಎದುರಾಳಿಯನ್ನು ಗುರಿಯಾಗಿಸುವುದನ್ನು ಬಿಟ್ಟು ಆತನ ಭಟ್ಟಂಗಿಯನ್ನು ಹಣಿದು ಯಾವುದೇ ಪ್ರಯೋಜನವಿಲ್ಲವಲ್ಲ!

ಅಂದರೆ ಇದು ಆಪ್ತ ಸಹಾಯಕರ ಜಿದ್ದಾಜಿದ್ದಿಗಿಂತಲೂ ಅವರ ಧಣಿಗಳ ಜಿದ್ದಾಜಿದ್ದಿಯ ವಿಕಾರರೂಪವೆಂಬುದು ಪೊಲೀಸರ ತರ್ಕ ದಿನೇದಿನೇ ಬಲವಾಗುತ್ತಲೇ ಹೋಯಿತು. ಎಚ್‌ಎಎಲ್‌ನ ಹಳೇ ರೌಡಿ ಪ್ರಶಾಂತ್ ಮತ್ತು ಮೈಕೋ ಲೇಔಟ್‌ನ ಘಾತಕಿ ಉಮಾಕಾಂತ್‌ನನ್ನು ಪ್ರತ್ಯೇಕವಾಗಿ ಬಾಯಿಬಿಡಿಸಿದಾಗ ಇಡೀ ಪ್ರಕರಣದ ಮತ್ತಷ್ಟು ನಿಗೂಢ ಸಂಗತಿಗಳು, ಅಪಹರಣ ಕಾರಣಕ್ಕೆ ಪೂರಕ ಘಟನಾವಳಿಗಳೆಲ್ಲ ಒಂದೊಂದಾಗಿ ಹೊರಬಂದವು. ಪ್ರಶಾಂತ್ ಮತ್ತು ಉಮಾಕಾಂತ್ ಪೊಲೀಸರಿಗೆ ಬಾಯಿಬಿಟ್ಟ ಬಹುತೇಕ ಸಂಗತಿಗಳು ಪರಸ್ಪರ ತಾಳೆ ಹೊಂದುತ್ತಿದ್ದವು. ಆ ಪ್ರಕಾರ ಯಡ್ಡಿ ಪಿಎ ಸಂತೋಷ್‌ಗೆ ಅವರಿಬ್ಬರನ್ನೂ ಪರಿಚಯಿಸಿದ್ದೇ ಬೆಂಗಳೂರು ನಗರ ಬಿಜೆಪಿ ಯುವ ಮೋರ್ಚಾ ಕಾರ್ಯದರ್ಶಿ ರಾಜೇಂದ್ರ ಅರಸ್!

"ಡಾಲರ್ಸ್ ಕಾಲೋನಿಯ ಯಡಿಯೂರಪ್ಪನವರ ಮನೆಗೆ ಮೊದಲ ಬಾರಿಗೆ ನಾವುಗಳು ಕಾಲಿಟ್ಟದ್ದು ಜನವರಿ 12 ರಂದು. ಯಡಿಯೂರಪ್ಪನವರ ಮನೆಯ ಸೆಲ್ಲಾರ್‌ನಲ್ಲಿ ಅವತ್ತು ಸಂತೋಷ್ ವಿವೇಕಾನಂದರ ಜಯಂತಿಯನ್ನು ಆಯೋಜಿಸಿದ್ದ. ಕಾರ್ಯಕ್ರಮ ಮುಗಿದಮೇಲೆ ಅರಸ್ ನಮ್ಮಿಬ್ಬರನ್ನು ಸಂತೋಷ್‌ಗೆ ಪರಿಚಯಿಸಿಕೊಟ್ಟಾಗ ಸಂತೋಷ್ ಇವರನ್ನು ಚೆನ್ನಾಗಿ ನೋಡ್ಕೊಳ್ಳಪ್ಪಾ, ಸಮಯಕ್ಕೆ ಬೇಕಾಗುತ್ತಾರೆ ಎಂದು ರಾಜೇಂದ್ರನನ್ನುದ್ದೇಶಿಸಿ ಹೇಳಿದ್ದ. ಆನಂತರ ತುಮಕೂರಿನ ನೊಣವಿನಕೆರೆಯಲ್ಲಿ ಸಂತೋಷ್ ಕಟ್ಟಿಸಿದ್ದ ಬಂಗಲೆಯ ಗೃಹಪ್ರವೇಶಕ್ಕೂ ಅರಸ್ ನಮ್ಮನ್ನು ಕರೆದೊಯ್ದಿದ್ದ. ಇದಾದ ನಂತರ ಮಾರ್ಚ್ ಮೊದಲ ವಾರದ ಹೊತ್ತಿಗೆ ಫೋನ್ ಮಾಡಿದ ಅರಸ್ ನಿಮ್ಮಿಂದ ಸಂತೋಷ್‌ಗೆ ಏನೋ ಕೆಲಸವಾಗಬೇಕಿದೆ. ಬಹುಶಃ ಈಶ್ವರಪ್ಪ ಮುಂದಿನ ಕಾರ್ಯಾಚರಣೆಗಳ ವಿವರ ವಿನಯ್‌ನ ಲ್ಯಾಪ್‌ಟಾಪ್‌ನಲ್ಲಿದೆ. ಅದನ್ನು ಕಿತ್ತುಕೊಂಡು ಸಂತೋಷ್‌ಗೆ ಅನುಕೂಲವಾಗುತ್ತದೆ. ಯಡಿಯೂ... ಮುಖ್ಯಮಂತ್ರಿಯಾದ ಮೇಲೆ ಸಂತೋಷ್ ಅವರ ... ಪೊಲೀಸ್ ಅಧಿಕಾರಿಗಳಿಗೆ ಹೇಳಿಸಿ ನಿಮ್ಮ ರೌಡಿಶೀಟುಗಳನ್ನು ರದ್ದುಪಡಿಸುತ್ತಾರೆ ಎಂಬ ಭರವ... ನಂಬಿ ನಾವುಗಳು ಅಪಹರಣಕ್ಕೆ ಕೈಯಿಟ್ಟೆವು....

ಇದು ಮಹಾಲಕ್ಷ್ಮಿ ಲೇಔಟ್ ಪೊಲೀ... ರೌಡಿಗಳಿಬ್ಬರು ಬಾಯಿಬಿಟ್ಟ ವಾಸ್ತವಾಂಶವೋ ಇನ್ನೆಂಥದ್ದೋ ಹುತ್ತಕ್ಕೆ ಕೈಹಾಕಲು ಪೊ... ದಿಕ್ಕುತಪ್ಪಿಸುತ್ತಿರುವ ರೀತಿಯೋ ಗೊತ್ತಾಗುತ್ತಿಲ್ಲ. ಈಶ್ವರಪ್ಪ ಕಾರ್ಯಾಚರಣೆಯ ವಿವರಗಳು ಬೇಕಿ... ಸಂತೋಷ್‌ಗಿಂತಲೂ ಯಡ್ಡಿಯೂರಪ್ಪನವರಿಗೆ. ... ಆದ್ಯಾರೋ ಮಾಡೆಲ್ ಜೊತೆ ಸಂತೋಷ್‌ನ ವಿ... ಎಂದು ಕತೆ ಹೊಸೆದಿದ್ದ ಅರಸ್‌ನ ಹೇಳಿಕೆಗ... ರೌಡಿಗಳು ಹೇಳಿದ್ದಕ್ಕೂ ವ್ಯತ್ಯಾಸವಿತ್ತು, ಅಂದರೆ ... ಯಡ್ಡಿ ಮತ್ತು ಈಶೂ ನಡುವಿನದ್ದು!

ಆದರೆ ಲ್ಯಾಪ್‌ಟಾಪ್‌ನಲ್ಲಿದ್ದದ್ದು ಈಶ್ವರಪ್ಪನವರ ... ಬ್ರಿಗೇಡ್ ಕುರಿತ ವಿವರಗಳಾ ಅಥವಾ ಯಡ್ಡಿಯ ರಾ... ಭವಿಷ್ಯಕ್ಕೆ ಕಂಟಕವಾದ ವೀಡಿಯೋ ತುಣುಕಾ ಎಂ... ಪ್ರಶ್ನೆಯಾಗಿತ್ತು. ರಾಯಣ್ಣ ಬ್ರಿಗೇಡ್‌ನ ಕಾರ್ಯಕ್ರಮವನ್ನು ತಿಳಿದುಕೊಂಡು ಮಾಡುವಂಥದ್ದಾದರೂ ಏನಿತ್ತು? ಮೂರ್ನಾಲ್ಕು... ಯಡ್ಡಿ ವಿರೋಧಿಗಳು ಯಾರದೋ ಮನೆಯಲ್ಲಿ... ಊಟ ಮಾಡಿದ್ದು, ಇನ್ನೆಲ್ಲೋ ಟೀ ಕುಡಿದಿದ್ದನ್ನೂ ... ಈಶ್ವರಪ್ಪನೇ ಮೇಲೆ ಬಿದ್ದು ಸುದ್ದಿ ಮಾಡಿಸುತ್ತಿದ್ದಾಗ, ಕಾರ್ಯಕ್ರಮಗಳನ್ನೂ ವಾರಕ್ಕೆ ಮೊದಲೇ ಪ... ಪ್ರಕಟಿಸುವಾಗ ರಾಯಣ್ಣ ಬ್ರಿಗೇಡಿನ ... ಈಶ್ವರಪ್ಪನವರದ್ದಾಗಲಿ ಅಪಹರಿಸಿ, ಲ್ಯಾಪ್‌ಟಾಪ್ ತಿಳಿದುಕೊಳ್ಳುವಂಥದ್ದಾದರೂ ಏನಿತ್ತು?

ಇಂಥಾ ಕ್ಷುಲ್ಲಕ ವಿಷಯಕ್ಕೆ ಯಾರಾದರೂ ಅಪ... ಕೈಹಾಕುತ್ತಾರೆಂಬುದನ್ನು ನಂಬುವಷ್ಟು ಪೊಲೀ... ಮುಗ್ಧರಲ್ಲ. ತಮ್ಮ ರೌಡಿ ಶೀಟುಗಳನ್ನು ... ಮಾಡುತ್ತಾರೆಂಬ ಭರವಸೆಯನ್ನು ನಂಬಿ ಯಾವ ರೌ... ಅಪಹರಣದಂಥ ದುಸ್ಸಾಹಸಕ್ಕೆ ಕೈಹಾಕುವುದಿಲ್ಲ... ರ ಮೇ 9 ರಿಂದ 11 ರವರೆಗೆ ಮೂರ್ನಾಲ್ಕು ... ಕಾಲ ಎರಡೆರಡು ಕಾರುಗಳಲ್ಲಿ ವಿನಯ್ ... ರೌಂಡಿಂಗ್ ಮಾಡುತ್ತಾರೆಂದರೆ ಅದರ ಖರ್ಚೇನೂ ... ದಿನವೊಂದಕ್ಕೆ ಕಾರು, ಪೆಟ್ರೋಲು, ಮೊಬೈಲು... ಪಾರ್ಟಿ ಮಾತ್ರವಲ್ಲದೆ ಅಪಹರಿಸಿ ತಂದವನನ್ನು ಕ... ಗೋಡೌನ್, ಅದಕ್ಕೆ ಪಹರೆ, ಆಕಸ್ಮಾತ್ ಪೊ... ಸಿಕ್ಕಿಬಿದ್ದರೆ ಪೊಲೀಸ್ ಖರ್ಚುವೆಚ್ಚ, ವಕೀಲರ... ಜಾಮೀನಿನ ವ್ಯವಸ್ಥೆ ಪೊಲೀಸರಿಂದ ತಲೆ ಮರೆಸಿ... ಖರ್ಚು ಎಲ್ಲವನ್ನೂ ಲೆಕ್ಕ ಹಾಕಿಯೇ ರೌ... ಕಾರ್ಯಾಚರಣೆಗಿಳಿಯುವುದು.


ಸಂತೋಷ್‌ನ ವೀಡಿಯೋ ಕತೆಯಷ್ಟೇ ಅಗ... ರೀತಿ ಕಿಡ್ನಾಪ್‌ಗೆ ರೌಡಿಗಳಿಗೆ ಮಾಡುವ ... ಕಾಲುಭಾಗವನ್ನೇ ವಿನಯ್ ಕೈಗಿತ್ತು... ಮುಗಿಸಿಕೊಳ್ಳುತ್ತಿದ್ದ ಲಕ್ಷಾಂತರ ರೂಪಾಯಿ ಖರ್ಚು... ರೌಡಿಗಳನ್ನು ಛೂಬಿಟ್ಟು, ಯಾರನ್ನೋ ಕಿಡ್ನಾಪ್... ಆತನ ಬಾಯಿ ಬಿಡಿಸಿ ಪಡೆಯುವಂಥದ್ದು ... ಲ್ಯಾಪ್‌ಟಾಪ್ ಅಥವಾ ಅದನ್ನೂ ಮೀರಿದ ವಿ... ಸೀಡಿಯಾ ಎಂಬುದಷ್ಟೇ ಇಲ್ಲಿನ ಮೂಲಪ್ರಶ್ನೆ. ಪ್ರ... ವಿಷಯದ ದಿಕ್ಕುತಪ್ಪಿಸುತ್ತಿದ್ದಾರಾ ಅಥವಾ ಮ... ಬೇಧಿಸುವತನಕ ಏನನ್ನೂ ಹೊರಗೆಡುಹದ... ಬಳಸುತ್ತಿದ್ದಾರಾ?

ಸದ್ಯ ಅಂಡರ್‌ವರ್ಲ್ಡ್‌ನ ಮೂಲವೊಂದರ... ಕಳೆದೊಂದು ವರ್ಷಕ್ಕೂ ಮೊದಲೇ ಈಶ್ವರಪ್ಪನವರ ... ಯಡ್ಡಿಯನ್ನು ಹಿಂಬಾಲಿಸಿತ್ತು, ಯಡ್ಡಿ ರಾತ್ರಿ ... ನಿಗೂಢ ಬಂಗಲೆಗಳು, ಬೆಂಗಳೂರಿನ ಹೊರವ... ಯಡ್ಡಿ ನಡೆಸುತ್ತಿದ್ದ ಸಮಾಲೋಚನೆಗಳಿಗೆಲ್ಲ ಕಡ್ಡಾ... ಓರ್ವ ಮಹಿಳೆ ಇರಲೇಬೇಕಿತ್ತು, ಇಂಥಲ್ಲೆಲ್ಲ ... ನೇರವಾಗಿ ಸಕಲ ವ್ಯವಸ್ಥೆಯನ್ನೂ ಕಲ್ಪಿಸುತ್ತಿದ್ದವನು ಸ... ಆದರೆ 6 ತಿಂಗಳ ಹಿಂದಷ್ಟೇ ಸಂತೋಷ್‌ನ ಕಾರು... ನಿಗೂಢವಾಗಿ ನಾಪತ್ತೆಯಾದ.

ಅಂದರೆ ಈ ಡ್ರೈವರ್‌ನನ್ನು ಸಂತೋಷ್‌ನ ಅ... ತೂರಿಸಿದ್ದೇ ಈಶ್ವರಪ್ಪ, ಅದೂ ವಿನಯ್‌ನ ... ಸಂತೋಷ್‌ನ ಕಾರ್ ಡ್ರೈವರ್ ಯಡ್ಡಿಯ ರಾತ್ರಿ ತಂ... ಅಥವಾ ಆಪ್ತ ಸಮಾಲೋಚನೆಯ ಯಾವ... ವೀಡಿಯೋ ಮಾಡಿ ಈಶ್ವರಪ್ಪನವರಿಗೆ ತಲುಪಿಸಿ... ನಡೆದ ಕಿಡ್ನಾಪ್ ಯತ್ನಕ್ಕೂ ಇದಕ್ಕೂ ಸಂಬಂಧ... ಎಂಬುದಲ್ಲದೆ ಬೇರೆ ಯಾವುದೇ ಕಾರಣಗಳೂ ಕಾ...

■ ರಾ. ಸೋಮ...

ಶ್ರೀರಂಗಪಟ್ಟಣ: ರವೀಂದ್ರ ಶ್ರೀಕಂಠಯ್ಯ ಜೆಡಿಎಸ್‌ಗೆ?




ಕಳೆದೆರಡು ವಾರದಿಂದೀಚೆಗೆ ಶ್ರೀರಂಗಪಟ್ಟಣದಲ್ಲಿ ದೇವೇಗೌಡ-ಕುಮಾರಸ್ವಾಮಿ ಆಡುತ್ತಿರುವ ರಾಜಕೀಯ ಕಂಡು ಮತದಾರರು ಸುಸ್ತಾಗಿದ್ದಾರೆ. ಆರು ಬಾರಿ ಸೋತರೂ ಜನರೊಟ್ಟಿಗೆ ಬೆರೆತು ಗೌರವಯುತವಾಗಿ ಜನಸೇವೆ ಮಾಡಿಕೊಂಡಿದ್ದ ರೈತನಾಯಕ ಕೆ.ಎಸ್.ನಂಜುಂಡೇಗೌಡರನ್ನು ಮೂರು ತಿಂಗಳ ಕೆಳಗೆ ಕರೆಸಿಕೊಂಡು ನಿನಗೆ ಟಿಕೆಟ್ ಕೊಡುತ್ತೇವೆಂದು ಹೇಳಿ ಕಳುಹಿಸಿದ್ದ ಅಪ್ಪ-ಮಗ ಈಗ ಏಕಾಏಕಿ ಅಹಂಕಾರಿ ರವೀಂದ್ರ ಶ್ರೀಕಂಠಯ್ಯನಿಗೆ ಮಣೆ ಹಾಕಲು ಮುಂದಾಗಿರೋದು ಇದಕ್ಕೆ ಕಾರಣ. ಜೆಡಿಎಸ್ ದಂಡನಾಯಕರ ಮಾತು ನಂಬಿ ತಾನೇ ಕ್ಯಾಂಡಿಡೇಟ್ ಎಂದು ಹೇಳಿಕೊಂಡು ಕ್ಷೇತ್ರವನ್ನು ಸುತ್ತಿದ್ದ ನಂಜುಂಡೇಗೌಡರ ಸ್ಥಿತಿ ಕಂಡು ಕ್ಷೇತ್ರದ ಜನ ಮರುಗುತ್ತಿದ್ದಾರೆ.


ಕಳೆದ ರಾಜ್ಯಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಬಿ.ರಾಮಮೂರ್ತಿಯ ಕಾಂಚಾಣಕ್ಕೆ ತನ್ನನ್ನೇ ಮಾರಿಕೊಂಡು, ಚಲುವರಾಯಸ್ವಾಮಿ ಜೊತೆಗೂಡಿ ದೇವೇಗೌಡರಿಗೇ ಭಗನಿಗೂಟ ಪೆಟ್ಟಿದ್ದ ಶಾಸಕ ರಮೇಶ್‌ಬಾಬುಗೊಂದು ಗತಿ ಕಾಣಿಸಲೇಬೇಕೆಂದು ನಿರ್ಧರಿಸಿರುವ ಅಪ್ಪ-ಮಗನ ಜೋಡಿ ಕಳೆದ ಮೂರು ತಿಂಗಳ ಹಿಂದೆಯೇ ನಂಜುಂಡೇಗೌಡರ ಹೆಗಲ ಮೇಲೆ ಕೈಯಿಟ್ಟು, ಜೆಡಿಎಸ್ ಟಿಕೆಟ್ ಕೊಡುವ ಭರವಸೆ ನೀಡಿದ್ದರು. ಅವರ ಮಾತುಗಳನ್ನು ನಂಬಿದ ನಂಜುಂಡೇಗೌಡ ತನಗೇ ಜೆಡಿಎಸ್ ಟಿಕೆಟ್ ಗ್ಯಾರಂಟಿ ಎಂದು ಕ್ಷೇತ್ರದಾದ್ಯಂತ ಸುತ್ತುತ್ತಿದ್ದರು. ಆದರೆ ಕಳೆದ ಮೂರು ತಿಂಗಳಿನಿಂದ ಕ್ಷೇತ್ರದಲ್ಲಿ ನಡೆಯುತ್ತಿದ್ದ ರಾಜಕೀಯ, ವಾರದಿಂದೀಚೆಗೆ ಏಕಾಏಕಿ ಬದಲಾಗಿದೆ. ಶ್ರೀರಂಗಪಟ್ಟಣ ಅಖಾಡದಲ್ಲಿ ರಮೇಶ್‌ಬಾಬು ಎದುರಿಸಲು ಸಜ್ಜನ ನಂಜುಂಡೇಗೌಡರಿಗಿಂತ ಅಹಂಕಾರಿ ರವೀಂದ್ರ ಶ್ರೀಕಂಠಯ್ಯನೇ ಸರಿ ಎಂದು ತೀರ್ಮಾನಿಸಿದ ಅಪ್ಪ-ಮಗ ಆತನ ಹೆಗಲ ಮೇಲೆ ಕೈಯಿಟ್ಟು ಈಗಾಗಲೇ ಮಾತುಕತೆ ನಡೆಸಿ ಜೆಡಿಎಸ್ ಟಿಕೆಟ್ ನೀಡುವ ಭರವಸೆ ನೀಡಿದ್ದಾರೆಂಬ ಸುದ್ದಿ ಜೋರಾಗಿ ಕೇಳಿಬರುತ್ತಿದೆ.

ರವೀಂದ್ರ ಶ್ರೀಕಂಠಯ್ಯನನ್ನು ಬೆಂಗಳೂರಿಗೆ ಕರೆಸಿಕೊಂಡು ಮಾತುಕತೆ ನಡೆಸಿರುವ ದೇವೇಗೌಡ-ಕುಮಾರಸ್ವಾಮಿ ಜೋಡಿ ಜೆಡಿಎಸ್ ಟಿಕೆಟ್ ಕೊಡುವ ಭರವಸೆ ನೀಡಿದ್ದಾರೆಂದು ರವೀಂದ್ರನ ಬೆಂಬಲಿಗರೇ ಹೇಳಿಕೊಂಡು ಸುತ್ತುತ್ತಿದ್ದಾರೆ. ಈ ಮಧ್ಯೆ ಆಗಸ್ಟ್ 31ರಂದು ಶ್ರೀರಂಗಪಟ್ಟಣ ಟಿಎಪಿಸಿಎಂಎಸ್ ಸಭಾಂಗಣದಲ್ಲಿ ರವೀಂದ್ರ ಶ್ರೀಕಂಠಯ್ಯ ಅಧಿಕೃತವಾಗಿ ಜೆಡಿಎಸ್ ಸೇರುವ ಬಗ್ಗೆ ಬೆಂಬಲಿಗರು-ಅಭಿಮಾನಿಗಳು ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳಲಿದ್ದಾರೆಂಬ ಮಾತುಗಳು ಕೇಳಿಬಂದಿದೆ. ಒಂದು ವೇಳೆ ರವೀಂದ್ರ ಶ್ರೀಕಂಠಯ್ಯ ಜೆಡಿಎಸ್ ಸೇರಿದರೆ ಆತನಿಗೆ ಜೆಡಿಎಸ್ ಟಿಕೆಟ್ ಪಕ್ಕಾ ಎನ್ನುವುದರಲ್ಲಿ ಯಾವುದೇ ಅನುಮಾನವಿಲ್ಲ. ಅಪ್ಪ-ಮಗನ ರಾಜಕೀಯ ಪಗಡೆಯಾಟದಲ್ಲಿ ನಂಜುಂಡೇಗೌಡರು ದಾಳವಾದದ್ದನ್ನು ಕಂಡು ರೈತನಾಯಕನ ಬೆಂಬಲಿಗರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ನಂಜುಂಡೇಗೌಡರಿಗೆ ಕೈ ತಪ್ಪಲಿದೆಯಾ ಟಿಕೆಟ್?


ಕಳೆದ ಮೂರು ದಶಗಳಿಂದ ರೈತಸಂಘದ ಮುಂಚೂಣಿ ನಾಯಕರಾದ ನಂಜುಂಡೇಗೌಡ ಪಕ್ಷೇತರವಾಗಿ ಆರು ಚುನಾವಣೆಗಳಲ್ಲಿ ಸೋತಿದ್ದಾರೆ. ಸೋತರೂ ಸದಾ ಜನರಿಂದ ಮರೆಯಾಗದೆ ಅವರ ಸೇವೆಯಲ್ಲಿ ತೊಡಗಿದ್ದಾರೆ. ಕಾವೇರಿ ವಿಚಾರದಲ್ಲಿ ಬೀದಿಗಿಳಿದು ಹೋರಾಡುವ ಗೌಡರು ನಾಡು-ನುಡಿ, ನೆಲ-ಜಲದ ವಿಚಾರದಲ್ಲಿ ಮೊದಲು ದನಿಯೆತ್ತುತ್ತಾರೆ. ಶ್ರೀರಂಗಪಟ್ಟಣದಲ್ಲಿ ನಡೆಯುವ ಯಾವುದೇ ಜನಪರ ಹೋರಾಟಗಳಲ್ಲಿ ನಂಜುಂಡೇಗೌಡರ ಹಾಜರಿ ಇದ್ದೇ ಇರುತ್ತದೆ. ತಾಲೂಕಿನಲ್ಲಿ ನಡೆಯುತ್ತಿರುವ ಅಕ್ರಮ ಗಣಿಗಾರಿಕೆ, ಭೂಗಳ್ಳರ ವಿರುದ್ಧದ ಹೋರಾಟಗಳಲ್ಲಿ ಗೌಡರ ಸದ್ದು ಇದ್ದೇ ಇರುತ್ತದೆ. ಬಡವರು, ಶ್ರಮಿಕರು, ಕಾರ್ಮಿಕರ ಪರ ಹತ್ತು ಹಲವು ಹೋರಾಟಗಳನ್ನು ರೂಪಿಸಿರುವ ಗೌಡರ ಹಿಂದೆ 20ರಿಂದ 25 ಸಾವಿರದಷ್ಟು ಮತಗಳಿವೆ. ಸರಳ ವ್ಯಕ್ತಿತ್ವದ ನಂಜುಂಡೇಗೌಡರು ನಡೆಸಿದ ಹೋರಾಟದ ಕಾರಣಕ್ಕೆ ಇಷ್ಟು ದಿನ ಪಿಎಸ್‌ಎಸ್‌ಕೆ ಕಾರ್ಖಾನೆ ನಷ್ಟದಲ್ಲಿದ್ದರೂ ನಡೆಯುತ್ತಿತ್ತು. ಆದರೆ ಅವರು ಕಾರ್ಖಾನೆ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಇಳಿದ ಮೇಲೆ ಪಿಎಸ್‌ಎಸ್‌ಕೆ ಕಾರ್ಖಾನೆ ಬಾಗಿಲು ತೆರೆಯಲೇ ಇಲ್ಲ. ಹೋರಾಟದ ವ್ಯಕ್ತಿತ್ವದ ನಂಜುಂಡೇಗೌಡರು ಕಾರ್ಖಾನೆ ಬಾಗಿಲು ಮುಚ್ಚಿದಾಗಲೆಲ್ಲ ಆಡಳಿತ ಸರ್ಕಾರದೊಂದಿಗೆ ಗುದ್ದಾಡಿ ಕಾರ್ಖಾನೆ ಆರಂಭವಾಗುವಂತೆ ಮಾಡುತ್ತಿದ್ದರು. ಕಳೆದ ಮೂರು ದಶಕಗಳಿಂದಲೂ ರೈತಸಂಘದಲ್ಲಿದ್ದುಕೊಂಡು ಜನಪರ ಹೋರಾಟಗಳಲ್ಲಿ ತೊಡಗಿಕೊಂಡ ಗೌಡರು ಕಳೆದ ಆರು ವಿಧಾನಸಭಾ ಚುನಾವಣೆಯಲ್ಲೂ 20ರಿಂದ 25 ಸಾವಿರ ಮತಗಳನ್ನು ಪಡೆದುಕೊಂಡೇ ಬಂದಿದ್ದಾರೆ.





ಅದೃಷ್ಟ ನೆಟ್ಟಗಿದ್ದರೆ 2004ರ ಚುನಾವಣೆಯಲ್ಲಿ ನಂಜುಂಡೇಗೌಡರು ಜೆಡಿಎಸ್‌ನ ವಿಜಯಲಕ್ಷ್ಮಿ ಬಂಡಿಸಿದ್ದೇಗೌಡರ ವಿರುದ್ಧ ಗೆದ್ದು ಶಾಸಕರಾಗಿ ಆಯ್ಕೆಯಾಗಬೇಕಿತ್ತು. ಆದರೆ ಕೇವಲ 1258 ಮತಗಳಿಂದ ಸಣ್ಣ ಅಂತರದಲ್ಲಿ ಸೋತು ಬಿಟ್ಟರು. ನಂಜುಂಡೇಗೌಡರ ಬಗ್ಗೆ ಕ್ಷೇತ್ರದ ಜನರಲ್ಲಿ ಪ್ರೀತಿ, ಕನಿಕರ ಇದೆ. ಅದನ್ನೇ ಎನ್‌ಕ್ಯಾಶ್ ಮಾಡಿಕೊಂಡು ಜೆಡಿಎಸ್‌ನಿಂದ ನಂಜುಂಡೇಗೌಡರನ್ನು ಸೇರಿಸಿಕೊಂಡು ಗೆಲ್ಲಿಸಿಕೊಳ್ಳಬಹುದೆಂಬ ಆಸೆ ತಾಲ್ಲೂಕು ಜೆಡಿಎಸ್ ನಾಯಕರಲ್ಲಿತ್ತು.

ಅಲ್ಲದೆ ನಂಜುಂಡೇಗೌಡರು ಇದುವರೆಗೂ ಸಜ್ಜನಿಕೆಯಿಂದಲೇ ರಾಜಕಾರಣ ಮಾಡಿಕೊಂಡು ಬಂದಿದ್ದಾರೆ. ಅವರು ಜೆಡಿಎಸ್‌ಗೆ ಬಂದರೆ ಮುಖಂಡರಿಗೆ ಮತ್ತು ಕಾರ್ಯಕರ್ತರಿಗೆ ಯಾವುದೇ ತೊಂದರೆ ಮಾಡುವುದಿಲ್ಲ, ಎಲ್ಲರನ್ನೂ ಸಮಾನವಾಗಿ ನೋಡುವ, ವರಿಷ್ಠರ ಮಾತಿಗೆ ಬೆಲೆ ಕೊಡುವ ನಂಜುಂಡೇಗೌಡ ಜೆಡಿಎಸ್‌ಗೆ ಬಂದರೆ ಸಮರ್ಥ ಅಭ್ಯರ್ಥಿಯಾಗುತ್ತಾರೆಂದು ದೇವೇಗೌಡ-ಕುಮಾರಸ್ವಾಮಿಗೆ ತಿಳಿಸಿದ್ದರು. ಅಲ್ಲದೆ ಯಾವುದೇ ಕಾರಣಕ್ಕೂ ದುರಹಂಕಾರ ವ್ಯಕ್ತಿತ್ವದ ರವೀಂದ್ರ ಶ್ರೀಕಂಠಯ್ಯನನ್ನು ಜೆಡಿಎಸ್‌ಗೆ ಸೇರಿಸಿಕೊಳ್ಳುವುದು ಬೇಡವೇ ಬೇಡ. ಇದುವರೆಗೂ ಕಾಂಗ್ರೆಸ್‌ನಲ್ಲಿದ್ದು ಜೆಡಿಎಸ್ ವಿರುದ್ಧ ರಾಜಕಾರಣ ಮಾಡಿರುವ ರವೀಂದ್ರ ಶ್ರೀಕಂಠಯ್ಯ ನಮ್ಮ ಮುಖಂಡರಿಗೆ ಮತ್ತು ಕಾರ್ಯಕರ್ತರಿಗೆ ಬಹಳ ಕಾಟ ಕೊಟ್ಟಿದ್ದಾನೆ.



ಯಾವುದೇ ಅಧಿಕಾರವಿಲ್ಲದಿದ್ದರೂ ಕ್ಷೇತ್ರದಲ್ಲಿ ತಾನೇ ಬಾಸ್ ಎಂದು ಸರ್ವಾಧಿಕಾರಿಯಂತೆ ವರ್ತಿಸುವ ರವೀಂದ್ರ ಶ್ರೀಕಂಠಯ್ಯನನ್ನು ಜೆಡಿಎಸ್‌ಗೆ ಸೇರಿಸಿಕೊಂಡರೆ ವರಿಷ್ಠರಾದ ತಮಗೇ ಮರ್ಯಾದೆ ಕೊಡುವುದಿಲ್ಲ, ಹಿಟ್ಲರ್ ವ್ಯಕ್ತಿತ್ವದ ಸಿಡುಕು ಮೂತಿಯ ರವೀಂದ್ರನಿಗಿಂತ ಎಲ್ಲರೊಂದಿಗೂ ಬೆರೆಯುವ ಸಜ್ಜನಿಕೆಯ ನಂಜುಂಡೇಗೌಡರೇ ಬೆಟರು ಎಂಬ ಮಾಹಿತಿಯನ್ನು ಸ್ಥಳೀಯ ಜೆಡಿಎಸ್ ನಾಯಕರು ಅಪ್ಪ-ಮಗನ ಕಿವಿಗೆ ಹಾಕಿದ್ದರು. ಇದನ್ನೆಲ್ಲಾ ಅಳೆದು ತೂಗಿದ ಅಪ್ಪ-ಮಗ ಕೊನೆಗೆ ನಂಜುಂಡೇಗೌಡರನ್ನು ಕರೆಸಿಕೊಂಡು ಮೂರ್ನಾಲ್ಕು ಬಾರಿ ಮಾತುಕತೆ ನಡೆಸಿದ್ದರು. ಅಲ್ಲದೆ ದೇವೇಗೌಡರ ಮತ್ತೊಬ್ಬ ಪುತ್ರ ಡಾ.ರಮೇಶ್ ಜೊತೆ ಹೆಚ್ಚಿನ ಒಡನಾಟ ಹೊಂದಿದ್ದ ನಂಜುಂಡೇಗೌಡರಿಗೆ ಆತ ನೀವೇ ನಮ್ಮ ಪಕ್ಷದ ಅಧಿಕೃತ ಅಭ್ಯರ್ಥಿ, ಧೈರ್ಯವಾಗಿ ಕ್ಷೇತ್ರದಲ್ಲಿ ಪ್ರಚಾರ ನಡೆಸಿ ಎಂದು ಹೇಳಿದ್ದರಂತೆ. ಇಷ್ಟೆಲ್ಲಾ ಭರವಸೆ ನೀಡಿದ ನಂತರವೇ ನಂಜೇಗೌಡರು ಕಳೆದ ಮೂರು ತಿಂಗಳಿಂದ ಕ್ಷೇತ್ರದಾದ್ಯಂತ ಪ್ರಚಾರದಲ್ಲಿ ತೊಡಗಿದ್ದು.


ರವೀಂದ್ರನಿಗೆ ಜೆಡಿಎಸ್ ಮಣೆ?


ಈಗಾಗಲೇ ದೇವೇಗೌಡ ಹಾಗೂ ಕುಮಾರಸ್ವಾಮಿಯೇ ತಮ್ಮ ಮನೆಗೆ ರವೀಂದ್ರನನ್ನು ಕರೆಸಿ ಮಾತುಕತೆ ನಡೆಸಿರುವುದು ರವೀಂದ್ರನಿಗೆ ಜೆಡಿಎಸ್ ಟಿಕೆಟ್ ಗ್ಯಾರಂಟಿ ಎಂಬ ಸುದ್ದಿಗೆ ಸಾಕ್ಷಿ ಒದಗಿಸಿದೆ. ಹಣಬಲ, ತೋಳ್ಬಲ, ಅಹಂಕಾರಿ ವ್ಯಕ್ತಿತ್ವದ ರವೀಂದ್ರನಿಗೆ ಜೆಡಿಎಸ್ ಟಿಕೆಟ್ ಕೊಟ್ಟರೆ ತಮ್ಮ ವೈರಿ ರಮೇಶ್‌ಬಾಬುನನ್ನು ಶ್ರೀರಂಗಪಟ್ಟಣ ಅಖಾಡದಲ್ಲಿ ಮಲಗಿಸಬಹುದೆಂದು ದೂರಾಲೋಚನೆ ಅಪ್ಪ-ಮಗನದ್ದೆಂದು ಹೇಳಲಾಗುತ್ತಿದೆ. ಆಗಸ್ಟ್ 31ರಂದು ಶ್ರೀರಂಗಪಟ್ಟಣದ ಟಿಎಪಿಸಿಎಂಎಸ್ ಸಭಾಂಗಣದಲ್ಲಿ ರವೀಂದ್ರ ಶ್ರೀಕಂಠಯ್ಯ ತಮ್ಮ ಬೆಂಬಲಿಗರು, ಅಭಿಮಾನಿಗಳು, ಹಿತೈಷಿಗಳ ಸಭೆ ಕರೆದಿದ್ದು, ಅಂದು ತಮ್ಮ ನಿಲುವು ತಿಳಿಸಲಿದ್ದಾರೆಂದು ರವೀಂದ್ರನ ಬೆಂಬಲಿಗರು ಪತ್ರಿಕಾಗೋಷ್ಠಿ ನಡೆಸಿ ತಿಳಿಸಿದ್ದಾರೆ. ಆದರೆ ಈಗಾಗಲೇ ಜೆಡಿಎಸ್ ಸೇರುವ ಬಗ್ಗೆ ದೇವೇಗೌಡ- ಕುಮಾರಸ್ವಾಮಿ ಜೊತೆ ಮಾತುಕತೆ ಮುಗಿದಿದ್ದು, ಅಧಿಕೃತವಾಗಿ ಸೇರುವುದಷ್ಟೇ ಬಾಕಿ ಉಳಿದಿದೆ ಎಂದು ರವೀಂದ್ರನ ಬೆಂಬಲಿಗರು ಹೇಳಿಕೊಂಡು ಓಡಾಡುತ್ತಿದ್ದಾರೆ.

ರವೀಂದ್ರ ಶ್ರೀಕಂಠಯ್ಯ ತನ್ನ ಗುರು ಎಸ್.ಎಂ. ಕೃಷ್ಣ ಕಾಂಗ್ರೆಸ್ ಪಕ್ಷಕ್ಕೆ ರಾಜೀನಾಮೆ ನೀಡಿ ಬಿಜೆಪಿ ಸೇರಿದ ಸಂದರ್ಭದಲ್ಲಿ ತಾನೂ ಕೂಡ ಕಾಂಗ್ರೆಸ್‌ಗೆ ರಾಜೀನಾಮೆ ಕೊಟ್ಟಿದ್ದ. ಆದರೆ ತನ್ನ ಗುರು ಕೃಷ್ಣರನ್ನು ಹಿಂಬಾಲಿಸಿ ಬಿಜೆಪಿ ಸೇರಿರಲಿಲ್ಲ. ಶ್ರೀರಂಗಪಟ್ಟಣದಲ್ಲಿ ಬಿಜೆಪಿಗೆ ಬೇಸ್ ಇಲ್ಲದಿರುವುದರಿಂದ ಬಿಜೆಪಿ ಸೇರದೆ ಸೂಕ್ತ ಸಮಯಕ್ಕಾಗಿ ಹೊಂಚು ಹಾಕುತ್ತಿದ್ದ. ಪಕ್ಷೇತರನಾಗಿ ನಿಂತು ಶ್ರೀರಂಗಪಟ್ಟಣ ಕ್ಷೇತ್ರದಲ್ಲಿ ರಮೇಶ್‌ಬಾಬು ಎದುರಿಸಿ ರಾಜಕಾರಣ ಮಾಡುವುದು ಕಷ್ಟ ಎಂದು ತಿಳಿದ ರವೀಂದ್ರನಿಗೆ ಜೆಡಿಎಸ್ ವರಿಷ್ಠರು ಎಂದಾದರೊಂದು ದಿನ ತನ್ನನ್ನು ಕರೆಯುತ್ತಾರೆಂದು ಗೊತ್ತಿತ್ತು. ನಂಜುಂಡೇಗೌಡರ ಬಳಿ ಹಣವಿಲ್ಲ, ತನ್ನ ಬಳಿ ಹಣ-ತೋಳ್ಬಲ ಎರಡೂ ಇರುವುದರಿಂದ ಅವರೇ ಕರೆಯುವವರೆಗೂ ಹೋಗಬಾರದೆಂದು ಅಹಂನಿಂದಲೇ ಅಂತರ ಕಾಪಾಡಿಕೊಂಡು ಬಂದಿದ್ದ. ಈಗ ಆತನ ಅಹಂಗೆ ಕಾಲ ಕೂಡಿಬಂದಿದೆ.

ಒಂದಾದ ನಂಜುಂಡೇಗೌಡ-ಸಚ್ಚಿ

ರಾಜ್ಯಸಭೆ ಚುನಾವಣೆಯಲ್ಲಿ ರಾಮಮೂರ್ತಿಯ ಕೈಹಿಡಿದು ಋಣ ತೀರಿಸಲು ಜೆಡಿಎಸ್ ಶಾಸಕ ರಮೇಶ್‌ಬಾಬುಗೆ ಕಾಂಗ್ರೆಸ್ ಪಕ್ಷ ಟಿಕೆಟ್ ನೀಡುವುದು ಖಾತ್ರಿಯಾಗಿದೆ. ಹೀಗಿರುವಾಗ ತನಗೆ ಕಾಂಗ್ರೆಸ್ ಟಿಕೆಟ್ ಸಿಗುವುದು ಡೌಟು ಎಂದು ತಿಳಿದ ಕಾಂಗ್ರೆಸ್ ಮುಖಂಡ ಇಂಡುವಾಳು ಸಚ್ಚಿದಾನಂದ ತೆನೆ ಹೊರಲು ಸಿದ್ಧನಾಗಿದ್ದ. ದೇವೇಗೌಡರ ವಿಶ್ವಾಸ ಗಳಿಸಿರುವ ಸಚ್ಚಿದಾನಂದ ತಾನೂ ಕೂಡ ಜೆಡಿಎಸ್ ಟಿಕೆಟ್‌ನಿಂದ ಸ್ಪರ್ಧಿಸಲು ಸಿದ್ಧತೆ ನಡೆಸಿದ್ದ. ಆದರೆ ಈಗಷ್ಟೇ 30ರ ಹರೆಯದ ಸಚ್ಚಿದಾನಂದನಿಗೆ ಇನ್ನು ವಯಸ್ಸಿರುವುದರಿಂದ ಜೆಡಿಎಸ್ ಟಿಕೆಟ್ ಕೊಡಲು






ಅಪ್ಪ-ಮಗ ಮುಂದಾಗಿರಲಿಲ್ಲ. ಈಗ ನಂಜುಂಡೇಗೌಡರಿಗೂ ಜೆಡಿಎಸ್ ಟಿಕೆಟ್ ಕೈ ತಪ್ಪುವ ಸಾಧ್ಯತೆಯಿರುವುದರಿಂದ ಇಬ್ಬರೂ ಮಂಡ್ಯದ ಪ್ರವಾಸಿಮಂದಿರದಲ್ಲಿ ಕೂತು ಚರ್ಚೆ ನಡೆಸಿರುವುದು ರಾಜಕೀಯ ವಲಯದಲ್ಲಿ ಸಂಚಲನ ಮೂಡಿಸಿದೆ. ರವೀಂದ್ರ ಶ್ರೀಕಂಠಯ್ಯನಿಗೆ ಜೆಡಿಎಸ್ ಟಿಕೆಟ್ ಸಿಕ್ಕರೂ ತಾವಿಬ್ಬರೂ ಒಂದಾಗಿ ಹೆಜ್ಜೆಯಿಡಬೇಕೆಂದು ತೀರ್ಮಾನಿಸಿದ್ದಾರೆ.

"ರವೀಂದ್ರ ಶ್ರೀಕಂಠಯ್ಯ ಜೆಡಿಎಸ್ ಅಭ್ಯರ್ಥಿ ಎಂದು ಎಲ್ಲೂ ಘೋಷಣೆ ಮಾಡಿಲ್ಲ. ನಾನು ಕೂಡ ಜೆಡಿಎಸ್ ಟಿಕೆಟ್‌ನ ಪ್ರಬಲ ಆಕಾಂಕ್ಷಿ. ಈ ಬಗ್ಗೆ ಜೆಡಿಎಸ್ ವರಿಷ್ಠರು ಭರವಸೆ ನೀಡಿ ಗೌರವಯುತವಾಗಿ ನಡೆಸಿಕೊಳ್ಳುವುದಾಗಿ ಹೇಳಿದ್ದಾರೆ. ಕೆಲವರು ರವೀಂದ್ರನಿಗೆ ಟಿಕೆಟ್ ಎಂದು ಹೇಳಿಕೊಂಡು ಸುಳ್ಳು ಸುದ್ದಿ ಹಬ್ಬಿಸುತ್ತಿದ್ದಾರೆ. ಇದಕ್ಕೆಲ್ಲಾ ನಾನು ತಲೆ ಕೆಡಿಸಿಕೊಳ್ಳುವುದಿಲ್ಲ" ಎಂದು ನಂಜುಂಡೇ ಗೌಡರು ಮಾಧ್ಯಮಗಳಿಗೆ ಹೇಳಿಕೆ ಕೊಟ್ಟಿದ್ದಾರೆ. ಇನ್ನು ಸಚ್ಚಿದಾನಂದ ಕೂಡ "ನನ್ನ- ನಂಜುಂಡೇಗೌಡರದ್ದು ಗುರು-ಶಿಷ್ಯರ ಸಂಬಂಧ. ರವೀಂದ್ರರಿಗೆ ಜೆಡಿಎಸ್ ಟಿಕೆಟ್ ಕೊಡುತ್ತಾರೆಂಬ ಹಿನ್ನಲೆಯಲ್ಲಿ ನಾವು ಮಾತುಕತೆ ನಡೆಸಿಲ್ಲ. ಇನ್ನು ಮುಂದೆ ರಾಜಕೀಯವಾಗಿ ನಾವಿಬ್ಬರೂ ಒಟ್ಟಾಗಿ ಹೆಜ್ಜೆ ಇಡಲು ತೀರ್ಮಾನಿಸಿದ್ದೇವೆ. ರಾಜಕೀಯ ಸೂಕ್ಷ್ಮತೆಗಳನ್ನು ನಾವಿಬ್ಬರೂ ಒಟ್ಟಾಗಿ ಗಮನಿಸಿದ್ದೇವೆ. ದೇವೇ ಗೌಡರು ಹಲವು ಬಾರಿ ನನ್ನನ್ನು ಕರೆದು ಮಾತನಾಡಿ ದ್ದಾರೆ. ಇನ್ನು ಒಂದೆರಡು ದಿನದಲ್ಲಿ ನಾನು- ನಂಜುಂಡೇ ಗೌಡರು ಜೊತೆಯಾಗಿ ದೇವೇಗೌಡ- ಕುಮಾರಸ್ವಾಮಿ ಯವರನ್ನು ಭೇಟಿ ಮಾಡುತ್ತೇವೆ" ಎಂದು ಹೇಳಿದ್ದಾರೆ.

ಶ್ರೀರಂಗಪಟ್ಟಣ ವಿಧಾನಸಭಾ ಚುನಾವಣೆಯಲ್ಲಿ ರಮೇಶ್‌ಬಾಬುವನ್ನು ಸೋಲಿಸಿಯೇ ತೀರಬೇಕೆಂದು ನಿರ್ಧರಿಸಿರುವ ಅಪ್ಪ-ಮಗನ ಜೋಡಿ ಅದನ್ನು ಪ್ರತಿಷ್ಠೆಯನ್ನಾಗಿ ಸ್ವೀಕರಿಸಿದೆ. ಅದಕ್ಕಾಗಿ ಹಣಬಲ-ತೋಳ್ಬಲ ಎರಡೂ ಇರುವ ಗೆಲ್ಲುವ ಕುದುರೆ ಎಂದು ರವೀಂದ್ರ ಶ್ರೀಕಂಠಯ್ಯನನ್ನು ಪರಿಗಣಿಸಿದ್ದಾರೆ. ನಾಗಮಂಗಲದಲ್ಲಿ ಚಲುವರಾಯಸ್ವಾಮಿ ಎಂಬ ಮದಗಜವನ್ನು ಮಣಿಸಲು ಕಾಂಗ್ರೆಸ್‌ನಿಂದ ಸುರೇಶ್‌ಗೌಡ ಮತ್ತು ಎಲ್.ಆರ್.ಶಿವರಾಮೇಗೌಡರನ್ನು ಜೆಡಿಎಸ್‌ಗೆ ಸೇರಿಸಿಕೊಂಡಿರುವ ದೇವೇಗೌಡ-ಕುಮಾರಸ್ವಾಮಿ ಶ್ರೀರಂಗಪಟ್ಟಣದಲ್ಲಿ ಚಲುವರಾಯಸ್ವಾಮಿ ಶಿಷ್ಯ ರಮೇಶ್‌ಬಾಬು ಮಟ್ಟಹಾಕಲು ಅದೇ ತಂತ್ರ ಬಳಸುತ್ತಿದ್ದಾರೆ. ರೈತನಾಯಕ ನಂಜುಂಡೇಗೌಡ ಹಾಗೂ ಇಂಡುವಾಳು ಸಚ್ಚಿದಾನಂದನನ್ನು ಜೆಡಿಎಸ್‌ಗೆ ಸೇರಿಸಿಕೊಂಡು ಎಲ್ಲರೂ ಒಂದಾಗಿ ರಮೇಶ್‌ಬಾಬುವನ್ನು ಮಣಿಸಿದರೆ ಮುಂದಿನ ದಿನಗಳಲ್ಲಿ ಇಬ್ಬರಿಗೂ ಸೂಕ್ತ ಸ್ಥಾನಮಾನ ಕೊಡಿಸುವ ಬಗ್ಗೆ ಅಪ್ಪ-ಮಗ ಚಿಂತನೆ ನಡೆಸಿದ್ದಾರೆಂಬ ಸುದ್ದಿಯೂ ಹರಿದಾಡುತ್ತಿದೆ. ಕಾಂಗ್ರೆಸ್ ಉಪಾಧ್ಯಕ್ಷ ರಾಹುಲ್ ಗಾಂಧಿ ಭೇಟಿ ಮಾಡಿ ಕಾಂಗ್ರೆಸ್ ಟಿಕೆಟ್ ಖಚಿತ ಮಾಡಿಕೊಂಡಿರುವ ಶಾಸಕ ರಮೇಶ್‌ಬಾಬು ಈಗಾಗಲೇ ಕ್ಷೇತ್ರದಲ್ಲಿ ಪ್ರಚಾರ ಆರಂಭಿಸಿಬಿಟ್ಟಿದ್ದಾರೆ. ಜೆಡಿಎಸ್ ವರಿಷ್ಠ ದೇವೇಗೌಡ- ಕುಮಾರಸ್ವಾಮಿಗೆ ಸೆಡ್ಡು ಹೊಡೆದಿರುವ ರಮೇಶ್‌ಬಾಬು ಮಣಿಸಲು ಎಲ್ಲಾ ರೀತಿಯಿಂದಲೂ ರವೀಂದ್ರನೇ ಬೆಸ್ಟ್ ಎಂದು ಬೆನ್ನು ತಟ್ಟಿರುವ ಅಪ್ಪ-ಮಗ ಅದರಲ್ಲಿ ಯಾವ ರೀತಿ ಯಶಸ್ವಿಯಾಗುತ್ತಾರೆ ಎಂಬುದನ್ನು ಕಾದು ನೋಡಬೇಕಿದೆ.

■ ನಾಗೇಶ್, ಮಂಡ್ಯ

ಸಮೀಕ್ಷೆಗಳ ಸಂಕೋಲೆಯಲ್ಲಿ ಚೆಡ್ಡಿ ಪಡೆ ಚಡಪಡಿಕೆ!





ಹೇಳೋದು ಬ್ರಹ್ಮಾಂಡ; ತಿನ್ನೋದು ಮಸಿ ಕೆಂಡ- ಎಂಬ ಮಾತೊಂದಿದೆಯಲ್ಲ, ಅದು ಸ್ವಯಂಘೋಷಿತ ಸಂಭಾವಿತರ ಪಕ್ಷ ಬಿಜೆಪಿಗೆ ಅಕ್ಷರಶಃ ಅನ್ವಯವಾಗುತ್ತದೆ! ಸೋಗಲಾಡಿ ದೇಶಭಕ್ತಿ ಗೋಪ್ರೀತಿ, ಹಿಂದೂತ್ವ ಹಿಕಮತ್ತು ಅನೈತಿಕ ಪೊಲೀಸ್‌ಗಿರಿಯೇ ಮುಂತಾದ ಶುದ್ಧ ಗುದ್ದಾಟದ ಕಾರ್ಡ್ ಎಸೆಯುತ್ತ ಅಧಿಕಾರ ರಾಜಕಾರಣದ ಜೂಜಾಟಕ್ಕೆ ಬಿದ್ದಿರುವ ಮಸಲತ್ತುಗಾರ ಮೋದಿ-ಶಾ ಗ್ಯಾಂಗ್ ಕೇಸರಿ ಸಾಮ್ರಾಜ್ಯ ವಿಸ್ತರಣೆಗೆ ಬ್ರಿಟಿಷರ 'ಸಹಾಯಕ ಸೈನ್ಯ ಪದ್ಧತಿ'ಯೇ ತಾರಕವೆಂಬ ದೃಢ ನಿರ್ಧಾರಕ್ಕೆ ಬಂದುಬಿಟ್ಟಿದೆ. ಚೆಡ್ಡಿ ತತ್ವ ಮುಂದಿಟ್ಟುಕೊಂಡು ಹೋದರೆ ಎಲೆಕ್ಷನ್‌ಗಳನ್ನು ಗೆಲ್ಲೋದು ಕಷ್ಟವೆಂಬುದು ಖಾತ್ರಿಯಾಗಿರುವ ಮೋದಿ-ಶಾ ಜೋಡಿ ಎದುರಾಳಿ ಪಕ್ಷದ ಪ್ರಭಾವಿಗಳ ಬ್ಲಾಕ್‌ಮೇಲ್ ಮಾಡಿ ಬುಟ್ಟಿಗೆ ಹಾಕಿಕೊಳ್ಳಲು ಹವಣಿಸುತ್ತಿದೆ; ಅರ್ಥಾತ್ ಅಸಹ್ಯ-ಅನೈತಿಕ ಆಪರೇಷನ್ ಕಮಲಕ್ಕೆ ಅಣಿಯಾಗಿದೆ!!


ಶರವೇಗದಲ್ಲಿ ಎದುರಾಗುತ್ತಿರುವ ರಾಜ್ಯ ಅಸೆಂಬ್ಲಿ ಎಲೆಕ್ಷನ್ ಬಿಜೆಪಿಯ ಯಜಮಾನದ್ವಯರಿಗೆ ಒಣಪ್ರತಿಷ್ಠೆಯ ಕಾಳಗದಂತಾಗಿ ಬಿಟ್ಟಿದೆ. ಆದರೆ ಸರಿಯಾದ ದಂಡನಾಯಕನೇ ದಾಡಿ ಜೋಡಿಗೆ ಸಿಗುತ್ತಿಲ್ಲ. ಸ್ಥಳೀಯ ಬಿಜೆಪಿಯಲ್ಲಿರುವವರೆಲ್ಲ 'ದಂಡ'ನಾಯಕರು ಎಂಬುದು ಮೋದಿ-ಶಾಗೆ ಮನದಟ್ಟಾಗಿದೆ. ಜನ ಮೆಚ್ಚುವ ಒಬ್ಬೇ ಒಬ್ಬ ವಿಶ್ವಾಸಾರ್ಹ ಮುಂದಾಳು ಕರ್ನಾಟಕದ ಬಿಜೆಪಿಯಲ್ಲಿ ಇಲ್ಲದಿರುವುದು ಹೈಕಮಾಂಡ್ ಹೆಡ್‌ಮಾಸ್ತರ್‌ಗಳ ಚಿಂತೆಗೀಡುಮಾಡಿದೆ. ಪರಮ ಚೆಡ್ಡಿ ಕೇಡರ್‌ನ ಸಂತೋಷ್‌ಗೆ ಯಡ್ಡಿ ತಲೆ ಕಂಡರೆ ಪಿತ್ಥವೇ ನೆತ್ತಿಗೇರುತ್ತದೆ. ಹಲವು ರೀತಿಯಲ್ಲಿ ಹೆಸರು ಕೆಡಿಸಿಕೊಂಡಿರುವ ಯಡ್ಡಿ ಬದಲು ಕ್ಲೀನ್ ಇಮೇಜ್‌ನ ಬದಲಿ ಲಿಂಗಾಯತನ ಸಾರಥಿಯಾಗಿ ಮಾಡಬೇಕೆಂಬುದು ಸಂತೋಷ್ ತರ್ಕ. ಈ ಬ್ರಾಹ್ಮಣ ಲಾಬಿಯ ತಂತ್ರಗಾರಿಕೆ ಎದುರು ಪ್ರತಿಹಂತದಲ್ಲೂ ಮುದಿ ಹುಲಿ ಯಡ್ಡಿ ಮಕಾಡೆ ಬಿದ್ದು ಒದ್ದಾಡುತ್ತಿದ್ದಾರೆ.

ಉಪಾಯವಾಗಿ ಕೊಳಕು ನಾಲಿಗೆಯ ಈಶುನನ್ನು ಉರಿ ಮುಸುಡಿಯ ಯಡ್ಡಿ ವಿರುದ್ಧ ಛೂಬಿಟ್ಟು ಆರ್‌ಎಸ್‌ಎಸ್‌ನ ಬ್ರಾಗಳು ರಾಜ್ಯ ಬಿಜೆಪಿಯನ್ನು ಕಬ್ಜಾ ಮಾಡಿಕೊಳ್ಳುವ ಸಂಘರ್ಷದ ಕೊನೇ ಹಂತಕ್ಕೆ ತಲುಪಿದ್ದಾರೆ! ಚೆಡ್ಡಿ ಡಾನ್‌ಗಳು ತನ್ನನ್ನು ಹಾಸುಂಡು ಬೀಸಿ ಒಗೆವ ಬಾಳೆಲೆ ಮಾಡಿಕೊಳ್ಳುತ್ತಿದ್ದಾರೆಂಬ ಭಯಕ್ಕೆ ಬಿದ್ದಿರುವ ಯಡ್ಡಿ ಮತ್ತಾತನ ಕಷ್ಟ-ಸುಖದ ಸಹಚಾರಿಣಿ ಸೋಭಕ್ಕ ಯಾನೆ ಬೀಬಿಯಕ್ಕ ಕಂಗಾಲಾಗಿ ಕುಂತಿದ್ದಾರೆ. ಅಮಿತ್ ಶಾ ಬೆಂಗಳೂರಿಗೆ ಬಂದುಹೋದ ಮೇಲೆ ಬಿಜೆಪಿಯ ಒಳಜಗಳದ ಸುಳಿ ದಿನಕ್ಕೊಂದು ತಿರುವು ಪಡೆಯುತ್ತಿದೆ. ಯಡ್ಡಿ ಜತೆ ಜಗಳವಾಡಿ ಮುಖ ತಿರುಗಿಸಿಕೊಂಡಿದ್ದ ಸಂಘಿ ಸರದಾರ ಸಂತೋಷ್ ದಿಲ್ಲಿ ದರ್ಬಾರಿನ ಪ್ರೋತ್ಸಾಹದಿಂದ ತೀವ್ರ ಕ್ರಿಯಾಶೀಲನಾಗಿದ್ದಾನೆ. ನಾಲ್ಕೈದು ಬಣವಾಗಿ ಒಡೆದುಹೋಗಿರುವ ಸ್ಥಳೀಯ ಬಿಜೆಪಿಯ ದುರವಸ್ಥೆಯ ಸಾಕ್ಷಾತ್ ದರ್ಶನ್ ಮಾಡಿಕೊಂಡ ಶಾ ಸರ್ ಸಾಲಾಗಿ ಯಡ್ಡಿ, ಈಶು, ಅಶೋಕ್, ಸದಾಗೌಡ, ಶೆಟ್ಟರ್, ಸೀಟಿ ರವಿ.... ವಗೈರೆ ನಾಮರ್ದ ನೇತಾರರ ನಿಲ್ಲಿಸಿಕೊಂಡು ವಾಚಾಮಗೋಚರವಾಗಿ ಬೈದು ಮೋಕಳಿಕ್ ಆಗಿದ್ದಾರೆ! "ನಿಮ್ಮ ಹಾಲಿ ಸ್ಥಿತಿ-ಗತಿ, ಕಚ್ಚಾಟ-ಹುಚ್ಚಾಟ ಕಂಡರೆ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ನಮ್ಮ ಪಾರ್ಟಿಗೆ 70 ಸೀಟು ಬರೋದೂ ಅನುಮಾನಾನೇ.... ನಿಮ್ಮ ಮುಸುಡಿಗಿಷ್ಟು ಬೇಕಿ ಹಾಕಾ..." ಎಂದು ಉಗುಳಿದ್ದಾರೆ ಶಾ ಜೀ!

ಬೆಂಗಳೂರಿಂದ ದಿಲ್ಲಿ ಸೇರುವ ಹೊತ್ತಿಗೆ ಆತನಿಗೆ ಕರ್ನಾಟಕ ಘಟಕದ ಕಾಲೆಳೆವ ಶೂರ ಮುಖಂಡರ ಕೈಲಿ ಬಿಜೆಪಿ ಭರ್ಕತ್ತಾಗೋದಿಲ್ಲ ಎಂಬುದು ನಿಸ್ಸಂಶಯವಾಗಿ







ಪಕ್ಕಾ ಆಗಿಹೋಗಿದೆ. ಹಾಗಾಗಿ ಆತ ದಿಲ್ಲಿಯಲ್ಲಿ ಕುಂತೇ ಇಲ್ಲಿಯ ಬಿಜೆಪಿ ಬದುಕಿಸುವ ಹಿಕಮತ್ತುಗಳ ಶುರುಹಚ್ಚಿಕೊಳ್ಳಲು ಲೆಕ್ಕಾಚಾರ ಹಾಕುತ್ತಿದ್ದಾನೆ. ಮಿಷನ್-150 ಎಂಬ ರಂಗುರಂಗಿನ ಬೊಗಳೆ ಯಡ್ಡಿ ಠೋಳಿ ಶಾ ಎದುರು ಬಿಡುತ್ತಲೇ ಬಂದಿತ್ತು. ಸಂಘಪರಿವಾರ ನಡೆಸಿದ ಸಮೀಕ್ಷೆಗಳು ಬಿಜೆಪಿಯನ್ನು ಕರ್ನಾಟಕದಲ್ಲಿ ಗದ್ದುಗೆಗೆ ಏರಿಸುತ್ತದೆ ಎಂದು ಹೇಳಿತ್ತಂತೆ. ಆದರೆ ಖುದ್ದು ಇಲ್ಲಿಯ ಪರಿಸ್ಥಿತಿ ಕಂಡ ಕಕ್ಕಾಬಿಕ್ಕಿಯಾದ ಶಾ ಹಿಂದಿನ ಎಲ್ಲ ಸರ್ವೆ-ಸಮೀಕ್ಷೆ ಸರಿಯಲ್ಲ; ಇವು ಪಕ್ಷಕ್ಕೆ ಅನುಕೂಲಕರ ಅಂಶಗಳೂ ಅಲ್ಲವೆಂಬ ತೀರ್ಮಾನಕ್ಕೆ ಬಂದಿದ್ದಾನಂತೆ. ಹೊಸತೊಂದು ಸಮೀಕ್ಷೆ ಮಾಡಿಕೊಂಡು ಅಕ್ಟೋಬರ್‌ನಲ್ಲಿ ದಿಲ್ಲಿಗೆ ಬರುವಂತೆ ರಾಜ್ಯ ಬಿಜೆಪಿ ಭೂಪರಿಗೆ ತಾಕೀತು ಮಾಡಿದ್ದಾನೆ.


ಈ ಸರ್ವೆ ರಾಜ್ಯ-ಜಿಲ್ಲಾ ಮಟ್ಟದ 'ಮಹಾಮಹಿಮರ' ಅರಿವಿಗೆ ಬಾರದಂತೆ ತುಂಬ ರಹಸ್ಯವಾಗಿ ನಡೆಸಲು ಶಾ ಆರ್ಡರ್ ಆಗಿದೆ. ಅಷ್ಟೇ ಅಲ್ಲ, ಗೆಲ್ಲುವ ಕುದುರೆ ಯಾವ ಪಕ್ಷದಲ್ಲಿದ್ದರೂ ಸರಿ, ಆ ಕಪ್ಪು ಕುದುರೆ ಬಗ್ಗೆಯೇ ಸರ್ವೆ ಮಾಡಲು ಶಾ ಹೇಳಿದ್ದಾನೆ. ಜನರ ಒಲವು ಯಾರ ಕಡೆಗಿದೆಯೋ ಅಂಥವರು ಯಾವ ಪಕ್ಷದಲ್ಲಿದ್ದರೂ ಸರಿ, ಸಾಮ-ದಾನ-ಭೇದ-ದಂಡ ಪ್ರಯೋಗಿಸಿ ಆಪರೇಷನ್ ಕ-ಮಲ ಮಾಡಲು ಶಾ ಸ್ಕೆಚ್ ಹಾಕಿ ರಾಜ್ಯ ನಾಯಕರ ಕೈಗಿತ್ತಿದ್ದಾನೆ! ಹಿಂದೂತ್ವ, ಚೆಡ್ಡಿಯತ್ವ ಎಲ್ಲ ಮೂಲೆಗೆ ಸರಿಸಿ ಗೆಲ್ಲುವ ಏಕೈಕ ತತ್ವದಿಂದ ಮುನ್ನುಗ್ಗಲು ಶಾ ಹೇಳಿದ್ದಾನೆ. ಸಂಘಿ ತತ್ವಾದರ್ಶನ ಇಟ್ಟುಕೊಂಡರೆ ಕರ್ನಾಟಕದಲ್ಲಿ ಗೆಲ್ಲೋದು ಅಸಾಧ್ಯವೆಂದು ಶಾ ಹೇಳುತ್ತಿದ್ದಾನೆ. ಇದು ಕೇಸರಿ ಸಿದ್ಧಾಂತ-ಬದ್ಧತೆಯಿಂದ ಟಿಕೆಟ್ ಕನಸು ಕಾಣುತ್ತಿದ್ದವರ ದಿಗ್ಭ್ರಾಂತವಾಗಿಸಿಬಿಟ್ಟಿದೆ. ಈ ಗೆಲ್ಲುವ ಅನೈತಿಕ ಕಸರತ್ತು ರಾಜ್ಯ ಬಿಜೆಪಿಯಲ್ಲಿ ಅಲ್ಲೋಲಕಲ್ಲೋಲವನ್ನೇ ಮಾಡಿದೆ!!

ಬಿಜೆಪಿ ಒಂದಲ್ಲ ಎರಡೆರಡು ಆಂತರಿಕ ಸಮೀಕ್ಷೆ ಈಗಾಗಲೇ ಮಾಡಿದೆ. ಇವೆರಡೂ ಯಡ್ಡಿ ತಂಡದ 150+ ಕನಸಿಗೆ ಕೊಳ್ಳಿ ಇಟ್ಟಿದೆ. ಶಾನ ದಿವ್ಯದೃಷ್ಟಿಗೂ ಬಿಜೆಪಿ ಅಧಿಕಾರ ಹಿಡಿಯದು ಎಂಬುದು ಗೋಚರಿಸಿದೆ. ಈಚೆಗೆ ಸಿ ಫೋರ್ ಮಾಡಿದ ಸಮೀಕ್ಷೆ ಕೂಡ ಸಂಘಿ ಸರ್ವೆಗೆ ಹತ್ತಿರವೇ ಇದೆ. ಒಂದರ ಹಿಂದೊಂದರಂತೆ ಬಂದ ಮೂರು ಸಮೀಕ್ಷೆಗಳೂ ಕಾಂಗ್ರೆಸ್ 120 ಸ್ಥಾನದ ಗೆರೆ ದಾಟಿ ದಾಪುಗಾಲು ಹಾಕುತ್ತದೆ ಎಂದೇ ಹೇಳಿವೆ. ಸಿದ್ದು ನೇತೃತ್ವದ ಕಾಂಗ್ರೆಸ್ ಬಿಜೆಪಿ ಬಾಲ ಕಟ್ ಮಾಡುತ್ತಿದೆ ಎಂಬುದು ಮೋದಿ-ಶಾರನ್ನು ಕೆರಳಿಸಿದ್ದರೆ, ಯಡ್ಡಿ-ಶೋಭಾ ಪರಿವಾರವನ್ನು ಹತಾಶವಾಗಿಸಿದೆ. ಅತ್ತ ಯಡ್ಡಿ ಕಂಡರಾಗದ ಚೆಡ್ಡಿ ಸಿಂಡಿಕೇಟ್ ಯಡ್ಡಿ ಬದಲು ಬೇರ್‍ಯಾರನ್ನು ಸಿಎಂ ಕ್ಯಾಂಡಿಡೇಟ್ ಮಾಡಿಕೊಂಡರೆ ತಮ್ಮ ಅಧಿಕಾರದ ಹಪಾಹಪಿ ತೀರಿಸಿಕೊಳ್ಳಲು ಸಾಧ್ಯವಾದೀತೆಂಬ ಹುಡುಕಾಟಕ್ಕೆ ಬಿದ್ದಿದೆ. ಒಟ್ಟಿನಲ್ಲಿ ಇಡೀ ಬಿಜೆಪಿ ಬಿಡಾರದಲ್ಲೀಗ ಒಂಥರಾ ಕನವರಿಕೆ!!

ಅಡ್ಡ ದಾರಿಯಿಂದಾದರೂ ಸರಿ ಕರ್ನಾಟಕದ ಗದ್ದುಗೆ ಹಿಡಿಯಬೇಕೆಂಬ ಚಟ ಅಮಿತ್ ಶಾನನ್ನು ಕಾಡುತ್ತಿದೆ. ಹಾಗಾಗಿ ಆತ ಪಕ್ಷದ ಒರಿಜಿನಲ್ ತತ್ವ-ಸಿದ್ಧಾಂತ ಸುತ್ತಿಡಿ. ಅಧಿಕಾರಕ್ಕೆ ಬರಲು ಏನೇನು ಮಾಡಬೇಕೋ ಅದೆಲ್ಲ ಮಾಡಿರಿ. ಗೆಲ್ಲುವ ಕುದುರೆಗಳಿದ್ದರೆ ಬೇರೆ ಪಕ್ಷದಿಂದ ಎತ್ತಿಕೊಂಡು ಬನ್ನಿರಿ ಎಂಬ ಪಾಠ ಆರಂಭಿಸಿದ್ದಾನೆ. ಸ್ಥಳೀಯ ಬಿಜೆಪಿ ಮುಂಚೂಣಿ ನಾಯಕಮಣಿಗಳ ಮೇಲೆ ಶಾಗೆ ನಂಬಿಕೆಯೇ ಇಲ್ಲದಂತಾಗಿದೆ. ಕಾಂಗ್ರೆಸ್‌ನ ಸಿದ್ದು ಸರ್ಕಾರದ ವಿರುದ್ಧ ರಣ ಕಹಳೆಯೂದಲು ಎಷ್ಟು ಕುಮ್ಮಕ್ಕು ಕೊಟ್ಟರೂ ಯಡ್ಡಿ ಪಡೆಯಿಂದ ಹೋರಾಟವೇ ಸಾಧ್ಯವಾಗಲಿಲ್ಲ. ಅಪರಾಧಿ ಪ್ರಜ್ಞೆಯ, ಪಾಪಪಿಂಡದ ಯಡ್ಡಿ ಮತ್ತಿತರ ಬಿಜೆಪಿ ಲೀಡರ್‌ಗಳಿಗೆ ಸಿದ್ದು ಸರ್ಕಾರವನ್ನು ಟೀಕಿಸುವ ನೈತಿಕ ಸ್ಥೈರ್ಯವಾದರೂ ಎಲ್ಲಿದೆ. ಪಾಪ ಹಗರಣಗಳಿಲ್ಲದೆ ಶುದ್ಧ ವರ್ಚಸ್ಸಿನಿಂದ ನಾಲ್ಕೂವರೆ ವರ್ಷ ಕಳೆದಿರುವ ಸಿದ್ದು ಸರ್ಕಾರಕ್ಕೆ ಯಾವ ಕಳಂಕವೂ ಇಲ್ಲ, ಅಸಹಾಯಕರಿಗೆ, ಬಡವರಿಗೆ, ಅರ್ಹರಿಗೆ ಹಲವು 'ಭಾಗ್ಯ' ಕರುಣಿಸಿರುವುದು ಸಿದ್ದುಗೆ ಭರ್ಜರಿ ಶಕ್ತಿ ನೀಡಿದೆ. ಹೀಗಾಗಿ ಕೋಮುವಾದ, ಕಲ್ಲಡ್ಕ ಭಟ್ಟನ ಶಾಲೆಗೆ ಅಕ್ರಮವಾಗಿ ಹೋಗುತ್ತಿದ್ದ ಕೊಲ್ಲೂರು ದೇವಳದ ನಿಧಿ ನಿಷೇಧವೇ ಮುಂದಾದ ಕ್ಷುಲ್ಲಕ ನೆಪದಿಂದ ಹಾರಾಡಿ ನಗೆಪಾಟಲಿಗೀಡಾಗುವ ಗತಿಗೇಡಿ ಪರಿಸ್ಥಿತಿ ಬಂದಿದೆ ಯಡ್ಡಿ-ಶೋಭಾ-ಅಶೋಕ್-ಶೆಟ್ಟರ್-ಸದಾಗೌಡ.... ಮುಂತಾದ ಕೇಸರಿ ಕಂಠೀರವರಿಗೆ!!

ಡಿಕೆಶಿ ವಿರುದ್ಧದ ಪ್ರತಿಭಟನೆ, ಡಿವೈಎಸ್‌ಪಿ ಗಣಪತಿ ಆತ್ಮಹತ್ಯೆ, ಅನುಪಮಾ ಶೆಣೈ ಕ್ಯಾತೆ, ಡಿ.ಕೆ. ರವಿ ಸ್ವಯಂ ಅವಸಾನ ಪ್ರಕರಣ ಎತ್ತಿಕೊಂಡು ಬಿಜೆಪಿಗರು ಮಾಡಿದ ಶೋಗಳೆಲ್ಲವೂ ಫ್ಲಾಪ್ ಆಗಿವೆ. ಶಾ ಬೆಂಗಳೂರು 'ದಂಡ'ಯಾತ್ರೆ ನಂತರ ಹೈಕಮಾಂಡ್ ಬಲವಂತಕ್ಕೆ ಬಿಜೆಪಿಗಳು ಮಾಡಿದ ಕಾಂಗ್ರೆಸ್ ವಿರುದ್ಧದ ಹಾರಾಟ-ಚೀರಾಟಗಳೆಲ್ಲವೂ ವಿಫಲವೇ ಆಗಿವೆ. 2018ರ ಚುನಾವಣೆಯಲ್ಲಿ ಅಹಿಂದ್ ವರ್ಗವನ್ನು ಬಹುವಾಗಿ ನೆಚ್ಚಿಕೊಂಡಿರುವ ಸಿದ್ದು ಟೀಮಿಗೆ ಇದೀಗ ಬಿರುಸಾಗಿರುವ ಲಿಂಗಾಯತ 'ಧರ್ಮ ಸಂಕಟ'ದಿಂದ ಮತ್ತಷ್ಟು ಕಸುವು ತುಂಬಿಕೊಂಡಿದೆ. ಇದು ಸಮೀಕ್ಷೆಗಳೇ ಹೇಳಿರುವ ಸತ್ಯ. ಸಿದ್ದು ಬಲಗೊಂಡಿರುವುದು ಮತ್ತು ಕಾಂಗ್ರೆಸ್ಸೇ 2018ರಲ್ಲಿ ಮತ್ತೆ ಅಧಿಕಾರ ಹಿಡಿಯುತ್ತದೆಂಬ ಸಮೀಕ್ಷೆಗಳು ಮೋದಿ-ಶಾರ ಷಡ್ಯಂತ್ರಗಳನ್ನು ಮತ್ತೆ-ಮತ್ತೆ ಬದಲಿಸುವಂತೆ ಮಾಡುತ್ತಿದೆ.

ಶಾ ದಿಲ್ಲಿಯಿಂದಲೇ ಹೊಸದೊಂದು ಸಮೀಕ್ಷೆ ಮಾಡಿ ಜನಮನದಲ್ಲಿರುವ ಯೋಗ್ಯ ಅಭ್ಯರ್ಥಿಗಳ ಪಟ್ಟಿ ತಯಾರಿಸಲು ರಾಜ್ಯ ಬಿಜೆಪಿ ಮುಂದಾಳುಗಳಿಗೆ ಸೂಚನೆ ನೀಡಿದ್ದಾನಂತೆ. ಇದರ ಬೆನ್ನಿಗೆ ಅಕ್ಟೋಬರ್‌ನಲ್ಲಿ ಇನ್ನೊಂದು ಸರ್ವೆ ಮಾಡಬೇಕು. ಆ ಬಳಿಕ ನವೆಂಬರ್‌ನಲ್ಲಿ ಮೂರನೆ ಸರ್ವೆ ಮಾಡುವಂತೆ ಶಾ ಆದೇಶವಾಗಿದೆ. ಈ ಮೂರನ್ನೂ ಸಮೀಕರಿಸಿ ಒಂದು ಕಪ್ಪು ಕುದುರೆಯನ್ನು ಸಿದ್ಧ ಮಾಡಲಾಗುತ್ತಿದೆ. ಆ ಕುದುರೆ ಚೆಡ್ಡಿ ತಳಿಯದೇ



ಆಗಬೇಕೆಂದೇನಿಲ್ಲ, ಗೆಲ್ಲುವ ತಾಕತ್ತಿದ್ದರೆ ಕಾಂಗ್ರೆಸ್-ಜೆಡಿ... ಕಮ್ಯುನಿಸ್ಟ್..... ಯಾವುದಾದರೂ ಆಗುತ್ತದೆ! ಇದ... ನಿರ್ಲಜ್ಜ, ನಾಲಾಯಕ್ ನೀತಿ-ನಿಲುವು ಒ... ಹೇಗಾದರೂ ಮಾಡಿ ಗೆಲ್ಲಬೇಕು. ಈ ಅ... ತಂತ್ರಗಾರಿಕೆಯಿಂದ ಗೆದ್ದೇ ಗೆಲ್ಲುತ್ತೇನೆಂಬ ನಂಬಿಕೆ... ಶಾಗಿಲ್ಲ. ಹಾಗಾಗಿ ಆತ ಅಲ್ಪಸಂಖ್ಯಾತರ ಒಡೆದು... ಮಾಡಿಕೊಳ್ಳುವ ಖತರ್‌ನಾಕ್ ಕಾರ್ಯಾಚರಣೆ... ನಾಜೂಕಾಗಿ ನಡೆಸಿದ್ದಾನೆ!


ಅಲ್ಪಸಂಖ್ಯಾತ ಮುಸ್ಲಿಮ್, ಕ್ರಿಶ್ಚಿಯನ್ನರು ಬಿಜ... ಅನಾಹುತಕಾರಿ ಹಿಂದೂತ್ವ ಅಜೆಂಡಾಕ್ಕೆ ಹೆದರಿ ಕಾ... ಕಡೆ ಧ್ರುವೀಕರಣ ಆಗುವುದು ಬಿಜೆಪಿಗೆ ದೊಡ್ಡ ಹೊ... ಈ ಪ್ರಹಾರದಿಂದ ತಪ್ಪಿಸಿಕೊಳ್ಳಲು ಮುಸ್ಲಿಮರನ್ನು ... ಕಾಂಗ್ರೆಸ್ ಓಟ್ ಬ್ಯಾಂಕ್ ಖೋತಾ ಮಾಡಲು ಮ... ಶಾ ತಂತ್ರ ಹೆಣೆಯೋದು ಮಾಮೂಲಿ. ಉತ್ತರ ಪ್ರದೇ... ಜಾತ್ಯತೀತ ಮನೋಭಾವದ ವೋಟುಗಳು ಛಿದ್ರವಾ... ಬಿಜೆಪಿಯನ್ನು ಪಟ್ಟಕ್ಕೇರಿಸಿತ್ತಲ್ಲವಾ? ಅದೇ ಮ... ಶಾ ಕರ್ನಾಟಕದಲ್ಲೂ ಮಾಡಹೊರಟಿದ್ದಾನೆ. ಯಾ... ಕ್ಷೇತ್ರದಲ್ಲಿ ಮುಸ್ಲಿಮರು ಒಂದಾಗಿ ಬಿಜೆಪಿಗೆ ತಿರುಗಿ ಬ... ಸಾಧ್ಯತೆಯಿದೆಯೋ ಅಲ್ಲಿಯ ಮುಸ್ಲಿಮ್ ಮುಂದಾಳ... ತರಹೇವಾರಿ ತಂತ್ರದಿಂದ ಸೆಳೆಯಲು ಪ್ಲಾನ್ ... ಚೆಡ್ಡಿ ಗ್ಯಾಂಗು. ಪಕ್ಷದ ವಲಯದಲ್ಲಿ ವ... ಮುಂದಾಳುಗಳಿಗೆ ಹುದ್ದೆ ಕೊಟ್ಟು ಆ ಸಮುದಾ... ಓಟ್ ಒಡೆಯುವ ಲೆಕ್ಕಾಚಾರ ಹಾಕಲಾಗಿದೆ. ... ಸಾಧ್ಯವಾಗದಿದ್ದರೆ, ಒಂಚೂರು ಜನಮನ್ನಣೆ ... ಮುಸ್ಲಿಮ್ ಮುಂದಾಳನ್ನು ಪಕ್ಷೇತರನಾಗಿ ಕ... ಹಣಕಾಸು ಹರಿಸೋದು ಚೆಡ್ಡಿ ಹೈಕಮಾಂಡ್ ಯೋ... ಅಷ್ಟೇ ಅಲ್ಲ, ಬಿಜೆಪಿ ಅಭ್ಯರ್ಥಿಗೆ ಅನುಕೂಲವಾ... ಎಂಬಂಥ ಕ್ಷೇತ್ರದಲ್ಲಿ ಜೆಡಿಎಸ್ ಅಭ್ಯರ್ಥಿಯ... ಮುಸ್ಲಿಮ್ ವ್ಯಕ್ತಿಗಳಿಗೆ ಪುಸಲಾಯಿಸೋದೂ... ಚುನಾವಣಾ ತಂತ್ರಗಾರಿಕೆಯ ಲಿಸ್ಟ್‌ನಲ್ಲಿದೆ. ಹಣ... ಖರ್ಚಾಗಲಿ ಮುಸ್ಲಿಮರ ವೋಟ್ ಬ್ಯಾಂಕ್ ... ತೀರಬೇಕೆಂಬ ಹಠ ಶಾನದು. ಶಾನ ಒಡ್ಡೋಲಗದ... ಕಾಫಿರ್ ಸಾಬರು ಈಗಾಗಲೇ ಇಂಥದೆ... ಕಾರ್ಯಾಚರಣೆ ಆರಂಭಿಸಿಯೂ ಬಿಟ್ಟಿದ್ದಾರೆ.

ಉತ್ತರ ಪ್ರದೇಶದಲ್ಲಿ ಶಾ ಆಡಿದ ಸಾಬರ... ವಿಭಜಿಸುವ ಆಟ ಕರ್ನಾಟಕದಲ್ಲಿ ಕೈಗೂಡುವುದು... ಸುಲಭವಲ್ಲ ಎಂದು ರಾಜಕೀಯ ವಿಶ್ಲೇ... ತರ್ಕಿಸುತ್ತಿದ್ದಾರೆ. ಸ್ವಂತ ಪಕ್ಷದ ಸಿದ್ಧಾಂತ-ಬದ್ಧತೆಯ... ಅಭ್ಯರ್ಥಿಗಳನ್ನು ತಯಾರು ಮಾಡಲಾಗದ ಮೋ... ಯಡ್ಡಿಯೇ ಮುಂತಾದ ಚೆಡ್ಡಿ ಬಳಗ ಬೇರೆ ... ಲೀಡರ್‌ಗಳ ಕದಿಯುತ್ತಿರುವುದು ಬಿಜೆಪಿ ತಲು... ನೈತಿಕ ಅಧಃಪತನಕ್ಕೆ ನಿಚ್ಚಳ ನಿದರ್ಶನದಂತಿದೆ. ಅಧಿಕ... ಮೋದಿ-ಶಾ ಎಂಥ ಹೀನ-ಹೇಯ-ಬರ್ಬರ ಪಾ... ಹೇಸುವುದಿಲ್ಲ ಎಂಬುದು ಬಿಜೆಪಿಯ ಗಲೀಜು ರಾ... ಎಳೆ-ಎಳೆಯಾಗಿ ಬಿಚ್ಚಿಡುತ್ತಿದೆ. ಮಜಾ ... ಬಿಜೆಪಿಗರೀಗ ಸಮೀಕ್ಷೆಗಳ ಸಂಕಟದಲ್ಲಿ ಸಿ... ಒದ್ದಾಡುತ್ತಿದ್ದಾರೆ.

ಸಂಘಿಗಳೇ ನಡೆಸಿದ ಸರ್ವೆಯಲ್ಲಿ ಬಿಜೆಪಿಗೆ ... ಕ್ಷೇತ್ರದಲ್ಲಿ ಸಮರ್ಥ ಹುರಿಯಾಳೇ ಇಲ್ಲವೆ... ಸಾಬೀತಾಗಿದೆ. ಬಿಜೆಪಿ ಸರ್ವೆಯಲ್ಲೇ ಕಾಂಗ್ರೆಸ್... ನಾಯಕತ್ವದಲ್ಲಿ ಬಲಾಢ್ಯವಾಗಿದೆ ಎಂದು ಬಿಂಬಿತ... ಸಿದ್ದು ಭಯದಿಂದ ಕಂಗೆಟ್ಟ ಬಿಜೆಪಿ ಪರಿವಾರ... ಬೇರೆ ಪಕ್ಷದ ಗಟ್ಟಿಗರ ಅಪಹರಣ ಸಾಧ್ಯಾಸಾ... ಸರ್ವೆಗೆ ಇಳಿದಿದೆ. ಎಲೆಕ್ಷನ್‌ತನಕ ಗತಿಗೇಡಿ ಬ... ಮತಿಗೇಡಿ ಸರ್ವೆ ಸಮೀಕ್ಷೆ ಪ್ರಹಸನ ಸರಣಿ... ನಡೆಯುವುದು ಗ್ಯಾರಂಟಿ. ಕರ್ನಾಟಕದ ಜನತೆಗೆ ಕ... ಸಂಘಿಗಳು ಪುಕ್ಕಟೆ ಮನರಂಜನೆ ಕೆ... ತಯಾರಿಯಲ್ಲಿದ್ದಾರೆ...

■ ವರದಿ...

ಚಿತ್ರದುರ್ಗ: ಕಾಂಗ್ರೆಸ್ ಗದ್ದಲದ ಹಿಂದೆ ಉಮಾಪತಿಯ ಕಿತಾಪತಿ


ಉಮಾಪತಿ


ಮೊನ್ನೆ ಚಿತ್ರದುರ್ಗದ ಕಾಂಗ್ರೆಸ್ ಪದಾಧಿಕಾರಿಗಳ ...ಯಲ್ಲಿ ನಡೆದ ಗದ್ದಲದ ಹಿಂದೆ ಉಮಾಪತಿಯೆಂಬ ...ಪತಿ ರಾಜಕಾರಣಿಯ ಅತೃಪ್ತ ದುರಾಲೋಚನೆಗಳ ...ಮು ವಾಸನೆಯೇ ಕಂಡುಬರುತ್ತೆ. ಅವತ್ತು ನಡೆದದ್ದು ...ದಾಧಿಕಾರಿಗಳ ಸಭೆ. ಅಂದರೆ ಪದಾಧಿಕಾರಿ ...ದ್ದೆಯಲ್ಲಿರೋರು ಮಾತ್ರ ವೇದಿಕೆ ಏರಲು ಅವಕಾಶವಿತ್ತು. ...ದೆ ಯಾವುದೇ ಪದಾಧಿಕಾರಿ ಹುದ್ದೆಯಲ್ಲಿರದ ಪಕ್ಷಾಂತರಿ ...ಮಾಪತಿ ವೇದಿಕೆ ಹತ್ತಿ ಕೂತಿದ್ದ, ಅದಕ್ಕೆ ಒಂದಷ್ಟು ...ರ್ಯಕರ್ತರು ಆಕ್ಷೇಪ ಎತ್ತಿದ್ದನ್ನೆ ನೆಪ ಮಾಡಿಕೊಂಡು ...ಲ್ಲಾ ಉಸ್ತುವಾರಿ ಮಂತ್ರಿ ಆಂಜನೇಯ ವಿರುದ್ಧ ತನಗಿದ್ದ ...ಕ್ರೋಶವನ್ನೆಲ್ಲ ಬೆಂಬಲಿಗರ ಮೂಲಕ ಗದ್ದಲವಾಗಿಸಿದ ...ಮಾಪತಿ ತನ್ನ ಸ್ವಾರ್ಥ ರಾಜಕಾರಣದ ಕಾರ್ಯಸಾಧನೆಗೆ ...ರಿ ತಳಪಾಯವನ್ನೇ ಹಾಕಿಕೊಂಡಿದ್ದ.

ಈ ಉಮಾಪತಿ ಹೊಳಲ್ಕೆರೆ ಕ್ಷೇತ್ರದಿಂದ ಎರಡು ... ಕಾಂಗ್ರೆಸ್ ಶಾಸಕನಾಗಿದ್ದಂತವನು. ಅಷ್ಟುದಿನ ...ಬೊಮ್ಮನಹಳ್ಳಿ ಪರಮೇಶ್ವರಪ್ಪ ತಾಳ್ಯದ ಮಂಜುನಾಥ, ...ಣ್ಣ, ಶಿವಪುರದ ರಮೇಶರಂತೂ ಲಿಂಗಾಯತ ...ರನ್ನೆ ಕಂಡಿದ್ದ ಹೊಳಲ್ಕೆರೆಯ ಶೋಷಿತ ಮತ್ತು ...ಳಿದ ಸಮುದಾಯಗಳು ಒಟ್ಟಾಗಿ ಗೊಲ್ಲ ಜಾತಿಯ ...ಮಾಪತಿ ಯನ್ನು ಎಂಎಲ್ಎ ಆಗಿ ಚುನಾಯಿಸಿ ...ದಿದ್ದವು. ಆದರೆ ಶಾಸಕನಾದ ಉಮಾಪತಿ ತನ್ನ ಕ್ಷುಲ್ಲಕ ...ರಣದಲ್ಲಿ ಸಮಯ ಕಳೆದನೇ ಹೊರತು ಕ್ಷೇತ್ರಕ್ಕೆ ಯಾವ ಅಭಿವೃದ್ಧಿಯನ್ನೂ ತಂದು ಸುರಿಯಲಿಲ್ಲ. ಹಾಗಾಗಿ 1999 ಎಲೆಕ್ಷನ್‌ನಲ್ಲಿ ಬಿಜೆಪಿಯ ಶಿವಪುರದ ರಮೇಶನೆದುರು ಮಕಾಡೆ ಮಲಗಿದ್ದ. ಅಲ್ಲಿಂದಾಚೆಗೆ ಉಮಾಪತಿ ನಿರಂತರ ನಿರುದ್ಯೋಗಿಯಾಗಿ ಅಂಡಲೆಯುತ್ತಾ ಬಂದನೇ ಹೊರತು ಅಧಿಕಾರ ಅವನ ಹತ್ತಿರವೂ ಸುಳಿಯಲಿಲ್ಲ. 2008ರಲ್ಲಿ ಯಾವಾಗ ಹೊಳಲ್ಕೆರೆ ಎಸ್‌ಸಿ ಮೀಸಲು ಕ್ಷೇತ್ರವಾಗಿ ಪರಿವರ್ತನೆಯಾಯ್ತೊ ಆಗಿಂದ ಉಮಾಪತಿ ಶಾಶ್ವತ ನಿರುದ್ಯೋಗಿಯಾಗುವ ಸಂಕಷ್ಟದ ದಿನಗಳು ಎದುರಾಗಿದ್ದವು.

ಆದರೆ ಕಂಡವರ ಜೇಬಿಗೆ ಕೈಯಿಡುವ ಖಯಾಲಿಯ ಉಮಾಪತಿ ಬದಲಾದ ರಾಜಕೀಯ ಚಿತ್ರಣವನ್ನೂ ತನ್ನ ಅನುಕೂಲಕ್ಕೆ ತಕ್ಕಂತೆ ಬಳಸಿಕೊಂಡು ಆರ್ಥಿಕವಾಗಿ ದುಂಡಗಾದ. ಹೊಳಲ್ಕೆರೆ ಮೀಸಲು ಕ್ಷೇತ್ರವಾದಂತೆಯೇ ಪಕ್ಕದ ಭರಮಸಾಗರ ವಿಧಾನಸಭಾ ಮೀಸಲು ಕ್ಷೇತ್ರ ತನ್ನ ಅಸ್ತಿತ್ವ ಕಳೆದುಕೊಂಡು ಹೊಳಲ್ಕೆರೆಯಲ್ಲಿ ವಿಲೀನವಾಗಿತ್ತು. ಈ ಮೊದಲು ಭರಮಸಾಗರದಲ್ಲಿ ಕಾದಾಡುತ್ತಿದ್ದ ಕಾಂಗ್ರೆಸ್‌ನ ಎಚ್.ಆಂಜನೇಯ ಮತ್ತು ಬಿಜೆಪಿಯ ಚಂದ್ರಪ್ಪ ಸಹಜವಾಗಿಯೇ ಹೊಳಲ್ಕೆರೆಯ ಅಖಾಡಕ್ಕೆ ಬಂದುಕೂತರು. ಹೀಗೆ ಹೊಸದಾಗಿ ಬಂದವರಿಗೆ ಕ್ಷೇತ್ರದ ಆಳಅಗಲ ಅರ್ಥಮಾಡಿಕೊಂಡಿದ್ದ ಹಳಬರ ಸಹಕಾರ ಖಂಡಿತವಾಗಿ ಬೇಕಾಗಿತ್ತು. ಅದನ್ನು ಎನ್‌ಕ್ಯಾಶ್ ಮಾಡಿಕೊಂಡ ಉಮಾಪತಿ ಒಬ್ಬರಿಗೆ ಗೊತ್ತಿಲ್ಲದಂತೆ ಮತ್ತೊಬ್ಬರ ಹೆಗಲ ಮೇಲೆ ಕೈಹಾಕುತ್ತಾ ತನ್ನ ಸ್ವಜಾತಿ ಗೊಲ್ಲ ಹಾಗೂ ಪರಿಶಿಷ್ಟ ಮತಗಳ ಕಾಂಟ್ರಾಕ್ಟ್ ಪಡೆದವನಂತೆ ಪೋಜು ಕೊಟ್ಟು ತನ್ನ ಅಕೌಂಟ್ ಬ್ಯಾಲೆನ್ಸ್ ದಪ್ಪಗಾಗಿಸಿಕೊಂಡ.

ಇತ್ತ ಹೊಳಲ್ಕೆರೆ ಮೀಸಲು ಕ್ಷೇತ್ರವಾಗಿ ಉಮಾಪತಿ ಸ್ಪರ್ಧಿಸುವ ಅವಕಾಶವನ್ನೂ ಕಳೆದುಕೊಂಡ ನಂತರ ಹಿರಿಯೂರಿನತ್ತ ಮುಖ ಮಾಡಿದ. ಆದರೆ ಅಲ್ಲಿ ಕಾಂಗ್ರೆಸ್ ಟಿಕೆಟ್ ಸಿಗದ ಕಾರಣ ಪಕ್ಷೇತರನಾಗಿ ಕಣಕ್ಕಿಳಿದ. ಹಿರಿಯೂರಿನಲ್ಲಿ ಪಕ್ಷೇತರನಾಗಿದ್ದರೂ ಇತ್ತ ಹೊಳಲ್ಕೆರೆಯಲ್ಲಿ ಕಾಂಗ್ರೆಸ್‌ನ ಆಂಜನೇಯ, ಬಿಜೆಪಿಯ ಚಂದ್ರಪ್ಪ ಇಬ್ಬರಿಂದಲೂ ಹಣಪೀಕಿ ತನ್ನ ಎಲೆಕ್ಷನ್‌ಗೆ ಖರ್ಚು ಮಾಡಿದನಾದರೂ ಡಿ.ಸುಧಾಕರನೆದುರು ಗೆಲ್ಲಲಾಗದೆ ಕಾಸು ಕಳೆದುಕೊಂಡ.

ಇಷ್ಟೆಲ್ಲಾ ರಾಜಕೀಯ ಅತಂತ್ರನಾದ ಉಮಾಪತಿ ಕಾಂಗ್ರೆಸ್ ತ್ಯಜಿಸಿ ಒಂದಷ್ಟು ದಿನ ಜೆಡಿಎಸ್‌ನಲ್ಲಿ ಅಂಡಲೆದು ಕೊನೆಗೆ 2013ರ ಎಲೆಕ್ಷನ್‌ಗೂ ಮುನ್ನ ಮತ್ತೆ ಕಾಂಗ್ರೆಸ್‌ಗೆ ಬಂದು ಆಂಜನೇಯ ಕಂಕುಳ ಸೇರಿಕೊಂಡ. ಯಾವಾಗ ಆಂಜನೇಯ ಗೆದ್ದು ಸಮಾಜಕಲ್ಯಾಣ ಇಲಾಖೆ ಮಂತ್ರಿಯಾದರೋ ಆವಾಗಿನಿಂದ ಉಮಾಪತಿಯ ಹೊಟ್ಟೆ ಉರಿಯಲು ಶುರುವಾಯ್ತು. ಯಾಕೆಂದರೆ ಹೊಳಲ್ಕೆರೆಯಿಂದ ಎರಡು ಬಾರಿ ಗೆದ್ದಿದ್ದ ತಾನು ಮಂತ್ರಿಯಾಗಲಿಲ್ಲ, ಆದರೆ ಒಂದೇ ಸಲ ಗೆದ್ದ ಆಂಜನೇಯಗೆ ಮಂತ್ರಿ ಕುರ್ಚಿ ಸಿಕ್ಕಿತಲ್ಲಾ



ಚಂದ್ರಪ್ಪ


ಆಂಜನೇಯ

ಅಂತ ಒಳಗೊಳಗೆ ಕರುಬುತ್ತಲೇ ಇದ್ದ. ಆಂಜನೇಯ ತನ್ನನ್ನು ತುಳಿಯಲು ಯತ್ನಿಸುತ್ತಿದ್ದಾನೆ, ನಿಷ್ಠಾವಂತ ಕಾರ್ಯಕರ್ತರಿಗೆ ಕಿರುಕುಳ ಕೊಡುತ್ತಿದ್ದಾನೆ ಅಂತೆಲ್ಲ ಪುಕಾರೆಬ್ಬಿಸಿದ ಆತ 'ಉಮಾಪತಿ ಅಭಿಮಾನಿಗಳ ಬಳಗ' ಅನ್ನೋ ಸ್ವಯಂಘೋಷಿತ ಸಂಘ ಕಟ್ಟಿಕೊಂಡು ಪಕ್ಷವಿರೋಧಿ ಚಟುವಟಿಕೆಗೆ ಮುಂದಾಗಿದ್ದಾನೆ. ಆಂಜನೇಯನನ್ನು ಭರಮಸಾಗರದಿಂದ ಕರೆತಂದು ನಾನೇ ಶಾಸಕ, ಮಂತ್ರಿ ಮಾಡಿದ್ದು, ಆದ್ರೆ ಈಗ ವಲಸಿಗ ಆಂಜನೇಯ ಕ್ಷೇತ್ರ ಕಡೆಗಣಿಸಿದ್ದಾರೆ, 2018ರ ಚುನಾವಣೆಯಲ್ಲಿ ಆತನಿಗೆ ಪಾಠ ಕಲಿಸಿ ಅಂತೆಲ್ಲಾ ಕ್ಷೇತ್ರದ ತುಂಬಾ ಸಿನಿಕನಂತೆ ಅಲೆಯತೊಡಗಿದ್ದಾನೆ.

ಅದರ ಮುಂದುವರೆದ ಭಾಗವೇ ಮೊನ್ನೆ ಚಿತ್ರದುರ್ಗದ ಕಾಂಗ್ರೆಸ್ ಜಿಲ್ಲಾ ವೀಕ್ಷಕರ ಸಭೆಯ ರಾದ್ಧಾಂತ. ಸದ್ಯ ಉಮಾಪತಿಗೆ 2018ರ ಚುನಾವಣೆಯ ಮೇಲೆ ಕಣ್ಣಿದೆ. ಹೇಗಿದ್ದರೂ ಆಂಜನೇಯ ಹೊಳಲ್ಕೆರೆಯಿಂದ ನಿಲ್ಲುವುದು ಗ್ಯಾರಂಟಿ, ಹಾಗಾಗಿ ಈಗಿನಿಂದಲೇ ಈ ತರದ ತರಲೆ ಶುರುಮಾಡಿದರೆ ಚುನಾವಣೆಯಲ್ಲಿ ಮತದಾರನ ಮೇಲೆ ಕೆಟ್ಟ ಪರಿಣಾಮ ಬೀರಿ ಆಂಜನೇಯನಿಗೆ ಸೋಲಿನ ಭೀತಿ ಎದುರಾಗುತ್ತೆ, ಆಗ ತನ್ನ ಬಳಿಬಂದು ಕಾಣಿಕೆ ಸಂದಾಯ ಮಾಡಿ, ಚುನಾವಣಾ ರಾಜಕಾರಣದಲ್ಲಿ ಸರೆಂಡರ್ ಆಗಬಹುದೆನ್ನುವುದು ಉಮಾಪತಿಯ ಭ್ರಮೆ. ಆದರೆ ದಾವಣಗೆರೆಯ ಶ್ರೀಮಂತ ದಿಗ್ಗಜರೊಟ್ಟಿಗೆ ರಾಜಕೀಯ ಪಟ್ಟು ಕಲಿತ ಆಂಜನೇಯ, ಉಮಾಪತಿಯ ಬಡಪೆಟ್ಟುಗಳಿಗೆ ಬಗ್ಗೋದು ಡೌಟು.


■ ಟಿ.ಎನ್.ಷಣ್ಮುಖ




ಕೊಡಗು: ರಮೇಶ್ ವಿರುದ್ಧ 'ಕೈ-ಕೈ' ಪಿತೂರಿ?

ರೋಗಿ ಬಯಸಿದ್ದೂ ಹಾಲು ಅನ್ನ, ವೈದ್ಯ ...ದ್ದೂ ಹಾಲು ಅನ್ನ ಅನ್ನೋ ಹಾಗಾಗಿದೆ ನೋಡಿ ...ಗಿನ ಕೈ ರಾಜಕಾರಣದ ಭಾನ್ಗಡಿ. ಮೊನ್ನೆ ...ತ್ಸೋತ್ಸವದ ವೇದಿಕೆ ಮೇಲೆ ಕೂತಿದ್ದ ರೇಷ್ಮೆ ಮಾರಾಟ ...ಳಿಯ ಅಧ್ಯಕ್ಷ ಟಿ.ಪಿ.ರಮೇಶ್ ಸುಮ್ಮನಿರೋದು ... ಪಕ್ಕದಲ್ಲೇ ಇದ್ದ ಎಂಎಲ್‌ಸಿ ವೀಣಾ ಅಚ್ಚಯ್ಯನ ...ಮುಟ್ಟಿ ಇದೀಗ ತನ್ನ ರಾಜಕೀಯ ಬದುಕಿಗೇ ಸಂಚಕಾರ ...ದುಕೊಂಡಿದ್ದಾರೆ. ಸಿಎಂ ಸಿದ್ದರಾಮಯ್ಯನ ಜನತಾ ...ಟ್ಟಿಕೆಯಲ್ಲಿ ಅಹಿಂದಾ ಸಂಘಟನೆಯ ಮುಖೇನ ...ಗ್ರೆಸ್ ಹೊಕ್ಕ ರಮೇಶ್ ಮೇಲೆ ಮೊದಲಿಂದಲೂ ...ಗ್ರೆಸ್ ಜಾತ್ಯಸ್ಥರಿಗೆ ಮುನಿಸು ಇದ್ದೇ ಇತ್ತು. ಅಷ್ಟೇನು ...ಬಲವಿಲ್ಲದ ಬಲಿಜ ಜಾತಿಯ ರಮೇಶ್ ದಿನೇದಿನೇ ...ಕ್ಕೇರುತ್ತಿರೋದನ್ನು ಸ್ವತಃ ಕಾಂಗ್ರೆಸ್ಸಿಗರೇ ...ಕೊಳ್ಳಲಾರದೆ ತೊಳಲಾಡುತ್ತಿದ್ದರು. ಜೆಡಿಎಸ್‌ನಲ್ಲಿ ...ಣಯ್ಯನ ಆಪ್ತನಾಗಿದ್ದುಕೊಂಡು ರಾಜಕಾರಣ ಶುರು ...ದ ರಮೇಶ್‌ಗೆ ಕಾಂಗ್ರೆಸ್‌ಗೆ ಬರುತ್ತಿದ್ದಂತೆಯೇ ಪ್ರಭಾರಿ ...ಕ್ಷನ ಹೊಣೆ, ಇತ್ತೀಚೆಗೆ ರಾಜ್ಯ ರೇಷ್ಮೆ ಮಾರಾಟ ...ಮಂಡಳದ ಅಧ್ಯಕ್ಷಗಾದಿಗಳು ಲಭಿಸಿದ್ದು ಕೆಲವರ ...ಯಲ್ಲಿ ಹುಣಸೆಹಣ್ಣು ಕದಡಿದಂತಾಗಿತ್ತು, ಆದರೆ ... ಆಪ್ತ ಎನ್ನುವ ಕಾರಣಕ್ಕೆ ತೆಪ್ಪಗಿದ್ದರು. ಯಾವಾಗ ... ಅಚ್ಚಯ್ಯನ 'ಕೈ ಪ್ರಸಂಗ' ರಾಡಿಯಾಯ್ತೊ ...ಸೊಳಗಿನ ದುಶ್ಮನಿಗಳೆಲ್ಲ ಮೈಕೊಡವಿ ಎದ್ದು ... ರಾಜೀನಾಮೆಗೆ ಪಟ್ಟುಹಿಡಿಯು ತ್ತಿದ್ದಾರೆ. ತನ್ನ ...ರೀಶ್ ಚೋಪಣ್ಣನ ಮೂಗಿನ ನೇರಕ್ಕೆ ತಕ್ಕಂತೆ ...ರಣ ಮಾಡುತ್ತಿರುವ ಜಿಲ್ಲಾ ಉಸ್ತುವಾರಿ ಮಂತ್ರಿ ...ಸೀತಾರಾಂ ಕೂಡಾ ರಮೇಶ್ ರಾಜೀನಾಮೆ ...ಸೋದು ಪಿತೂರಿಗಾರರ ಕೆಲಸವನ್ನು ಸಲೀಸು ...ತ್ತಿದೆ.

...ದು ಅನ್ಯಥಾ ಭಾವನೆಯಿಂದ ವೀಣಾ ಅಚ್ಚಯ್ಯನವರ ...ಯಲಿಲ್ಲ, ನೈಸರ್ಗಿಕ ಚಿಕಿತ್ಸೆ ಪಡೆದು ಮೂರ್ನಾಲ್ಕು ...ಸಣ್ಣಗಾಗಿದ್ದೇನೆ ಅಂತ ಅವರು ಹೇಳಿದ್ದರಿಂದ ಅವರ ...ಗ್ಯ ವಿಚಾರಿಸಿ ತೂಕ ಇಳಿದಿರೋದನ್ನು ಪರೀಕ್ಷಿಸಲು ...ರೂಢಿಯಾಗಿ ಕೈಹಿಡಿದೆಯಷ್ಟೆ ಎಂದು ರಮೇಶ್ ...ತ್ತಿರುವ ಸ್ಪಷ್ಟನೆ ಯಾರ ಕಿವಿಯನ್ನೂ ತಲುಪುತ್ತಿಲ್ಲ. ... ಅದ್ಯಾವ ಉದ್ದೇಶವಿಟ್ಟುಕೊಂಡು ವೀಣಾ ... ಕೈಹಿಡಿದರೋ ಗೊತ್ತಿಲ್ಲ, ಆದ್ರೆ ಅದೇ ನೆಪ ...ಕೊಂಡು ಅವರ ವಿರುದ್ಧ ಪಿತೂರಿ


ತಮ್ಮಯ್ಯ


ವೀಣಾ


ಟಿ.ಪಿ ರಮೇಶ್

ನಡೆಯುತ್ತಿರೋದಂತೂ ಸತ್ಯ. ಈ ಪಿತೂರಿ ಪ್ರಮುಖ ಸೂತ್ರಧಾರ ಬಿದ್ದಾಟಂಡ ತಮ್ಮಯ್ಯ!

ಹಾಲಿ ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿರುವ ತಮ್ಮಯ್ಯ ಡಿ.ಸಿ.ಸಿ. ಅಧ್ಯಕ್ಷ ಸ್ಥಾನದ ಮೇಲೆ ಕಣ್ಣಿಟ್ಟಿದ್ದರು. ವೀಣಾ ಅಚ್ಚಯ್ಯ ಕೂಡಾ ತಮ್ಮಯ್ಯನನ್ನೇ ಡಿಸಿಸಿ ಅಧ್ಯಕ್ಷನನ್ನಾಗಿಸಬೇಕೆಂದು ಪಟ್ಟುಹಿಡಿದಿದ್ದರು. ಆದರೆ ವೀಣಾ ಅಚ್ಚಯ್ಯನ ಪ್ರಾಬಲ್ಯ ಮೊಟಕುಗೊಳಿಸುವ ಸಲುವಾಗಿ ಸಿದ್ದರಾಮಯ್ಯ ರಮೇಶ್‌ರನ್ನು ಆ ಹುದ್ದೆಯಲ್ಲಿ ಮುಂದುವರೆಸುವುದಾಗಿ ಪ್ರಕಟಿಸಿದ್ದರು. ಆಮೇಲೆ ನಡೆದ ಹೈಡ್ರಾಮಾದಲ್ಲಿ ರಮೇಶ್ ಪದಚ್ಯುತಗೊಂಡು, ಶಿವುಮಾದಪ್ಪ ಎಂಬ ವ್ಯಕ್ತಿ ಅಧ್ಯಕ್ಷರಾದರು. ಆಗಿನಿಂದ ರಮೇಶ್ ಮೇಲೆ ತಮ್ಮಯ್ಯನಿಗೆ ಮುನಿಸು ಇದ್ದೇ ಇತ್ತು. ಅಲ್ಲದೇ ರಮೇಶ್, ಸಿದ್ದರಾಮಯ್ಯನವರ ಆತ್ಮೀಯತೆಯನ್ನೆ ಬಂಡವಾಳ ಮಾಡಿಕೊಂಡು ಮುಂದೆ ಕಾಂಗ್ರೆಸಿನಲ್ಲಿ ಉನ್ನತ ಸ್ಥಾನ ಪಡೆಯಬಹುದು ಅಥವಾ ವಿಧಾನಸಭಾ ಚುನಾವಣೆಯ ಟಿಕೆಟ್‌ಗೆ ಲಗ್ಗೆ ಇಡಬಹುದೆನ್ನುವ ಲೆಕ್ಕಾಚಾರಗಳು ಅವರ ವಿರೋಧಿಗಳನ್ನು ಕಾಡುತ್ತಿದೆ. ಹಾಗಾಗಿ ಈಗಲೇ ರಮೇಶ್‌ರನ್ನು ಮಟ್ಟ ಹಾಕಬೇಕೆನ್ನುವುದು ಅಂತವರ ಲೆಕ್ಕಾಚಾರ. ಈಗ ಅದಕ್ಕೊಂದು ಅಸ್ತ್ರ ಸಿಕ್ಕಂತಾಗಿದೆ.

ವೇದಿಕೆಯಲ್ಲಿ ಕೈಹಿಡಿದದ್ದು ದೊಡ್ಡ ರಾದ್ಧಾಂತವಾದ ಆರಂಭದಲ್ಲಿ 'ಟಿ.ಪಿ. ರಮೇಶ್ ಯಾವುದೇ ಕೆಟ್ಟ ಭಾವನೆಯಿಂದ ನನ್ನ ಕೈ ಹಿಡಿದಿರಲಿಲ್ಲ' ಎಂಬ ಹೇಳಿಕೆ ಕೊಟ್ಟಿದ್ದ ವೀಣಾ ಅಚ್ಚಯ್ಯ ತದನಂತರ 'ನನಗೆ ಈ ಘಟನೆಯಿಂದ ಮುಜುಗರವಾಗಿದೆ' ಎಂದು ಉಲ್ಟಾ ಹೊಡೆದಿದ್ದೇ ರಮೇಶ್ ವಿರುದ್ಧದ ಪಿತೂರಿಯ ಭಾಗವಾಗಿ. ಕೊಡವ ಸಮಾಜದ ಪದಾಧಿಕಾರಿಗಳು ರಮೇಶ್ ವಿರುದ್ಧ ಪ್ರತಿಭಟನೆ ನಡೆಸಿ ವಿವಾದವನ್ನು ವಿಜೃಂಭಿಸಲು ಯತ್ನಿಸಿದ್ದು ಕೂಡಾ ಪಿತೂರಿಯ ಭಾಗವೇ ಆಗಿತ್ತು. ಎದುರಾಳಿ ಬಿಜೆಪಿಗಿಂತ ಕಾಂಗ್ರೆಸ್ಸಿಗರೇ 'ಕೈ' ರಾಜಕಾರಣವನ್ನು ಎಳೆದಾಡುತ್ತಿರೋದು ಸ್ಪಷ್ಟವಾಗಿದೆ.




ಜನತಾದಳದಲ್ಲಿ ನಾಣಯ್ಯನವರ ನಿಕಟವರ್ತಿಯಾಗಿದ್ದ ರಮೇಶ್ ಕೊಡಗು ಜಿಲ್ಲಾ ಜನತಾದಳದ ಅಧ್ಯಕ್ಷರಾಗಿಯೂ ದುಡಿದಿದ್ದರು. ನಾಣಯ್ಯ ಸಚಿವರಾದ ವೇಳೆಯಲ್ಲಿ ರಮೇಶ್‌ಗೆ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಸ್ಥಾನ ಲಭಿಸಿತ್ತು. ಸ್ವತಃ ಪತ್ರಕರ್ತನಾಗಿರುವ ರಮೇಶ್ ತನ್ನದೇ ಆದ 'ಗಡಿನಾಡ ಸಂಚಾರಿ' ಪತ್ರಿಕೆಗೆ ಸಂಪಾದಕನಾಗಿ, ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಸಂಘಟನೆಯ ಉಪಾಧ್ಯಕ್ಷನಾಗಿ ಹಲವು ವರ್ಷ ಕಾರ್ಯನಿರ್ವಹಿಸಿದ್ದಾರೆ. ಜೆಡಿಎಸ್‌ನೊಳಗೇ ಬಂಡಾಯವೆದ್ದು ಸಿದ್ದರಾಮಯ್ಯ ಅಹಿಂದಾ ಸಂಘಟನೆಗಿಳಿದಾಗ ಕೊಡಗಿನಲ್ಲಿ ಅದಕ್ಕೆ ಬೆಂಗಾವಲಾಗಿ ನಿಂತ ರಮೇಶ್, ಜೆಡಿಎಸ್‌ನಲ್ಲಿ ನಾಣಯ್ಯ ತಟಸ್ಥರಾದಾಗ ಕಾಂಗ್ರೆಸಿನತ್ತ ವಾಲಿದರು.

ಟಿಪ್ಪು ಜಯಂತಿಯ ಘರ್ಷಣೆ ಸಂದರ್ಭದಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಬಿ.ಟಿ. ಪ್ರದೀಪ್ ರಾಜೀನಾಮೆ ನೀಡಿದಾಗ ರಮೇಶ್‌ಗೆ 18 ತಿಂಗಳುಗಳ ಕಾಲ ಪ್ರಭಾರ ಜಿಲ್ಲಾಧ್ಯಕ್ಷನಾಗುವ ಭಾಗ್ಯ ಒಲಿದುಬಂದಿತ್ತು. ತನ್ನ ಪ್ರಭಾರಿ ಟರ್ಮನ್ನು ಕಾಯಂ ಅಧ್ಯಕ್ಷಗಾದಿಯಾಗಿ ಪರಿವರ್ತಿಸಿಕೊಳ್ಳುವ ಲಾಲಸೆಗೆ ಬಿದ್ದ ರಮೇಶ್ ಓಲೈಕೆ ರಾಜಕಾರಣಕ್ಕಿಳಿದದ್ದು ಅವರ ವರ್ಚಸ್ಸಿಗೆ ಕೊಂಚ ಡ್ಯಾಮೇಜ್ ಮಾಡಿತ್ತು. ಬಲಾಢ್ಯ ಜಾತಿಯವರು, ವರ್ಚಸ್ವಿ ನಾಯಕರನ್ನು ಒಲೈಸಲು ಮುಂದಾದದ್ದು ಇತರರಿಗೆ ಅಸಮಾಧಾನ ತರಿಸಿತ್ತು. ಇಂತದ್ದರ ಹೊರತಾಗಿ ರಮೇಶ್ ಇದುವರೆಗೂ ತನ್ನ ವೈಯಕ್ತಿಕ ಬದುಕಿಗೆ ಮಸಿ ಬಳಿದುಕೊಳ್ಳುವಂತಹ ಕೆಲಸ ಮಾಡಿದವರಲ್ಲ. ಅದ್ಹೇಗೆ ಇದೊಂದು ಯಡವಟ್ಟು ಮಾಡಿಕೊಂಡರೊ ಗೊತ್ತಿಲ್ಲ, ಒಟ್ಟಿನಲ್ಲಿ ವಿರೋಧಿಗಳಿಗೆ ಆಹಾರವಾಗಿದ್ದಾರೆ.

ವಿಪರ್ಯಾಸವೆಂದರೆ, ಯಾವ ಬಿದ್ದಾತಂಡ ತಮ್ಮಯ್ಯ ಕೈ ರಾದ್ಧಾಂತವನ್ನು ಅಸ್ತ್ರವಾಗಿ ಬಳಸಿಕೊಂಡು ರಮೇಶ್ ರಾಜೀನಾಮೆಗೆ ಒಳ ಕಸರತ್ತು ನಡೆಸುತ್ತಿದ್ದಾನೊ ಆತನ ಮೇಲೆಯೇ ಕೊಡವ ಸಾಹಿತ್ಯ ಅಕಾಡೆಮಿ ಉದ್ಯೋಗಿ ಯಾಗಿದ್ದ ಮಹಿಳೆಯೊಬ್ಬಳು ತನ್ನೊಂದಿಗೆ ಅಸಭ್ಯವಾಗಿ ವರ್ತಿಸಿದ್ದಾನೆ ಅಂತ ದೂರು ನೀಡಿದ್ದಳು. ಜಿಲ್ಲಾ ಉಸ್ತುವಾರಿ ಮಂತ್ರಿ ಆದಿಯಾಗಿ ಯಾರೊಬ್ಬರೂ ಇದುವರೆಗೆ ಆತನ ರಾಜೀನಾಮೆ ಕೇಳಿಲ್ಲ. ಈಗ ರಮೇಶ್ ವಿರುದ್ಧ ಮುರಕೊಂಡು ಬೀಳುತ್ತಿರೋದು ನೋಡಿದರೆ ಕಾಂಗ್ರೆಸ್‌ನ ಆಂತರಿಕ ಬೇಗುದಿ ಅರ್ಥವಾಗುತ್ತದೆ.

■ ಬಿ.ಎನ್. ಮನುಶೆಣೈ









ಅನಾಟಮಿ ಆಫ್ ಬಾಬಾ ದಾಂಧಲೆ

ಎಲ್ಲಾ ಗೊತ್ತಿದ್ದು ತೆಪ್ಪಗಿದ್ದ ಖಟ್ಟರ್?


ಈ ದೇಶದ ಗೃಹಮಂತ್ರಿ ಎನಿಸಿಕೊಂಡ ರಾಜನಾಥ್ ಸಿಂಗ್'ಜೀ' ತರಾತುರಿಯಲ್ಲಿ ಮೈಕ್‌ಗಳ ಮುಂದೆ ನಿಂತು 'ಹೈಸಿ ಘಟ್ನಾ ನಹೀಂ ಹೋನಾ ಚಾಯಿಯೇ ಥಾ. ಲೇಕಿನ್ ಪಂಜಾಬ್ ಔರ್ ಹರ್ಯಾಣ ಮುಖ್ಯಮಂತ್ರಿಯೋನೆ ಅಪ್ನಾಅಪ್ನಾ ಕರ್ತವ್ಯ ಅಚ್ಛೇ ತರಹ್ ಸೇ ನಿಭಾಯಿಹೇ ಹೈ' ಅಂತ ಘೋಷಣೆ ಮಾಡಿದಾಗಲೇ ಪಂಚಕುಲಾದಲ್ಲಿ ಭುಗಿಲೆದ್ದ ಹಿಂಸಾಚಾರದ ಹಿಂದೆ ರಾಜಕಾರಣ ಅಡಗಿರೋದು ಸ್ಪಷ್ಟವಾಗಿ ಅರ್ಥವಾಗಿತ್ತು. ಯಾಕೆಂದರೆ ರಾಜನಾಥ್ ಸಿಂಗ್ ಹೇಳಿಕೆ ಕೊಡುವ ಸಮಯದಲ್ಲಿನ್ನು ದೊಂಬಿ ಹರ್ಯಾಣದ ಪಂಚಕುಲಾದ ಆಸುಪಾಸನ್ನು ಬಿಟ್ಟು ಆಚೀಚೆ ಕಾಲಿಟ್ಟಿರಲೇ ಇಲ್ಲ! ಹೆಚ್ಚೆಂದರೆ ಪಂಚಕುಲಾಗೆ ಅಂಟಿಕೊಂಡ ಉತ್ತರ ಪ್ರದೇಶದ ಬಾರ್ಡರ್‌ನಲ್ಲಿ ಕೊಂಚ ಗಲಾಟೆಗಳು ಶುರುವಾಗಿದ್ದವು. ಆದರೂ ಬಾಬಾ ಕೇಂದ್ರಿತ ದಾಂಧಲೆ ಪಂಜಾಬ್‌ನಲ್ಲೂ ಭುಗಿಲೆದ್ದಿದೆ, ಅಲ್ಲೂ ಅಪಾರ ಹಾನಿಯಾಗಿದೆ ಅಂತ ಆರಂಭದಲ್ಲೇ ಬಿಂಬಿಸಲು ಕೇಂದ್ರ ಗೃಹಮಂತ್ರಿ ಆದಿಯಾಗಿ ಕೇಸರಿ ಕಬ್ಜಾದಲ್ಲಿರುವ ಸಮಸ್ತ ಮೀಡಿಯಾಗಳು ಹೆಣಗಾಡಿದ್ದು ಹರ್ಯಾಣದ ಖಟ್ಟರ್ ಬಿಜೆಪಿ ಸರ್ಕಾರದ ವೈಫಲ್ಯವನ್ನು ಮುಚ್ಚಿಹಾಕುವುದಕ್ಕೋಸ್ಕರ. ಯಾಕೆಂದರೆ ಪಂಜಾಬ್‌ನಲ್ಲಿ ಅಸ್ತಿತ್ವದಲ್ಲಿರೋದು ಕಾಂಗ್ರೆಸ್ ಸರ್ಕಾರ! ಹರಿಯಾಣದ ಜೊತೆಗೆ ಪಂಜಾಬನ್ನೂ ತಳುಕು ಹಾಕಿದರೆ ಈ ದಾಂಧಲೆ ಕಾಂಗ್ರೆಸ್ ಸರ್ಕಾರದ ವೈಫಲ್ಯವಾಗಿಯೂ ಬಿಂಬಿತವಾಗುತ್ತೆ, ಆಗ ತಮ್ಮ ಬಿಜೆಪಿ ಸರ್ಕಾರದ ಪೂರ್ವನಿಯೋಜಿತ ವೈಫಲ್ಯ ಬೆಳಕಿಗೆ ಬರೋಲ್ಲ ಅನ್ನೋದು ಬಿಜೆಪಿಯ ಲೆಕ್ಕಾಚಾರವಾಗಿತ್ತು. ಯಾವಾಗ ಗೃಹಮಂತ್ರಿ ರಾಜನಾಥ್ ಸಿಂಗ್ ಅನವಶ್ಯಕವಾಗಿ ಪಂಜಾಬನ್ನು ಎಳೆತರಲು ಯತ್ನಿಸಿದರೊ ಆಗಲೇ ಪಂಜಾಬ್ ಸಿಎಂ ಕ್ಯಾಪ್ಟನ್ ಅಮರೀಂದರ್ ಸಿಂಗ್ ಅಧಿಕೃತ ಸುದ್ದಿಗೋಷ್ಠಿ ಕರೆದು 'ಪಂಜಾಬ್‌ನಲ್ಲಿ ಪರಿಸ್ಥಿತಿ ಹತೋಟಿಯಲ್ಲೇ ಇದೆ, ಇದುವರೆಗೆ ದಾಂಧಲೆಯಿಂದ ಒಂದೂ ಸಾವು ವರದಿಯಾಗಿಲ್ಲ' ಎಂಬ ಹೇಳಿಕೆ ನೀಡಿದ್ದು.

ಇತ್ತ ಪ್ರಧಾನ ಮಂತ್ರಿ ಮೋದಿ ಸಹ ಸಣ್ಣದಾಗಿ ಟ್ವೀಟಿಸಿ 'ಜನ ಶಾಂತಿ ಕಾಪಾಡಬೇಕು. ಗೃಹ ಇಲಾಖೆಯ ಕಾರ್ಯದರ್ಶಿ ಜೊತೆ ನಾನು ನಿರಂತರ ಸಂಪರ್ಕದಲ್ಲಿ ಇದ್ದೇನೆ' ಅಂಥದ್ದು ದೊಂಬಿಯ ಮೇಲೆ ಹೆಚ್ಚೇನು ಪರಿಣಾಮ ಬೀರುವಂತದ್ದಾಗಿರಲಿಲ್ಲ. ಸ್ವತಃ ಪಂಜಾಬ್-ಹರ್ಯಾಣ ಹೈಕೋರ್ಟ್ ಕೂಡಾ ಪ್ರಧಾನಮಂತ್ರಿಯನ್ನೆ ತರಾಟೆಗೆ ತೆಗೆದುಕೊಂಡದ್ದು ಇದಕ್ಕೆ ಸಾಕ್ಷಿ (ಬಾಕ್ಸ್ ನೋಡಿ). ಇಡೀ ಪ್ರಕರಣದಲ್ಲಿ ಮನೋಹರ್ ಲಾಲ್ ಖಟ್ಟರ್ ನೇತೃತ್ವದ ಹರ್ಯಾಣ ಬಿಜೆಪಿ ಸರ್ಕಾರ ವೋಟ್‌ಬ್ಯಾಂಕ್ ರಾಜಕಾರಣಕ್ಕೆ ಶರಣಾಗಿ ಕೈಕಟ್ಟಿ ಕೂತು ಅನಾಹುತಕ್ಕೆ ಪರೋಕ್ಷ ಬೆಂಬಲ ನೀಡಿದ್ದು ಸ್ಪಷ್ಟವಾಗಿದೆ. ಇದನ್ನು ಸಾಬೀತು ಮಾಡುವಂತಹ ಸಾಲುಸಾಲು ಸಾಕ್ಷಿಗಳು ಕಣ್ಣಿಗೆ ರಾಚುತ್ತವೆ.

ಆಗ ರಾಕ್‌ಸ್ಟಾರ್, ಈಗ ರೇಪಿಸ್ಟ್

ಆಗಸ್ಟ್ 25ನೇ ತಾರೀಖು ಹರಿಯಾಣವೆಂಬ ಪುಟ್ಟರಾಜ್ಯದಲ್ಲಿ ಭುಗಿಲೆದ್ದ ಹಿಂಸಾಚಾರವಿದೆಯಲ್ಲ, ಅದು ಇಡೀ ದೇಶದ ಮರ್ಯಾದೆಯನ್ನೆ ಮೂರು ಕಾಸಿಗೆ ಹರಾಜು ಹಾಕುವಂತದ್ದು. ಯಾಕೆಂದರೆ ಅವತ್ತು ಉನ್ಮತ್ತರ ಗುಂಪು ಅನಾಮತ್ತು 38 ಹೆಣಗಳನ್ನು ಕೆಡವಿ ಕೋಟ್ಯಂತರ ಮೌಲ್ಯದ ಆಸ್ತಿಪಾಸ್ತಿಯನ್ನು ಧ್ವಂಸ ಮಾಡಿದ್ದು ಒಬ್ಬ ರೇಪಿಸ್ಟನ ಪರವಾಗಿ! ಇದಕ್ಕೆಲ್ಲ ಕಡಿವಾಣ ಹಾಕಬೇಕಿದ್ದ ಹರಿಯಾಣ ಸರ್ಕಾರ ಆ ಕ್ಷಣದ ಮಟ್ಟಿಗೆ ಇದ್ದೂ ಸತ್ತಂತೆ ಅಕ್ಷರಶಃ ಕೈಕಟ್ಟಿ ಕೂತದ್ದು ಮಾತ್ರ ಮಹಾದುರಂತ!!

ಪಾಗಲ್‌ಪನ್ ದವಾಖಾನೆಯಲ್ಲಿ ದಾಖಲಾಗಬೇಕಿದ್ದವರೆಲ್ಲ ಸಂತರಾಗಿ, ದೇವಮಾನವರಾಗಿ, ಬೋಗಸ್ ಬಾಬಾಗಳಾಗಿ ಅವತರಿಸೋದು ನಮ್ಮ ದೇಶಕ್ಕೆ ಹೊಸದೇನೂ ಅಲ್ಲ, ಅಂತವರ ಸಾಲಿಗೆ ಸಾರಾಸಗಟಾಗಿ ಸೇರುವಂತವನು ಈಗ ಜೈಲು ಪಾಲಾಗಿರೊ ಈ ಗುರ್ಮೀತ್ ಸಿಂಗ್ ಉರುಫ್ ರಾಮ್ ರಹೀಮ್ ಸಿಂಗ್ ಬಾಬಾ. ಆತನ ಐಲಾಟಗಳು, ಕಾಂಟ್ರೊವರ್ಸಿಗಳು, ವಿಕೃತ ಚೇಷ್ಟೆಗಳು, ಮಕ್ಮಲ್ ಟೋಪಿಯ ಮಂಗಾಟಗಳಿಗೆಲ್ಲ ಇಂತಹದ್ದೊಂದು ಫುಲ್‌ಸ್ಟಾಪ್ ಬೀಳಲೇಬೇಕಿತ್ತು, ಆದರೆ ಅದನ್ನು 'ಭಾರತ' ಸ್ವೀಕರಿಸಿದ ಪರಿಯಿದೆಯಲ್ಲ ಅದೇ ಗಾಬರಿ ಹುಟ್ಟಿಸುವಂತಹದ್ದು.



ನೋಡಲು ಹೆಚ್ಚೂಕಮ್ಮಿ 'ಸ್ವದೇಶಿ' ರಾಮದೇವ್ ಬಾಬಾನ ದೂರದ ಕಜಿನ್ನಿನಂತೆ ಕಾಣುವ ರಾಮ್-ರಹೀಮ್ ಸಿಂಗ್ ಪಕ್ಕಾ ಐಲು-ಪೈಲು ಆಸಾಮಿ. ತನ್ನನ್ನು ತಾನು ಸಾಕ್ಷಾತ್ ದೇವಮಾನವ ಅಂತ ಕರೆದುಕೊಳ್ಳುತ್ತಲೇ ಕೈಯಲ್ಲಿ ಗಿಟಾರು-ಗನ್ನು ಹಿಡಿದು ಸಿನಿಮಾಗೆ ಫೋಜು ಕೊಡುವ, ಮೈಕೆಲ್ ಜಾಕ್ಸನ್‌ನ ಮರಿತಮ್ಮನಂತೆ ಮೈಮೇಲೆ ಚಿತ್ರವಿಚಿತ್ರ ಡ್ರೆಸ್ಸು ಹೇರಿಕೊಳ್ಳುವ, ನೂರಕ್ಕೂ ಹೆಚ್ಚು ತರಹೇವಾರಿ ಕಾರುಗಳಲ್ಲಿ ಮೋಜು-ಮಸ್ತಿ ಮಾಡುವ ಈ ಬಾಬಾ ನಿಜಕ್ಕೂ ಹೊಸೂರು ರಸ್ತೆಯಲ್ಲಿರೊ ಸರ್ಕಾರಿ ಆಸ್ಪತ್ರೆಗೆ ಹೇಳಿಮಾಡಿಸಿದ ಗಿರಾಕಿ. ಕೇಡುಗಾಲಕ್ಕೆ ನಾಯಿ ಮೊಟ್ಟೆ ಇಡ್ತು ಅನ್ನೋ ಹಾಗೆ ಇಂತವನಿಗೂ ಕೋಟ್ಯಂತರ ಭಕ್ತರು! ಪೊಲಿಟಿಕಲ್ ಬಾಲಬಡುಕರು!! ಅನಾಯಾಸವಾಗಿ ಬಂದು ಬೀಳುವ ಅಪಾರ ಆಸ್ತಿ!!!

ಡೇರಾ ಸಚ್ಚಾ ಸೌದಾ ಹೆಸರಲ್ಲಿ ಹರಿಯಾಣ ಮತ್ತು ಪಂಜಾಬ್ ರಾಜ್ಯಗಳಲ್ಲಿ ಹುಲುಸಾಗಿ ಹರಡಿಕೊಂಡಿದ್ದರು ಇವನ ಬೇರು ಇರೋದು ರಾಜಸ್ತಾನದಲ್ಲಿ. ಅಲ್ಲಿನ ಶ್ರೀಗಂಗಾನಗರ ಜಿಲ್ಲೆಯ ಗುರುಸಾರ್ ಮೊದಿಯಾ ಎಂಬ ಪುಟ್ಟಹಳ್ಳಿಯ ಜಾಟ್ ಸಿಖ್ ಕುಟುಂಬದಲ್ಲಿ ಹುಟ್ಟಿದ ಈತ 23 ವಯಸ್ಸಿಗೇ ಡೇರಾ ಸಚ್ಚಾ ಸೌದದ ಮುಖ್ಯಸ್ಥನಾಗಿ ವಕ್ಕರಿಸಿದ್ದ. ಆತ ಹುಟ್ಟಿದ ವರ್ಷವಿದೆಯಲ್ಲ ಅದೇ ಅವನ ನಸೀಬು ಬದಲಿಸಿತ್ತು, ಯಾಕೆಂದರೆ ಆತ ಹುಟ್ಟುವುದಕ್ಕೂ ಏಳು ವರ್ಷ ಮುನ್ನ ಡೇರಾಸೌದದ ಸ್ಥಾಪಕನಾಗಿದ್ದ ಶಾ ಮಸ್ತಾನ ತನ್ನ ಕೊನೆಯ ಪ್ರವಚನದಲ್ಲಿ 'ಏಳು ವರ್ಷಗಳ ತರುವಾಯ ತಾನು ಮತ್ತೆ ಹುಟ್ಟಿ ಡೇರಾ ಸೌದದ ಮೂರನೇ ಮುಖ್ಯಸ್ಥನಾಗಿ ಅವತರಿಸುತ್ತೇನೆ' ಅಂದಿದ್ದನಂತೆ. ಅದಕ್ಕೆ ತಾಳೆಯಾಗುವಂತೆ ಈ ಐಲುಪೈಲು ಗುರ್ಮೀತ್ ಕೂಡಾ ಆ ಮಾತು ಹೊರಬಿದ್ದ ಏಳುವರ್ಷಕ್ಕೆ ಸರಿಯಾಗಿ ಹುಟ್ಟಿದ್ದ. ವಿದ್ಯೆಯ ನಸೀಬು ಹಣೆಯಲ್ಲಿ ಇಲ್ಲದ ಗುರ್ಮೀತ್ ಎಸ್ಸೆಸ್ಸೆಲ್ಸಿ ಮುಟ್ಟುವಷ್ಟರ ಹೊತ್ತಿಗೆ ವಿದ್ಯಾಭ್ಯಾಸಕ್ಕೆ ಎಳ್ಳುನೀರು ಬಿಟ್ಟು ಅಪ್ಪನ ಜೊತೆ ಟ್ರ್ಯಾಕ್ಟರ್ ಏರಿ ಉಳುಮೆಗಿಳಿದಿದ್ದ. ಹೀಗೆ ಅಂಡಲೆಯುತ್ತಿದ್ದ ಗುರ್ಮೀತ್ ಅದ್ಹೇಗೊ ಡೇರಾ ಸಚ್ಚಾ ಸೌದದ ಸಹವಾಸಕ್ಕೆ ಬಿದ್ದು ಅದರೊಳಕ್ಕೆ ತೂರಿಕೊಂಡ. 1967ರಲ್ಲಿ ಹುಟ್ಟಿದವರೇ ತಮ್ಮ ಮುಂದಿನ 'ಗುರು' ಎಂಬ ನಂಬಿಕೆಯಲ್ಲಿದ್ದ ಡೇರಾ 'ಪ್ರೇಮಿ'ಗಳು (ಡೇರಾ ಸೌದದ ಭಕ್ತರನ್ನು ಪ್ರೇಮಿ ಅಂತಲೇ ಕರೆಯಲಾಗುತ್ತೆ) ಹಿಂದುಮುಂದು ಯೋಚಿಸದೆ ಗುರ್ಮೀತ್‌ನನ್ನು ಗುರುವಾಗಿ ಸ್ವೀಕರಿಸಿದರು. ಅಲ್ಲಿಂದ ಶುರುವಾದವು ನೋಡಿ ... ಚೇಷ್ಟೆಗಳು.

ಆತ ಡ್ಯಾನ್ಸ್ ಮಾಡಿದ್ದು, ಜಾವ್‌ಲಿನ್ ಎಸೆ... ಫುಟ್‌ಬಾಲ್ ಒದ್ದದ್ದು, ಕುಂತದ್ದು, ನಿಂತದ್ದು, ಕೆಮ್ಮಿ... ಮಲಗಿದ್ದು ಎಲ್ಲವೂ ಪವಾಡಗಳೆನ್ನುವಂತೆ ಭಕ್ತ... ಯಾಮಾರಿಸಲು ತಂಡವೊಂದನ್ನು ಕಟ್ಟಿಕೊ... ರಾಮ್-ರಹೀಮ್ ಬಾಬಾಗೆ ವಿಪರೀತ ಜನಪ್ರಿ... ಬಂದದ್ದು ಆತ ಸಿನಿಮಾ ಅವತಾರಕ್ಕೆ ಧುಮುಕಿದ ಮೇ... ಮೆಸೆಂಜರ್ ಆಫ್ ಗಾಡ್ (ಎಂಎಸ್‌ಜಿ) ಸಿನಿಮಾ... ಆತ ವೇಷ ಹಾಕಿದ್ದೇ ತಡ ದೇವಮಾನವ... ಅವತರಿಸಿಬಿಟ್ಟ.

ವಿವಾದಗಳ ಹುತ್ತದಲ್ಲಿ

ದಿನದಿಂದ ದಿನಕ್ಕೆ ಜನಪ್ರಿಯತೆ ಹೆಚ್ಚಿದಂತೆ ... ಮೇಲಿನ ವಿವಾದಗಳೂ ಹೆಚ್ಚಾಗುತ್ತಾ ಬಂದವು. ಮೊ... ಬಾರಿ ಗುರ್ಮೀತ್ ಬಾಬಾನ ಮೇಲೆ ಆಪಾ... ಕೇಳಿಬಂದದ್ದು 2002ರಲ್ಲಿ, ಸತ್ಸಂಗದ ನೆಪದಲ್ಲಿ ... ಮೇಲೆ ಅತ್ಯಾಚಾರ ಎಸಗಿದ್ದಾನೆ ಅಂತ ಆತನ ಇ... ಭಕ್ತೆಯರೇ ರೇಪ್ ದೂರು ಸಲ್ಲಿಸಿದರು. ಈಗ ಬಾಬಾ... ಜೈಲು ಶಿಕ್ಷೆ ಆಗಿರೋದು ಅವೇ ಕೇಸುಗ... ಸಂಬಂಧಿಸಿದಂತೆ. ಇದರ ಹೊರತಾಗಿ ಬಾಬಾನ ... ಎರಡು ಮರ್ಡರ್ ಕೇಸುಗಳೂ ಇವೆ. ಬಾಬಾನ ವಿ... ತಕರಾರು ಎತ್ತುತ್ತಿದ್ದ ಡೇರಾಸೌದದ ಅನುಯಾಯಿ ರ... ಸಿಂಗ್ ಮತ್ತು ಅಲ್ಲಿ ನಡೆಯುವ ಅಕ್ರಮಗಳ ಬಗ್ಗೆ 'ಪೂರಾ ಸಚ್' ಪತ್ರಿಕೆಯಲ್ಲಿ ನಿರಂತರವಾಗಿ ಬ... ಬಯಲಿಗೆಳೆಯುತ್ತಿದ್ದ ರಾಮಚಂದರ್ ಛತ್ರಪತಿ ... ಪತ್ರಕರ್ತರು ನಿಗೂಢವಾಗಿ ಕೊಲೆಯಾಗಿ ಹೋಗಿ... ಆ ಎರಡೂ ಕೇಸುಗಳಲ್ಲಿ ಬಾಬಾನೇ ಮೊದಲ ಆರೋ... ಅವುಗಳ ವಿಚಾರಣೆಯಿನ್ನೂ ಚಾಲ್ತಿಯಲ್ಲಿದ್ದು, ತೀ... ಹೊರಬಿದ್ದರೆ ನಕಲಿ ಬಾಬಾನ ಅಸಲಿ ಸಂಕಷ್ಟದ ದಿ... ಮತ್ತಷ್ಟು ಕರಾಳವಾಗಲಿವೆ.

2007ರಲ್ಲಿ ಆತ ಮಾಡಿಕೊಂಡ ಯಡವ... ಇಷ್ಟೊತ್ತಿಗಾಗಲೇ ಆತ ದಿವಂಗತನಾಗಿರಬೇಕಿತ್ತು, ... ಸ್ವಲ್ಪದರಲ್ಲೇ ಮಿಸ್ಸಾಗಿ ಜೀವ ಬದುಕಿಸಿಕೊಂಡಿದ್ದ ಭಟಿ... ಸಲಬತಾಪುರ ಎಂಬಲ್ಲಿ ನಡೆದ ಸಾರ್ವ... ಸಮಾರಂಭವೊಂದರಲ್ಲಿ ಸಿಖ್ಖರ ಭಾವನೆಗಳನ್ನು ಕೆರಳಿಸ... ಅವರ 10ನೇ ಸಿಖ್ ಗುರು ಗೋವಿಂದ್ ಸಿಂಗ್‌ರ... ವೇಷಭೂಷಣ ತೊಟ್ಟು ಮಂಗಾಟ ಮಾಡಿದ್ದ. ... ಸಿಖ್ಖರನ್ನು ವಿಪರೀತ ಕೆರಳಿಸಿತ್ತು. ಪಂಜಾಬ್, ಹರ... ರಾಜ್ಯಗಳಲ್ಲಿ ಮೂಲಭೂತವಾದಿ ಸಿಖ್ಖರು ಮತ್ತು ... ಅನುಯಾಯಿಗಳ ನಡುವೆ ದೊಡ್ಡ ಮಾರಾಮ... ಕಾರಣವಾಗಿತ್ತು. ಒಂದಷ್ಟು ಸಿಖ್ ಸಂಘಟನೆ... ಗುರ್ಮೀತ್ ರಹೀಮನ ತಲೆದಂಡಕ್ಕೆ ಫತ್ವಾ ಹೊರಡಿ... 2008ರ ಫೆಬ್ರವರಿ ಮಾಹೆಯಲ್ಲಿ ಕರ್ನಾಲ್ ... ಡೇರಾ ಬಾಬಾ ಕಾರಿನಲ್ಲಿ ಹೋಗುತ್ತಿರುವಾಗ ಖಾಲಿ... ಲಿಬರೇಷನ್ ಫೋರ್ಸ್‌ನ ಒಂದಷ್ಟು ಹಂತಕರು ಅ... ಮಾಡಿ ಅಟ್ಟಾಡಿಸಿ ಬಡಿದಿದ್ದರು. ಅವತ್ತೇನಾದರು ಬ... ಡ್ರೈವರ್ ಧೈರ್ಯ ಮಾಡಿರದಿದ್ದರೆ ಇಷ್ಟೊತ್ತಿಗಾಗಲೇ ... ಕಾರ್ಡಲ್ಲಿ ಅತಿಥಿಯಾಗಿರುತ್ತಿದ್ದ. ಅಲ್ಲಿಂದಾಚೆಗೆ ... ಅನುಯಾಯಿಗಳು, ಮೂಲಭೂತವಾದಿ ಸಿಖ್ಖರ ... ಆಗಿಂದಾಗ್ಗೆ ಸಂಘರ್ಷ ನಡೆದುಕೊಂಡೇ ಬಂದಿದೆ.

ಐಲು ಬಾಬಾನ ಕೇಸರಿ ಲಿಂಕುಗ...

ಬಾಬಾ ದಾಂಧಲೆಯಲ್ಲಿ ಬಿಜೆಪಿಯ ಖ...














ರ್ಕಾರವನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುತ್ತಿರೋದೆ ಆತನಿಗೆ ಬಿಜೆಪಿ ನಾಯಕರೊಂದಿಗಿದ್ದ ಲಿಂಕುಗಳು. 2007ರವರೆಗೆ ಬಾಬಾ ರಾಜಕಾರಣದ ಐಕಾನ್ ಆಗಿ ಹೆಸರು ಮಾಡಿರಲಿಲ್ಲ. ಅಪಾರ ಸಂಖ್ಯೆಯಲ್ಲಿ ಅನುಯಾಯಿಗಳು ಇದ್ದಾಗ್ಯೂ ತನ್ನ ಮಂಗಾಟಗಳಿಗಷ್ಟೇ ಸೀಮಿತವಾಗಿದ್ದ. ಆದರೆ ಯಾವಾಗ ಪೊಲಿಟಿಕಲ್ ಅಫೇರ್ಸ್ ವಿಂಗ್ (ಪಿಎಡಬ್ಲು) ತೆರೆದು ಕೂತನೋ ಅಲ್ಲಿಂದ ಅವನಿಗೆ ಪಂಜಾಬ್-ಹರ್ಯಾಣ ರಾಜಕಾರಣದಲ್ಲಿ ಎಲ್ಲಿಲ್ಲದ ಬೇಡಿಕೆ ಬಂದುಬಿಟ್ಟಿತು. ಮೊದಮೊದಲು ಕಾಂಗ್ರೆಸ್ ಜೊತೆ ಗುರುತಿಸಿಕೊಂಡನಾದರು ನಂತರ ನಿಧಾನಕ್ಕೆ ಬಿಜೆಪಿಯ ತೆಕ್ಕೆಗೆ ಜಾರಿಕೊಂಡ. ಗುರ್ಮೀತ್‌ಗೆ ನಾಲ್ವರು ಮಕ್ಕಳು. ಅದರಲ್ಲಿ ಮೂವರು ಹೆಣ್ಣುಮಕ್ಕಳಿದ್ದರೆ ಒಬ್ಬ ಮಗ. ಆ ಮಗನಿಗೆ ಮದುವೆ ಮಾಡಿಕೊಂಡಿರೋದು ಪಂಜಾಬ್‌ನ ಕಾಂಗ್ರೆಸ್ ಮಾಜಿ ಶಾಸಕ ಹರ್ಮಿಂದರ್ ಸಿಂಗ್ ಜೆಸ್ಸಿಯ ಮಗಳನ್ನು. 2007ರಲ್ಲಿ ಆತ ಪಂಜಾಬ್‌ನಲ್ಲಿ ಕಾಂಗ್ರೆಸ್ ಪರವಾಗಿಯೇ ಮತ ಚಲಾಯಿಸಬೇಕೆಂದು ತನ್ನ ಅನುಯಾಯಿಗಳಿಗೆ ಪೊಲಿಟಿಕಲ್ ಅಫೇರ್ಸ್ ವಿಂಗ್ ಮೂಲಕ ಗುಪ್ತ ಸಂದೇಶ ರವಾನಿಸಿದ್ದ. ಅಷ್ಟರಮಟ್ಟಿಗಿದ್ದ ಬಾಬಾನನ್ನು ಕೇಸರಿ ಪಾಳೆಯದತ್ತ ಎಳೆದು ತಂದದ್ದು ಖುದ್ದು ಆರೆಸ್ಸೆಸ್‌ನ ಮೋಹನ್ ಭಾಗವತ್!

ಪಂಜಾಬ್ ಮತ್ತು ಹರ್ಯಾಣದಲ್ಲಿ ವ್ಯಾಪಿಸಿರುವ ಸಿಖ್ ಸಮುದಾಯದ ಸೋಶಿಯಲ್ ಸಂರಚನೆಯನ್ನು ಚೆನ್ನಾಗಿ ಅರ್ಥ ಮಾಡಿಕೊಂಡ ಮೋಹನ್ ಭಾಗವತ್ 2014ರ ಲೋಕಸಭಾ ಚುನಾವಣೆಗೂ ಮುನ್ನ ದಕ್ಷಿಣ ಪಂಜಾಬ್‌ನ ಮಾನ್ಸಾ ಎಂಬಲ್ಲಿ ಕೆಲ ಟೆಂಟ್ ಹಾಕಿ ಕೂತು ಬಲಾಢ್ಯ ಕಾರ್ಯಯೋಜನೆ ಹೆಣೆದಿದ್ದ. ಸಿಖ್ ಸಮುದಾಯಗಳಲ್ಲಿರುವ ದಲಿತ ಸಿಖ್ ಸಮುದಾಯಗಳನ್ನು ಕೇಸರಿಮಯವಾಗಿಸೋದು ಭಾಗವತ್‌ನ ಅಜೆಂಡಾವಾಗಿತ್ತು. ಆ ಕಾರಣಕ್ಕೆ ಆತ ಪದೇಪದೇ ರಾಧಾಸೋಮಿ ಪಂಥದ ಬಾಬಾ ಗುರಿಂದರ್ ಸಿಂಗ್ ಧಿಲ್ಲೋನ್‌ರನ್ನು ಭೇಟಿಯಾಗಿ ಚರ್ಚೆ ನಡೆಸಿದ್ದ. ಡೇರಾ ಸೌದದ ಬೇರುಗಳು ಶುರುವಾದದ್ದೇ ಈ ರಾಧಾಸೋಮಿ ಪಂಥದಿಂದ. ಡೇರಾ ಸೌದವನ್ನು ಹುಟ್ಟುಹಾಕಿದ ಶಾ ಮಸ್ತಾನಾ ಇದೇ ಪಂಥದ ಅನುಯಾಯಿಯಾಗಿದ್ದರು. ಆತನ ಮೂಲಕ ಗುರ್ಮೀತ್‌ಗೆ ಗಾಳ ಹಾಕಿದ ಭಾಗವತ್ ಬಿಜೆಪಿ ಪಾಲಿಗೆ ದೊಡ್ಡ ಮತಸಮೂಹವನ್ನು ಸೃಷ್ಟಿಸಿದ್ದ. ಅಂದಹಾಗೆ, ಗುರ್ಮೀತ್ ಬಾಬಾನ ಅನುಯಾಯಿಗಳಲ್ಲಿ ಮೂಲಭೂತವಾದಿ ಸಿಖ್‌ರಿಂದ ಸಿಡಿದ ದಲಿತ ಸಿಖ್‌ರೇ ಅಪಾರ ಸಂಖ್ಯೆಯಲ್ಲಿದ್ದಾರೆ.

ಭಾಗವತ್ ಶುರು ಮಾಡಿದ ವೋಟ್‌ಬ್ಯಾಂಕ್ ಹಾದಿಗೆ ಫೈನಲ್ ಟಚ್ ಕೊಟ್ಟದ್ದು ಬಿಜೆಪಿ ಅಧ್ಯಕ್ಷ ಅಮಿತ್ ಶಾ. 2014ರ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಎರಡು ಮೂರು ಬಾರಿ ಬಾಬಾನನ್ನು ಭೇಟಿಯಾದ ಅಮಿತ್ ಶಾ ಡೇರಾ ಸಂಪೂರ್ಣ ಕೇಸರಿಮಯವಾಗುವಂತೆ ಡೀಲ್ ಕುದುರಿಸಿದ್ದ. ಅಷ್ಟೊತ್ತಿಗಾಗಲೇ ರೇಪ್ ಕೇಸು, ಸಿಖ್ಖರ ದಾಳಿಯಿಂದ ಕಂಗೆಟ್ಟು ಹೋಗಿದ್ದ ಐಲು ಬಾಬಾ ಕೂಡಾ ಬಿಜೆಪಿಗೆ ಸಪೋರ್ಟ್ ಮಾಡಿದರೆ ತಾನು ಬಚಾವಾಗಬಹುದೆನ್ನುವ ಲೆಕ್ಕಾಚಾರ ಹಾಕಿಯೇ ಕಮಲಕ್ಕೆ ಅಂದಿದ್ದ.

ಅಷ್ಟುದಿನ ತನ್ನ ಪೊಲಿಟಿಕಲ್ ವಿಂಗ್ ಮೂಲಕ ಗುಪ್ತ ಸಂದೇಶ ರವಾನಿಸುತ್ತಿದ್ದ ಗುರ್ಮೀತ್ ಬಾಬಾ 2014ರ ಎಂಪಿ ಎಲೆಕ್ಷನ್‌ನಲ್ಲಿ ಪ್ರಪ್ರಥಮ ಬಾರಿಗೆ ಬಿಜೆಪಿಗೆ ಬಹಿರಂಗವಾಗಿ ಬೆಂಬಲ ನೀಡಿದ್ದಲ್ಲದೆ ಅನುಯಾಯಿಗಳೆಲ್ಲ ಬಿಜೆಪಿಗೆ ಮತ ಹಾಕುವಂತೆ ಫರ್ಮಾನು ಹೊರಡಿಸಿದ್ದ. ಹರ್ಯಾಣದ ಪ್ರಚಾರ ಸಭೆಯಲ್ಲಿ ಪಿಎಂ ಅಭ್ಯರ್ಥಿಯಾಗಿದ್ದ ಮೋದಿ, ಗುರ್ಮೀತ್‌ನನ್ನು ದೇವಮಾನವ ಅಂತೆಲ್ಲ ಹಾಡಿ ಹೊಗಳಿದ್ದು ಅಮಿತ್ ಶಾ ಕುದುರಿಸಿಹೋಗಿದ್ದ ಡೀಲ್‌ನ ಒಂದು ಭಾಗವಾಗಿತ್ತು. ಈ ರೇಪಿಸ್ಟ್ ಬಾಬಾನನ್ನು ಬಹಿರಂಗವಾಗಿ ರಾಜಕಾರಣಿಯೊಬ್ಬ ಚುನಾವಣಾ ಪ್ರಚಾರಕ್ಕೆ ಬಳಸಿಕೊಂಡದ್ದು ಅದೇ ಮೊದಲು. ಇದಕ್ಕೂ ಮುನ್ನ ಬಾಬಾನ ಬೆಂಬಲವನ್ನು ಕಾಂಗ್ರೆಸ್ ಮತ್ತು ಅಕಾಲಿದಳ ಪಾರ್ಟಿಗಳು ಪಡೆದಿದ್ದವಾದರು ಅವ್ಯಾವುವೂ ವಿವಾದಿತ ಬಾಬಾನನ್ನು ಬಹಿರಂಗವಾಗಿ ಅಪ್ಪಿ ಮುದ್ದಾಡಿರಲಿಲ್ಲ. ಅಂದಹಾಗೆ, ಮೋದಿ ತನ್ನ ಭಾಷಣದಲ್ಲಿ ಗುರ್ಮೀತ್‌ನನ್ನು ಹಾಡಿ ಹೊಗಳುವಾಗ ಆತನಾಗಲೇ ರೇಪ್ ಮತ್ತು ಮರ್ಡರ್ ಆರೋಪಿಯಾಗಿದ್ದ! ಈಗಲೂ ಬಾಬಾ ಮತ್ತು ಮೋದಿ ನಡುವೆ ಆತ್ಮೀಯ ಒಡನಾಟವಿದೆ. ಸ್ವಚ್ಛ ಭಾರತ್ ಅಭಿಯಾನದ ನೆಪದಲ್ಲಿ ಇದೇ ಬಾಬಾ ಪೊರಕೆ ಹಿಡಿದು ಪೋಜು ಕೊಟ್ಟಾಗ ಪಿಎಂ ಮೋದಿ ಹಾಡಿಹೊಗಳಿದ್ದು ಈ ಆತ್ಮೀಯತೆಯನ್ನು ಸಾಬೀತು ಮಾಡುತ್ತೆ. ಹೀಗೆ ಶುರುವಾದ ಆತನ ಕೇಸರಿ ಲಿಂಕು ಅದೇ ವರ್ಷ ನಡೆದ ಹರ್ಯಾಣ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಗೆ ಭರ್ಜರಿ ಫಸಲನ್ನೇ ತಂದುಕೊಟ್ಟಿತು. ಹಿಂದಿದ್ದ ಕಾಂಗ್ರೆಸ್ ಸರ್ಕಾರವನ್ನು ಧೂಳೀಪಟ ಮಾಡಿ ಬಿಜೆಪಿಯ ಮನೋಹರ್‌ಲಾಲ್ ಖಟ್ಟರ್ ಸಿಎಂ ಆಗಿದ್ದರಲ್ಲಿ ಈ ಐಲು ಬಾಬಾನ ಪಾತ್ರವಿದೆ. ಹರ್ಯಾಣ ಚುನಾವಣೆಯ ಉಸ್ತುವಾರಿ ಹೊತ್ತಿದ್ದ ಬಿಜೆಪಿ ಪ್ರಧಾನ ಕಾರ್ಯದರ್ಶಿ ಕೈಲಾಷ್ ವಿಜಯ್‌ವರ್ಗೀಯ ತನ್ನೆಲ್ಲಾ 44 ಅಭ್ಯರ್ಥಿಗಳನ್ನು ಗುರ್ಮೀತ್‌ನ ಆಶ್ರಮಕ್ಕೆ ಕರೆದೊಯ್ದು ಬಹಿರಂಗವಾಗಿ ಆಶೀರ್ವಾದ ಮಾಡಿಸಿದ್ದ. ಅದು ಬಿಜೆಪಿ ಗೆಲುವಿನಲ್ಲಿ ಪ್ರಧಾನ ಪಾತ್ರ ವಹಿಸಿತ್ತು.

ಆಗಿನಿಂದಲೂ ಖಟ್ಟರ್ ಸರ್ಕಾರ ರೇಪಿಸ್ಟ್ ಬಾಬಾನಿಗೆ ವಿಧೇಯತೆಯಿಂದಲೇ ನಡೆದುಕೊಂಡು ಬಂದಿದೆ. ಮುಖ್ಯಮಂತ್ರಿ ಖಟ್ಟರ್ ಹಲವು ಬಾರಿ ಗುರ್ಮೀತ್ ಜೊತೆ ವೇದಿಕೆ ಹಂಚಿಕೊಂಡಿದ್ದಲ್ಲದೆ ಸ್ವಚ್ಛ ಭಾರತ ಅಭಿಯಾನಕ್ಕೆ ಆತನ ಜೊತೆಗೂಡಿ ಪೊರಕೆ ಹಿಡಿದು ಪೋಜು ಕೊಟ್ಟಿದ್ದ. ಇನ್ನು ಖಟ್ಟರ್ ಸರ್ಕಾರ ಬೊಕ್ಕಸದಿಂದ ಸಾಕಷ್ಟು ಹಣವನ್ನೂ ಎತ್ತಿ ಕೊಟ್ಟಿದೆ. ಹರ್ಯಾಣ ಬಿಜೆಪಿ ಸರ್ಕಾರದ ಶಿಕ್ಷಣ



ಮಂತ್ರಿ ರಾಮ್ ಬಿಲಾಸ್ ಶರ್ಮಾ 51 ಲಕ್ಷ ಅನುದಾನವನ್ನು ಎತ್ತಿಕೊಟ್ಟರೆ, ಆರೋಗ್ಯ ಮಂತ್ರಿ ಅನಿಲ್ ವಿಜ್ 50 ಲಕ್ಷ ಮತ್ತು ನಗರಾಭಿವೃದ್ಧಿ ಸಚಿವ ಮನೀಷ್ ಗ್ರೋವರ್ 11 ಲಕ್ಷ ಅನುದಾನವನ್ನು ಬಾಬಾನಿಗೆ ಡೊನೇಷನ್ ರೂಪದಲ್ಲಿ ಕೊಟ್ಟಿದ್ದರು. ಈ ಮೂವರು ಸಚಿವರಿಂದಲೇ ಬರೋಬ್ಬರಿ 1.12 ಕೋಟಿ ರೂಪಾಯಿ ಖಜಾನೆಯ ಬೊಕ್ಕಸ ರೇಪಿಸ್ಟ್ ಬಾಬಾನ ಸಾಮ್ರಾಜ್ಯ ಸೇರಿತ್ತು! ಸಾಲದ್ದಕ್ಕೆ ಬಿಜೆಪಿಯ ಕೇಂದ್ರ ಮಂತ್ರಿ ವಿಜಯ್ ಗೋಯಲ್ ಕೂಡಾ ಕೇಂದ್ರ ಸರ್ಕಾರದ ಅನುದಾನದಿಂದ ಡೇರಾಸೌದಕ್ಕೆ ಅನುದಾನ ಬಿಡುಗಡೆ ಮಾಡಿಸುವುದಾಗಿ ಭರವಸೆ ಕೊಟ್ಟಿದ್ದನಂತೆ. ಒಬ್ಬ ರೇಪಿಸ್ಟ್ ಬಾಬಾನಿಗೆ ಈ ಪರಿ ಚಾಕರಿಗಿಳಿಯುತ್ತಾರೆಂದರೆ ಇನ್ನು ಸರ್ಕಾರ ಆತನ ಭಕ್ತರನ್ನು ಎದುರಾಕಿಕೊಳ್ಳುವ ಸಾಹಸಕ್ಕೆ ಕೈಹಾಕುತ್ತಾ? ಬಾಬಾನ ಅನುಯಾಯಿಗಳ ವೋಟ್‌ಬ್ಯಾಂಕ್ ಕಳೆದುಕೊಳ್ಳಲು ಇಷ್ಟವಿಲ್ಲದೆ ಅವತ್ತು ಖಟ್ಟರ್ ಸರ್ಕಾರ ನಿಷ್ಠುರ ಕ್ರಮಕ್ಕೆ ಮುಂದಾಗದಿದ್ದದ್ದೇ ದುರಂತಕ್ಕೆ ಕಾರಣವೆನ್ನುವುದರಲ್ಲಿ ಎರಡು ಮಾತಿಲ್ಲ.

ಕೈಕಟ್ಟಿ ಕೂತ ಖಟ್ಟರ್

ಹರ್ಯಾಣದ ಲೋಕಲ್ ಬಿಜೆಪಿ ಲೀಡರೊಬ್ಬ ಹೇಳುವಂತೆ 2019ರ ಲೋಕಸಭಾ ಚುನಾವಣೆಗೆ ಗುರ್ಮೀತ್ ಬಾಬಾನನ್ನು ಪೊಲಿಟಿಕಲ್ ಟೂಲ್ ಆಗಿ ಬಳಸಿಕೊಳ್ಳಲು ಬಿಜೆಪಿ ಲೆಕ್ಕಾಚಾರ ಹಾಕಿತ್ತಂತೆ. ದೇಶಾದ್ಯಂತ 1 ಕೋಟಿಗೂ ಹೆಚ್ಚು ಅನುಯಾಯಿಗಳನ್ನು ಹೊಂದಿರುವ ಗುರ್ಮೀತ್ ಹರ್ಯಾಣ, ಪಂಜಾಬ್, ದೆಹಲಿಯಲ್ಲಿ ಸಕಷ್ಟು ಹಿಡಿತ ಹೊಂದಿದ್ದಾನೆ. ಅದೇ ಕಾರಣಕ್ಕೆ ಬಿಜೆಪಿಗೆ ಅವನತ್ತ ಒಂಥರಾ ಸಾಫ್ಟ್ ಕಾರ್ನರ್. ರೇಪ್ ಕೇಸಿಗೆ ಸಂಬಂಧಪಟ್ಟಂತೆ ಗುರ್ಮೀತ್ ದೋಷಿ ಹೌದೋ, ಅಲ್ಲವೋ ಎಂಬುದನ್ನು ಕೋರ್ಟ್ ಪ್ರಕಟಿಸಲಿದ್ದ 10 ದಿನ ಮೊದಲು ಆತನ ಹುಟ್ಟುಹಬ್ಬವಿತ್ತು. ಆ ನೆಪದಲ್ಲೇ ಬೇರೆಬೇರೆ ಕಡೆಯಿಂದ ಡೇರಾ ಅನುಯಾಯಿಗಳನ್ನು ಗುಡ್ಡೆ ಹಾಕುವ ಕೆಲಸ ಆರಂಭವಾಗಿತ್ತು. ಆಶ್ರಮದಲ್ಲಿ ನಡೆದಿದ್ದ ಹುಟ್ಟುಹಬ್ಬಕ್ಕೆ ಖಟ್ಟರ್ ಸರ್ಕಾರದ ಹಲವು ಮಂತ್ರಿಗಳು ಹೋಗಿ ರೇಪಿಸ್ಟ್ ಬಾಬಾನಿಗೆ ವಿಶ್ ಮಾಡಿ ಬಂದಿದ್ದರು!

ತೀರ್ಪು ಪ್ರಕಟವಾಗುವ ದಿನ ಗಲಾಟೆ ನಡೆಯಬಹುದೆನ್ನುವ ಸ್ಪಷ್ಟ ಸೂಚನೆ ಸರ್ಕಾರದ ಗುಪ್ತಚರ ಇಲಾಖೆಗೆ ತಿಳಿದಿತ್ತು, ಹಾಗಾಗಿಯೇ ಆಗಸ್ಟ್ 18ರಂದೇ ಪಂಚಕುಲಾದ ಸುತ್ತಮುತ್ತ ಸೆಕ್ಷನ್ 144ನ್ನು ಸರ್ಕಾರ ಜಾರಿ ಮಾಡಿತ್ತಾದರು ಅದರಲ್ಲಿ ಶಸ್ತ್ರಾಸ್ತ್ರಗಳನ್ನು ಕೊಂಡೊಯ್ಯಲು ನಿಷೇಧ ಹೇರಲಾಗಿತ್ತೆ ವಿನಾಃ ಗುಂಪುಗೂಡುವುದರ ಮೇಲೆ ಯಾವ ನಿರ್ಬಂಧವೂ ಇರಲಿಲ್ಲ. ಹುಟ್ಟುಹಬ್ಬದ ನೆಪದಲ್ಲಿ ಆಶ್ರಮದಲ್ಲಿ ಜೊತೆಗೂಡಿದ್ದ ಅನುಯಾಯಿಗಳು ಪಂಚಕುಲಾವನ್ನು ಹೊಕ್ಕಲು ಈ ಲೋಪದೋಷ ನೆರವು ನೀಡಿತು. ಆಗಸ್ಟ್ 21ರ ವೇಳೆಗೆ ಪಂಚಕುಲಾ ಪ್ರದೇಶವು ಡೇರಾ ಅನುಯಾಯಿಗಳಿಂದ ಕಿಕ್ಕಿರಿದು ಹೋಯ್ತು. ತೀರ್ಪು ಪ್ರಕಟವಾಗುವ ಮೂರು ದಿನ ಮೊದಲೇ 20,000 ಡೇರಾ ಅನುಯಾಯಿಗಳು ಪಂಚಕುಲಾದಲ್ಲಿ ಝಂಡಾ ಹೂಡಿದ್ದರು. ಆಗಸ್ಟ್ 22ರಂದು ಸರ್ಕಾರ ಎರಡನೇ ಬಾರಿ ಸೆಕ್ಷನ್ 144 ನಿಷೇಧಾಜ್ಞೆಯನ್ನು ಜಾರಿ ಮಾಡಿತಾದರೂ ಮತ್ತದೇ ಯಡವಟ್ಟು ಮಾಡಿತ್ತು. ಶಸ್ತ್ರಾಸ್ತ್ರಕ್ಕೆ ನಿರ್ಬಂಧ ಹೇರಿ ಜನ ಗುಂಪುಗೂಡುವುದರತ್ತ ತಲೆ ಕೆಡಿಸಿಕೊಂಡಿರಲಿಲ್ಲ.


ಈ ಕುರಿತು ಸರ್ಕಾರವನ್ನು ಪ್ರಶ್ನಿಸಿದರೆ ಬಾಬಾನ ಪರಮಾಪ್ತ ಅನುಯಾಯಿಯೂ ಆದ ಶಿಕ್ಷಣ ಮಂತ್ರಿ ರಾಮ್ ಬಿಲಾಸ್ ಶರ್ಮಾ '144 ಸೆಕ್ಷನ್ ಡೇರಾ ಅನುಯಾಯಿಗಳಿಗೆ ಅನ್ವಯಿಸುವುದಿಲ್ಲ, ಯಾಕೆಂದ್ರೆ ಅವರೆಲ್ಲ ಶಾಂತಿಪ್ರಿಯ ಜನ. ಒಂದು ಸಣ್ಣ ಗಿಡಕ್ಕೂ ಅವರಿಂದ ತೊಂದರೆಯಾಗಲ್ಲ' ಅಂತ ಸಮರ್ಥಿಸಿಕೊಂಡಿದ್ದ. ಸುರಕ್ಷತೆಯ ಕುರಿತು ಒತ್ತಡ ಹೆಚ್ಚಾದಾಗ ಆಗಸ್ಟ್ 24ರಂದು ತನ್ನ ನಿಷೇಧಾಜ್ಞೆಯಲ್ಲಿದ್ದ ಲೋಪವನ್ನು ಸರಿಪಡಿಸಿಕೊಂಡ ಸರ್ಕಾರ ಜನ ಗುಂಪುಗೂಡುವುದರ ಮೇಲೂ ನಿರ್ಬಂಧ ಹೇರಿತ್ತು. ಆದರೆ ಅದು ಕೂಡಾ ನೆಪ ಮಾತ್ರಕ್ಕಷ್ಟೆ. ಯಾಕೆಂದರೆ ಅಷ್ಟರಲ್ಲಾಗಲೆ ಪಂಚಕುಲಾದ ಒಳಕ್ಕೆ ತೂರಿಕೊಂಡಿದ್ದ ಸುಮಾರು ಒಂದೂವರೆ ಲಕ್ಷದಷ್ಟು ಡೇರಾ ಅನುಯಾಯಿಗಳನ್ನು ಹೊರಹಾಕುವ ಕೆಲಸವನ್ನಾಗಲಿ ಅಥವಾ ಮುನ್ನೆಚ್ಚರಿಕ ಕ್ರಮವಾಗಿ ಬಂಧಿಸುವ ಸಾಹಸಕ್ಕಾಗಲಿ ಸರ್ಕಾರ ಮುಂದಾಗಲೇ ಇಲ್ಲ.

ಇನ್ನು ದೋಷಿಯೆಂದು ತೀರ್ಪು ಪ್ರಕಟವಾದ ದಿನ ಸಿರ್ಸಾದ ತನ್ನ ಆಶ್ರಮದಿಂದ ಅಜಮಾಸು ಇನ್ನೂರು ಕಾರುಗಳ ದಂಡಿನೊಂದಿಗೆ ಪಂಚಕುಲಾಗೆ ಬಂದ ಗುರ್ಮೀತ್‌ಗೆ ಪೊಲೀಸರು ಕಿಂಚಿತ್ತೂ ಅಡೆತಡೆ ಒಡ್ಡಲಿಲ್ಲ. ಅವುಗಳಲ್ಲಿ ಬಹಳಷ್ಟು ವಾಹನಗಳು ಪಂಚಕುಲಾದ ಹೊರಗಡೆಯೇ ನಿಂತವು. ಆಮೇಲೆ ಮಾಧ್ಯಮಗಳಲ್ಲಿ ವರದಿಯಾದ ಪ್ರಕಾರ ಗಲಾಟೆಗೆ ಬಳಸಲಾದ ಶಸ್ತ್ರಾಸ್ತ್ರಗಳು ಆ ವಾಹನಗಳಲ್ಲೇ ಇದ್ದವಂತೆ! ಖಟ್ಟರ್ ಸರ್ಕಾರ ಪ್ರಾಮಾಣಿಕವಾಗಿ ಪ್ರಯತ್ನ ಮಾಡಿದ್ದರೆ ಗಲಾಟೆ, ಪ್ರಾಣಹಾನಿಯನ್ನು ಖಂಡಿತ ತಪ್ಪಿಸಬಹುದಿತ್ತು. ಆದರೆ ವೋಟ್ ಬ್ಯಾಂಕ್ ರಾಜಕಾರಣಕ್ಕೆ ಶರಣಾದ ಖಟ್ಟರ್ ಕೈಕಟ್ಟಿ ಕೂತುಬಿಟ್ಟ. ಊರೆಲ್ಲ ಕೊಳ್ಳೆಹೋದ ಮೇಲೆ ಅಗಸೆ ಬಾಗಿ ಹಾಕಿದರು ಅನ್ನುವಂತೆ 'ಡೇರಾ ಅನುಯಾಯಿಗಳು ಅಪಾರ ಸಂಖ್ಯೆಯಲ್ಲಿದ್ದರು, ನಾವು ಜಾಗರೂಕತೆಯಿಂದ ವ್ಯವಹರಿಸಬೇಕಾದ ಪ್ರಸಂಗವಿತ್ತು. ತಾಳ್ಮೆ ವಹಿಸಬೇಕಾದ್ದು ಆ ಕ್ಷಣದ ಜರೂರಾಗಿತ್ತು, ನಾವೇನಾದರು ಆತುರಪಟ್ಟಿದ್ದರೆ ಪರಿಸ್ಥಿತಿ ನಮ್ಮ ಕೈಮೀರಿ ಹೋಗಿರುತ್ತಿತ್ತು(!). 2016ರ ಜಾಟ್ ಹೋರಾಟದಲ್ಲಿ ನಡೆದ ಅನಾಹುತ ನಮ್ಮ ಕಣ್ಮುಂದೆ ಇದ್ದುದರಿಂದ ನಾವು ಹೆಚ್ಚೇನು ಕ್ರಮಕ್ಕೆ ಮುಂದಾಗಲಿಲ್ಲ' ಎಂಬ ಶರಣಾಗತಿಯ ಹೇಳಿಕೆ ಕೊಟ್ಟಿರುವ ಖಟ್ಟರ್ ನಿಜಕ್ಕೂ ಮುಖ್ಯಮಂತ್ರಿ ಸ್ಥಾನದಲ್ಲಿ ಮುಂದುವರೆಯುವ ಹಕ್ಕನ್ನು ಉಳಿಸಿಕೊಂಡಿಲ್ಲ. ಇನ್ನು ತಮ್ಮ ಸರ್ಕಾರದ ಹೊಣೆಗೇಡಿತನವನ್ನು 'ಗುಂಪಿನಲ್ಲಿದ್ದ ಕಿಡಿಗೇಡಿಗಳ' ಮೇಲೆ ಹೊರಿಸಲು ಮುಂದಾದ ಖಟ್ಟರ್‌ಗೆ ನ್ಯಾಯಾಲಯವೇ ತಪರಾಕಿ ಕೊಟ್ಟು 'ಒಂದುವೇಳೆ ಸಮಾಜಘಾತುಕ ಶಕ್ತಿಗಳು ಜಮಾವಣೆಯಾಗುತ್ತಿರೋದು ಮುಖ್ಯಮಂತ್ರಿಗೆ ಗೊತ್ತಿದ್ದರೆ ಕಳೆದ ಏಳುದಿನಗಳಿಂದ ಅಂತವರು ಪಂಚಕುಲಾವನ್ನು ಪ್ರವೇಶಿಸದಂತೆ ತಡೆಯದೆ ಸುಮ್ಮನೇ ಕೂತದ್ದೇಕೆ?' ಅಂತ ಪ್ರಶ್ನಿಸಿದೆ. ಸದ್ಯಕ್ಕೆ ಎಮ್ಮೆಗೆ ಬರೆ ಹಾಕುವ ಕೆಲಸ ಮಾಡಿರೋ ಖಟ್ಟರ್ ಸರ್ಕಾರ ಪಂಚಕುಲಾದ ಡಿಸಿಪಿಯನ್ನು ಸಸ್ಪೆಂಡ್ ಮಾಡಿ ತಾನು ಬಚಾವಾಗುವ ಹವಣಿಕೆಯಲ್ಲಿದೆ. ಇದನ್ನೂ ಸೂಕ್ಷ್ಮವಾಗಿ ಗಮನಿಸಿರುವ ಹೈಕೋರ್ಟ್ ಅಧಿಕಾರಿಯನ್ನು ಬಲಿಪಶು ಮಾಡುವ ಬದಲು ಭದ್ರತಾ ವೈಫಲ್ಯದ ಕುರಿತು ಸಮಗ್ರ ತನಿಖೆ ನಡೆಸಿ ಅಂತ ಸರ್ಕಾರಕ್ಕೆ ಚಾಟಿ ಬೀಸಿದೆ. ಇಷ್ಟೆಲ್ಲ ಆದರೂ ಬಿಜೆಪಿ ಖಟ್ಟರ್ ಸರ್ಕಾರವನ್ನು ಸಮರ್ಥಿಸಿಕೊಳ್ಳುತ್ತಿದೆಯೆಂದರೆ ಈ ದಾಂಧಲೆಗೆ ದೊಡ್ಡ ಮಟ್ಟದಲ್ಲಿ ಬಿಜೆಪಿಯಿಂದ ಸಹಕಾರವಿದೆ ಅನ್ನೋದು ಖಾತ್ರಿಯಾದಂತಾಯ್ತು!

■ ಗಿರೀಶ್ ತಾಳಿಕಟ್ಟೆ

ಮೋದಿಗೆ ಕೋರ್ಟ್ ತರಾಟೆ

'ಪ್ರಧಾನಮಂತ್ರಿ ಇರೋದು ಈ ದೇಶಕ್ಕೊ ಅಥವಾ ಕೇವಲ ಬಿಜೆಪಿ ಪಾರ್ಟಿಗೊ?' ಹೀಗಂತ ಮೋದಿಯನ್ನು ತರಾಟೆಗೆ ತೆಗೆದುಕೊಂಡದ್ದು ಕಾಂಗ್ರೆಸ್ ಅಥವಾ ಮೋದಿ ವಿರೋಧಿಗಳಲ್ಲ, ಖುದ್ದು ಪಂಜಾಬ್-ಹರ್ಯಾಣ ಹೈಕೋರ್ಟ್!



ರೇಪಿಸ್ಟ್ ಬಾಬಾನನ್ನು ಅತ್ಯಾಚಾರಿ ಅಂತ ಘೋಷಿಸಿದ ತರುವಾಯ ಭುಗಿಲೆದ್ದ ಹಿಂಸಾಚಾರದಲ್ಲಿ ಮೂವತ್ತೆಂಟು ಮಂದಿ ಪ್ರಾಣ ಕಳೆದುಕೊಂಡದ್ದು, ಅಪಾರ ಆಸ್ತಿಪಾಸ್ತಿ ಹಾನಿಯಾದದ್ದನ್ನು ಗಂಭೀರವಾಗಿ ಪರಿಗಣಿಸಿದ ನ್ಯಾಯಾಲಯ ಈ ವಿಚಾರದಲ್ಲಿ ಹರ್ಯಾಣ ಸರ್ಕಾರ ಮತ್ತು ಕೇಂದ್ರ ಸರ್ಕಾರಗಳ ಕಾರ್ಯವೈಖರಿಯನ್ನು ಸೂಕ್ಷ್ಮವಾಗಿ ಗಮನಿಸಿ ಹೀಗೆ ತನ್ನ ಸಿಟ್ಟನ್ನು ಹೊರಹಾಕಿದೆ. ಹಿಂಸೆಯನ್ನು ಖಂಡಿಸಿ, ಜನರು ಶಾಂತಿ ಕಾಪಾಡಬೇಕು ಎಂದು ಟ್ವೀಟಿಸುವುದಕ್ಕಷ್ಟೇ ಸೀಮಿತವಾದ ಪ್ರಧಾನಿ ಮೋದಿಯ ನಡೆಯನ್ನು 'ಪರಾಮರ್ಶೆಯಿಲ್ಲದ ಪ್ರತಿಕ್ರಿಯೆ' (Knee-Jerk Reaction) ಎಂದು ಟೀಕಿಸಿರುವ ನ್ಯಾಯಾಲಯ ಈ ಸಂಬಂಧ ಯಾರ್‍ಯಾರೊ ಅಧಿಕಾರಿಗಳನ್ನು ಬಲಿಪಶು ಮಾಡುವ ಬದಲು ಭದ್ರತಾ ವೈಫಲ್ಯದ ಕುರಿತು ಸಮಗ್ರ ತನಿಖೆ ನಡೆಸಿ ವರದಿ ಒಪ್ಪಿಸುವಂತೆ ಸರ್ಕಾರಕ್ಕೆ ಸೂಚಿಸಿದೆ. ನ್ಯಾಯಾಲಯದಲ್ಲಿ ಸರ್ಕಾರದ ಪ್ರತಿನಿಧಿಯಾಗಿ ಕೆಲಸ ಮಾಡುವ ಸಾಲಿಸಿಟರ್ ಜನರಲ್ ಸತ್ಯಪಾಲ್ ಜೈನ್, ಆಗಿರುವ ಅನಾಹುತಕ್ಕೆ ಕಳಕಳಿ ತೋರುವ ಬದಲು ಹಿಂಸಾಚಾರ ಕೇವಲ ಬಿಜೆಪಿ ಸರ್ಕಾರವಿರುವ ಹರ್ಯಾಣದಲ್ಲಿ ಮಾತ್ರವಲ್ಲ, ಬೇರೆ ಪಕ್ಷಗಳು ಅಧಿಕಾರದಲ್ಲಿರುವ ಇತರೆ ರಾಜ್ಯಗಳಲ್ಲೂ ನಡೆದಿದೆ ಅನ್ನೋ ಬೇಜವಾಬ್ದಾರಿ ಹೇಳಿಕೆ ಕೊಟ್ಟದ್ದು ನ್ಯಾಯಾಲಯವನ್ನು ಇನ್ನಿಲ್ಲದಂತೆ ಕೆರಳಿಸಿತ್ತು. ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಎಸ್.ಎಸ್.ಸರೋನ್, ನ್ಯಾಯಮೂರ್ತಿಗಳಾದ ಸೂರ್ಯಕಾಂತ್, ಅವನೀಶ್ ಜೇಂಗನ್‌ರನ್ನು ಒಳಗೊಂಡ ತ್ರಿಸದಸ್ಯ ಪೀಠವು 'ನೀವೇಕೆ (ಕೇಂದ್ರ) ಪ್ರಾಂತ್ಯಗಳನ್ನು ವಸಾಹತು ಪ್ರದೇಶಗಳಂತೆ ಕಾಣುತ್ತೀರಿ? ರಾಷ್ಟ್ರೀಯ ಸಾರ್ವಭೌಮತೆ ಅನ್ನೋದು ರಾಜಕೀಯ ಪಕ್ಷಗಳನ್ನೂ ಮೀರಿದಂತದ್ದು. ನಾವು ಒಂದು ಐಕ್ಯ ರಾಷ್ಟ್ರದ ಪ್ರಜೆಗಳೊ ಅಥವಾ ಒಂದು ರಾಜಕೀಯ ಪಕ್ಷದ ದೇಶದ ಪ್ರಜೆಗಳೊ?' ಎಂದು ತರಾಟೆಗೆ ತೆಗೆದುಕೊಂಡಿತ್ತು. ಡೇರಾ ಭಕ್ತರಾಗಿ ಶರಣಾಗಿ ಕೈಕಟ್ಟಿ ಕೂತ ಖಟ್ಟರ್ ಸರ್ಕಾರದ ವೈಖರಿಗೆ ಕ್ಯಾಕರಿಸಿದ ನ್ಯಾಯಪೀಠ 'ಇದೊಂದು ವೋಟ್‌ಬ್ಯಾಂಕ್ ಆಮಿಷದ ರಾಜಕೀಯ ಶರಣಾಗತಿ... ಅವರೆಲ್ಲ (ಗಲಭೆಕೋರ ಡೇರಾ ಅನುಯಾಯಿಗಳು) ಹೊರಗಿನಿಂದ ಬಂದವರು, ಅವರು ಪಂಚಕುಲಾವನ್ನು ಹೊಕ್ಕು, ಇಲ್ಲೇ ಠಿಕಾಣಿ ಹೂಡುವುದಕ್ಕೆ ನೀವು ಪ್ರತಿರೋಧ ಒಡ್ಡಲೇ ಇಲ್ಲ!' ಎಂದಿದೆ. ಅಲ್ಲಿಗೆ ಹರ್ಯಾಣದ ಬಿಜೆಪಿ ಸರ್ಕಾರವನ್ನು ನ್ಯಾಯಾಲಯವೇ ಅಪರಾಧಿಯ ಕಟಕಟೆಯಲ್ಲಿ ನಿಲ್ಲಿಸಿದಂತಾಯಿತಲ್ಲವೆ....

ಕೆ.ಆರ್ ನಗರ: ಜೆಡಿಎಸ್ ಸಾರಾ ಎದುರು ರಮ್ಯಾ 'ಕೈ' ಅಭ್ಯರ್ಥಿ!?




ಜೆಡಿಎಸ್ ಶಾಸಕ ಸಾರಾ ಮಹೇಶನ ನಿದ್ದೆಗೆಡಿಸುವಂತಹ ಸುದ್ದಿಯೊಂದು ಕೆ.ಆರ್.ನಗರ ವಿಧಾನಸಭಾ ಕ್ಷೇತ್ರದಲ್ಲಿ ಹರಿದ್ಾಡುತ್ತಿದೆ. ಆತನಿಗೆ ಎದುರಾಳಿಯಾಗಿ ತಾರಾ ವರ್ಚಸ್ಸಿನ ನಟಿ ರಮ್ಯಾಳನ್ನು ಕಣಕ್ಕಿಳಿಸಲು ಕಾಂಗ್ರೆಸ್ ಚಿಂತನೆ ನಡೆಸುತ್ತಿದೆ ಅನ್ನೋದೆ ಆ ಸುದ್ದಿ. ಕೆ.ಆರ್.ನಗರ ಆಡಳಿತಾತ್ಮಕವಾಗಿ ಮೈಸೂರು ಜಿಲ್ಲೆಗೆ ಸೇರಿದರೂ ಲೋಕಸಭಾ ಕ್ಷೇತ್ರ ವಿಂಗಡಣೆಯಲ್ಲಿ ಮಂಡ್ಯ ಕಾನ್‌ಸ್ಟಿಟ್ಯುಯೆನ್ಸಿಗೆ ಸೇರುತ್ತೆ. ಈ ಹಿಂದೆ ರಮ್ಯಾ ಮಂಡ್ಯದ ಎಂಪಿಯಾಗಿದ್ದವಳು, ಮತ್ತೊಮ್ಮೆ ಅಲ್ಲಿಂದಲೆ ಸ್ಪರ್ಧಿಸಿ ಸೋತವಳು ಎಂಬ ಕಾರಣಕ್ಕೆ ಕೆ.ಆರ್.ನಗರದಲ್ಲಿ ಅಭ್ಯರ್ಥಿಯಾಗಿಸಲು ಕಾಂಗ್ರೆಸ್ ಆಲೋಚಿಸುತ್ತಿದೆ ಎಂಬ ಮಾತು ಕೇಳಿಬರುತ್ತಿದೆ. ಅದಿನ್ನೂ ಸ್ಪಷ್ಟ ರೂಪವನ್ನು ಪಡೆದುಕೊಂಡಿಲ್ಲವಾದರು ರಮ್ಯಾ ಅಭ್ಯರ್ಥಿಯಾದರೆ ಸಾರಾ ಮಹೇಶ್ ಗೆಲುವು ದೂರ ಸರಿಯುತ್ತೆ ಅನ್ನೋದು ಮಾತ್ರ ಸತ್ಯ.

ಈ ಮೊದಲು ಕಾಂಗ್ರೆಸ್‌ಗೆ ಕೆ.ಆರ್.ನಗರವನ್ನು ಗೆದ್ದುಕೊಡುತ್ತಿದ್ದ ಎಚ್.ವಿಶ್ವನಾಥ್ ಅಲ್ಲಿಂದ ಕದಲಿದ ನಂತರ ಸಾರಾ ಮಹೇಶ್ ಕ್ಷೇತ್ರವನ್ನು ತನ್ನ ಬಿಗಿಹಿಡಿತಕ್ಕೆ ತೆಗೆದುಕೊಂಡಿದ್ದಾರೆ. ಇದೀಗ ವಿಶ್ವನಾಥ್, ಸಿದ್ದು ಮೇಲೆ ಮುನಿಸಿಕೊಂಡು ಜೆಡಿಎಸ್ ಹೊಕ್ಕಿರೋದ್ರಿಂದ ಕೆ.ಆರ್. ನಗರದಲ್ಲಿ ಕಾಂಗ್ರೆಸ್‌ಗೆ ಬೇರುಗಳೇ ಇಲ್ಲದಂತಾಗಿವೆ. ಹಾಗಾಗಿ ಸಾರಾ ಮಹೇಶ್ ಮತ್ತೊಂದು ಸುಲಭದ ಗೆಲುವಿನ ನಿರೀಕ್ಷೆಯಲ್ಲಿದ್ದರು. ಆದರೆ ರಮ್ಯಾ ಅಭ್ಯರ್ಥಿಯಾಗುತ್ತಾಳೆನ್ನುವ ಸುದ್ದಿ ಆತನ ನಿದ್ದೆಗೆಡಿಸಿದೆ.


ವಿಶ್ವನಾಥ್ ಕ್ಷೇತ್ರ ಬಿಟ್ಟಮೇಲೆ ಜೆಡಿಎಸ್ ಶಾಸಕ ಸಾ.ರಾ.ಮಹೇಶ್ ಪ್ರಬಲವಾಗಿ ಬೆಳೆದು ನಿಂತಿದ್ದಾರೆ. ಅವರನ್ನು ಎದುರಿಸಬೇಕಾದರೆ ಪ್ರಬಲ, ವರ್ಚಸ್ಸು ಇರುವ ವ್ಯಕ್ತಿಯೇ ಬೇಕು. ಯಾಕೆಂದರೆ ಈ ಹಿಂದೆ ಸಾ.ರಾ.ಮಹೇಶ್‌ಗೆ ಎದುರಾಗಿ ಸಪ್ಪೆ ಅಭ್ಯರ್ಥಿಗಳನ್ನು ಕಾಂಗ್ರೆಸ್ ನಿಲ್ಲಿಸುತ್ತಾ ಬಂದದ್ದೇ ಮಹೇಶ್ ಗೆಲುವುಗಳ ಗುಟ್ಟಾಗಿತ್ತು. ಕಳೆದ ಸಲ ಕಾಂಗ್ರೆಸ್‌ನಿಂದ ನಿಂತಿದ್ದ ದೊಡ್ಡಸ್ವಾಮಿಗೌಡ ಒಳ್ಳೆಯ ಹೆಸರು ಮಾಡಿದ್ದರೂ ಸಾರಾ ತಂತ್ರಗಾರಿಕೆಯನ್ನು ಸರಿಗಟ್ಟುವಂತ ವರ್ಚಸ್ಸು ಹೊಂದಿದವರಾಗಿರಲಿಲ್ಲ. ಅದೇ ಕಾಂಗ್ರೆಸ್‌ಗೆ ಮುಳುವಾಯ್ತು. ಈ ಸಲವೂ ಅಂತದ್ದೇ ಯಡವಟ್ಟು ಮಾಡಿಕೊಳ್ಳೋದು ಬೇಡ ಎನ್ನುವ ತೀರ್ಮಾನಕ್ಕೆ ಬಂದಿರುವ ಸ್ಥಳೀಯ ಕಾಂಗ್ರೆಸ್ಸಿಗರು ರಮ್ಯಾ ಸ್ಪರ್ಧಿಸಬೇಕೆನ್ನುವ ಬೇಡಿಕೆ ಇಟ್ಟಿದ್ದಾರಂತೆ.

ಅಷ್ಟಕ್ಕೂ ರಮ್ಯ ಕಾಂಗ್ರೆಸ್ ಹುರಿಯಾಳಾಗೋದು ಅಷ್ಟೇನು ಸುಲಭವಲ್ಲ, ಯಾಕೆಂದರೆ ಕಳೆದ ಸಲ ಸೋತಿದ್ದ ದೊಡ್ಡಸ್ವಾಮಿಗೌಡರು ಹಾಲಿ ಝಡ್‌ಪಿ ಮೆಂಬರಾಗಿರುವ




ತನ್ನ ಮಗ ಡಿ.ರವಿಶಂಕರ್‌ಗೆ ಟಿಕೆಟ್ ಕೊಡಿಸಲು ಓಡಾಡುತ್ತಿದ್ದಾರೆ. ಸಿಎಂ ಸಿದ್ದರಾಮಯ್ಯನವರೊಂದಿಗೆ ಆತ್ಮೀಯತೆ ಹೊಂದಿರುವ ದೊಡ್ಡಸ್ವಾಮಿಗೌಡರು ಅದರಲ್ಲಿ ಕಾಮಿಯಾಬಿಯಾದರೆ ರಮ್ಯಾಗೆ ಟಿಕೆಟ್ ಸಿಗೋದು ಡೌಟು. ಸಾಲದ್ದಕ್ಕೆ ಡಿಕೆ ಶಿವಕುಮಾರ್ ಆಪ್ತನಾದ ಹೊಸಹಳ್ಳಿ ವೆಂಕಟೇಶ್ ಡಿಕೆಶಿ ಮೂಲಕ ಟಿಕೆಟ್‌ಗೆ ಯತ್ನಿಸುತ್ತಿದ್ದಾನೆ. ಇವೆಲ್ಲ ಅಡೆತಡೆಗಳನ್ನು ಮೀರಿ ರಮ್ಯಾ ಅಭ್ಯರ್ಥಿಯಾಗುತ್ತಾಳಾ ಅನ್ನೋದು ಸದ್ಯದ ಪ್ರಶ್ನೆ.

ಕಾಂಗ್ರೆಸ್‌ನ ಸೋಷಿಯಲ್ ಮೀಡಿಯಾದಲ್ಲಿ ಸಕ್ರಿಯರಾಗಿರುವ ರಮ್ಯಾಳಲ್ಲಿ ಈ ಮೊದಲಿದ್ದ ಎಳಸುತನವಿಲ್ಲ, ಅಲ್ಲದೇ ಆಳವಾಗಿ ಪ್ರಭಾವ ಬೇರುಬಿಟ್ಟುಕೊಂಡಿರುವ ಸಾರಾ ಮಹೇಶ್ ವರ್ಚಸ್ಸು ತಗ್ಗಿಸುವ ಸಿನಿಮಾ ನಟಿಯೆಂಬ



ಗ್ಲಾಮರ್ ಕೂಡಾ ರಮ್ಯಾಳ ಪ್ಲಸ್ ಪಾಯಿಂಟ್. ಇನ್ನೂ ಜಾತಿ ಕೆಮಿಸ್ಟ್ರಿಯೂ ರಮ್ಯಾಳ ಗೆಲುವಿಗೆ ಸಾಥ್ ನೀಡಲಿದೆ. ಕೆ.ಆರ್. ನಗರದ ಒಟ್ಟು ಎರಡು ಲಕ್ಷ ಮತಗಳಲ್ಲಿ ಒಕ್ಕಲಿಗ ಮತಗಳೇ ನಿರ್ಣಾಯಕ. ಜೆಡಿಎಸ್‌ನ ಜಾತಿ ಟ್ರಂಪ್ ಕಾರ್ಡ್ ಬಳಸಿಯೇ ಸಾರಾ ಮಹೇಶ್ ಗೆದ್ದು ಬರುತ್ತಿರೋದು. ಅದೇ ಒಕ್ಕಲಿಗ ಜಾತಿಗೆ ಸೇರಿದ ರಮ್ಯಾಳನ್ನು ಕಣಕ್ಕಿಳಿಸಿದರೆ ಆ ಮತಗಳು ಛಿದ್ರವಾಗಿ ಸಾರಾ ಮಹೇಶ್‌ಗೆ ಮೊದಲ ಪೆಟ್ಟು ತಗುಲಲಿದೆ. ಇನ್ನು ಕ್ಷೇತ್ರದಲ್ಲಿ ಎರಡನೇ ಪ್ರಬಲ ಮತಸಮೂಹವಾದ ಕುರುಬರು ಸಿದ್ದರಾಮಯ್ಯನ ಕಾರಣಕ್ಕೆ ಕಾಂಗ್ರೆಸ್‌ನತ್ತ ಸಾರಾಸಗಟಾಗಿ ನಡೆದು ಬರುತ್ತಾರೆ. ಇನ್ನು




ಸಾರಾ ಮಹೇಶ್

ಅಹಿಂದಾ ಅನುಸರಿಸಿ ದಲಿತ ಹಾಗೂ ಮುಸ್ಲಿಂ ಮತಗಳ ರಮ್ಯಾ ಜೋಳಿಗೆಗೆ ಬಂದು ಬೀಳೋದರಲ್ಲಿ ಅನುಮಾನವಿ ಉಳಿದ ಲಿಂಗಾಯತ ಮತಗಳು ಬಿಜೆಪಿಗೆ ಹೋಗು ಸಾಧ್ಯತೆ ಇತ್ತಾದರು ಇಲ್ಲಿ ಪ್ರಬಲ ಬಿಜೆಪಿ ಅಭ್ಯರ್ಥಿಯ ಇಲ್ಲದಿರೋದರಿಂದ ಅವು ಅತಂತ್ರವಾಗುತ್ತವೆ. ಅಲ್ಲದ ಲಿಂಗಾಯತ ಧರ್ಮದ ಇಶ್ಯೂ ಹುಟ್ಟಿಕೊಂಡ ಮೇ ಒಂದಷ್ಟು ಲಿಂಗಾಯತ ಮತಗಳು ಕಾಂಗ್ರೆಸ್ ಕಡೆ ವಾಲಿರೋದು ವಾಸ್ತವ ಸಂಗತಿ. ಇವೆಲ್ಲವೂ ರಮ ಗೆಲುವಿನಲ್ಲಿ ಪ್ರಧಾನ ಪಾತ್ರ ವಹಿಸುತ್ತವೆ ಅನ್ನೋದ ಸ್ಥಳೀಯ ಕಾಂಗ್ರೆಸ್ಸಿಗರ ಲೆಕ್ಕಾಚಾರ. ಇಷ್ಟೆಲ್ಲ ಕೆಮಿಸ್ಟ್ರಿ ಒಟ್ಟಾ ಒಲಿಯಬೇಕೆಂದರೆ ಅದನ್ನು ಎನ್‌ಕ್ಯಾಶ ಮಾಡಿಕೊಳ್ಳುವಂತಹ ವರ್ಚಸ್ವೀ ಕ್ಯಾಂಡಿಡೇಟನ್ನೇ ಸಾರ ಮಹೇಶ್ ಮುಂದೆ ನಿಲ್ಲಿಸಬೇಕು ಮತ್ತು ಆ ವರ್ಚಸ ರಮ್ಯಾಗಿದೆ ಎನ್ನುವ ಅಂದಾಜಿನಲ್ಲಿ ಅರ್ಥ ಇಲ್ಲದಿ ಹೀಗೆ ವರ್ಚಸ್ಸು, ಜಾತಿ ಲೆಕ್ಕಾಚಾರ, ಭಿನ್ನಮತದ ಭೀ ಹೀಗೆ ಎಲ್ಲಾ ನಿಟ್ಟಿನಿಂದ ಸೇಫ್ ಎನ್ನಬಹುದಾ ಕೆ.ಆರ್.ನಗರದತ್ತ ರಮ್ಯಾ ಕಣ್ಣು ನೆಟ್ಟಿದೆಯಂತೆ.

■ ಶ

ಹರಿಯಾಣದ ಗಲಭೆ ನಿಲ್ಲುಸ್ತವು ಚೀಣಾದ ಮ್ಯಾಲೆ ಯುದ್ಧ ಗೆದ್ದವೆ



• ಬಿ.ಚಂದ್ರೇಗೌಡ

ಕಟ್ಟೆಪುರಾಣ

ಸೀರ ಮಾತನಾಡಲು ಇಷ್ಟಪಡುವ ಸಂಗತಿಗಳು ಉತ್ತರ ಭಾರತದಲ್ಲಿ ನಡೆದುಹೋಗಿದ್ದವು. ಅವುಗಳ ನಿಖರ ಮಾಹಿತಿಗಾಗಿ ವಾಟಿಸ್ಸೆ ಬರುವುದನ್ನೇ ಕಾಯುತ್ತ, ಸುಳ್ಳು ಸಂಗತಿಗಳನ್ನು ಹರಟುತ್ತ ಕುಳಿತಿದ್ದ. ಆ ಸುಳ್ಳುಗಳನ್ನು ತಿದ್ದಿ ಸಾಕಾದ ಉಗ್ರಿ,

"ಅಗೋ ನೋಡು ವಾಟಿಸ್ಸೆ ಬಂದ ಕೇಳಿಕೊ" ಎಂದ.

"ಯಾವ ಮ್ಯಾಟ್ರಪ್ಪ" ಎಂದು ವಾಟಿಸ್ಸೆ ಮಾತಿನ ಚಪಲದಿಂದ ಹಾಜರಾದ.

"ಅವುನ್ಯಾರ್ಲ ಉತ್ತರ ದೇಸದಲ್ಲಿ ಬೇಕಾದೋಟು ಹೆಣ್ಣುಮಕ್ಕಳ ಕೆಡಿಸಿ, ಕೊಲೆನೂ ಮಾಡಿಸಿದ್ದೋನ್ನ ಹಿಡಿದು ಜೈಲಿಗಾಕಿದರಂತೆ?"

"ಸೀರ ಚಿಗಪ್ಪ, ಉತ್ತರ ಭಾರತದಲ್ಲಿ ಏನೋ ನೆಡೀಬಾರದ್ದು ನ್ಯಡಿತು ಅಂತ ಬೊಗಳ ಬ್ಯಾಡ. ನಮ್ಮ ರಾಜ್ಯದಲ್ಲೂ ನ್ಯಡದವೆ. ಅಂಗೆ ನೋಡಿದ್ರೆ ಈ ದೇಸದ ತುಂಬ ನ್ಯಡೀತ ಅವೆ. ಆದ್ರೆ ಪನಿಷ್‌ಮೆಂಟು ಯಾರಿಗೊ ಮಬ್ಬನಿಗಾಯ್ತದೆ ಅಷ್ಟೆಯ" ಎಂದ ವಾಟಿಸ್ಸೆ.

"ಸೀರ ಮಾವ ಕೇಳಿದ್ಕೆ ಸರಿಯಾಗೇಳ್ಳ" ಎಂದಳು ಜುಮ್ಮಿ.

"ನೋಡ ಚಿಗಪ್ಪ, ಹರಿಯಾಣದಲ್ಲಿ ನಮ್ಮ ರಾಮ್‌ರಹೀಮ್ ಅಂತ ಮಬ್ಬ ರಾವಣನಂತ ದೇವ ಮಾನವ ಇದ್ದ."

"ರಾವಣನಿಗ್ಯಾಕೋಲುಸ್ತಿಯೋ?" ಎಂದ ಉಗ್ರಿ.

"ಯಾಕೆ ಅಂದ್ರೆ ರಾವಣ ಯಜ್ಞ, ಯಾಗ ಮಾಡೋ ಬ್ರಾಹ್ಮಣ. ಶಿವಪೂಜೇಲಿ ಅವುನ್ನ ಮೀರಿಸೋರೆ ಇರಲಿಲ್ಲ. ಒಳ್ಳೆ ಸಂಗೀತಗಾರ. ವೀಣೆ ನುಡಿಸೋನು. ನೃತ್ಯ ಮಾಡೋನು. ಅದೂ ನಟರಾಜನ್ನ ಮೀರಿಸೊ ನೃತ್ಯ, ಸಮರಕಲೆ ಗೊತ್ತಿತ್ತು, ಯಲ್ಲ ಕಲೆನೂ ಕರಗತ ಮಾಡಿಕಂಡಿದ್ದ."

"ರಾವಣಾಸುರನಿಗೆ ಅಷ್ಟೆಲ್ಲ ಬತ್ತಿದ್ದವೇನ್ಲ?" ಎಂದಳು ಜುಮ್ಮಿ.

"ಅದ್ಕೆ ಮತ್ತೆ ರಾವುಣನಿಗೆ ಹೋಲಿಸಿದ್ದು, ಈ ರಾಮರಹೀಮನೂ ಹಾಡು ಬರಿತನೆ. ಹಾಡೇಳತನೆ. ಒಳ್ಳೆ ಸ್ಪೋರ್ಟ್ಸ್‌ಮ್ಯಾನು. ಸಿನುಮ ತಗಿತನೆ. ಅದ್ರೆ ಸಂಗೀತದಿಂದ ಹಿಡುದು ನಿರ್ದೇಶನ ಮಾಡೋವರಿಗೂ ಯಲ್ಲ ಅವ್ನೆಯ. ಇದರ ಜೊತೆಗೆ ರಸಿಕ."

"ಹೆಂಗಸರ ಚೋಲು ಅನ್ನು" ಎಂದ ಸೀರ.

"ಅಷ್ಟು ಚೀಪಾಗಿ ಮಾತಾಡಬ್ಯಾಡ ಚಿಗಪ್ಪ ಈ ನಮ್ಮ



ರಾಮರಹೀಮನತ್ರ ಹೈಟೆಕ್ ಶಯನಾಗ್ರಹ ಅವೆ. ಅದರೊಳಿಕೆ ಹೋದೇಟಿಗೆ ಬಾಗಲು ಅವೇ ಹಾಯ್ಕತ್ತವಂತೆ. ಮಂಚದ ಮ್ಯಾಕ್ಕೆ ಮನಿಕಂಡೇಟಿಗೆ ರತಿ ರೂಪಿ ಮನ್ಮತಲೀಲಿ ತಾನಾಗೆ ನ್ಯಡಿತಿದ್ದವಂತೆ. ಅಂತ ಸುಖ ಅನುಭವಿಸಿದೋಳೊಬ್ಬಳು ಈಚಿಗೆ ಬಂದು ತಿರುಗಿಬಿದ್ದು ಆಗಿನ ಪ್ರಧಾನಿ ವಾಜಪೇಯಿಗೊಂದು, ಜಡಜಿಗೊಂದು ಲೆಟ್ರು ಬರದಾಕಿದ್ಳು."

"ಸಾಗರದೋಳು ಮಾಡದಳಲ್ಲ ಅಂಗೆ ಅನ್ನು."

"ಇಲ್ಲ, ಇವುಳು ಒಂದೇ ಸತಿಗೆ ಕಂಪ್ಲೇಂಟ್ ಮಾಡ್ಯವುಳಂತೆ."

"ಅದೇ ಯಪೆಕ್ಟಾಗಿರದು."

"ಊ ಕಣೊ ಉಗ್ರಿ. ಇಮ್ಮಿಡಿಯಟ್ ದೂರೇ ಯಪೆಕ್ಟಾಗವು. ತಡ ಅಯ್ತು ಅಂದ್ರೆ ಹಳ್ಳ ಹಿಡಿತು ಅಂತ್ಲೆಯ. ಈ ರಾಮರಹೀಮನ ಕೇಸಲ್ಲೂ ಅಂಗೆ ಆಗ್ಯದೆ."

"ಅವುನಿಗಾಟೊಂತರ ಜನಬೆಂಬಲ ಯಂಗೇ?" ಎಂದ ಕಾಳಮಾವ.

"ಅಂಥೋರಿಗೆ ಜನಬೆಂಬಲ ಯಾವತ್ತೂ ಇರತದೆ ದೊಡಪ್ಪ, ಇನ್ನೇನು ನಿನ್ನಂಥೋರಿಗಿರತದಾ?"

"ನನ್ನ ಸುದ್ದಿ ಬುಟ್ಟೇಳ್ಳ."

"ಜನಬೆಂಬಲ ಅಂದ್ರೆ ಅಂಗಿಂಗಲ್ಲ ದೊಡಪ್ಪ, ಅರೇಳುಕೋಟಿ ಜನಗಳ ಸಪೋರ್ಟು ಅಂದ್ರೇ ಇದೀ ನಮ್ಮ ಕರ್ನಾಟಕ ಸಪೋರ್ಟು ಮಾಡಿದಂಗಾಯ್ತು."

"ಅದೆ, ಅಂತ ಸಪೋರ್ಟು ಯಂಗೆ ಅಂತ?"

"ಸಾಮಾನ್ಯವಾಗಿ ಇಂತ ಸ್ವಾಮಿಗಳು ದೊಡಪ್ಪ ಜನಬೆಂಬಲಗಳಸೊ ಕ್ಯಲಸ ಮಾಡ್ತರೆ. ಅದರಲ್ಲಿ ಸ್ಕೂಲು, ಆಸುಪತ್ರೆ, ಅನಾಥಾಶ್ರಮ... ಇಂತವು ಮಾಡಿಕಂಡು ತೋರಿಸಿಗತ್ತರೆ. ಈ ಸ್ವಾಮಿ ಮದುವೆ ಆಗದೋರು, ಗಂಡ ಸತ್ತೋರು, ಮಟ್ಟೆಪಾಡಿಗೆ ಸೂಳಿಗಾರಿಕೆ ಮಾಡೋರಿಗ್ಯಲ್ಲ ಒಂದು ದಾರಿ ತೋರಿದ್ನಂತೆ. ಇದರ ಜೊತಿಗೆ ದಲಿತರೋನಂತೆ. ಅದ್ಕೆ ಅವುನ ಕಡಿಯೋರು ತೋಳು ಬಲದ ಜನಾಗಿದ್ರು. ಯಾವಾಗ ಅವುನು ಅಪರಾಧಿ ಅಂತ ಕೋರ್ಟು ತೀರ್ಪು ಬಂತೋ ದೊಂಬಿ ಎಳಿಸಿಬುಟ್ರು ದೊಡಪ್ಪ, ಮೂರು ಸ್ಟೇಟಿಗೆ ಗಲಭೆ ಹಬಿತ್ತು ಅಂದ್ರೆ ಲ್ಯಕ್ಕಹಾಕು."

"ಸರಿ ಸರಕಾರ, ಪ್ರಧಾನಿ ಏನು ಮಾಡ್ತಾಯಿತ್ತು?"

"ನೀನು ಕೇಳದು ನೋಡಿದ್ರೆ, ರಾಜಕುಮಾರ್ ತೀರಿಕಂಡಾಗ ಕುಮಾರಸ್ವಾಮಿ ಎಲ್ಲಿದ್ದ ಅನ್ನಂಗಾಯ್ತು. ಅದೇ ತರದ ಚೀಫ್‌ಮಿನಿಷ್ಟ್ರು ಹರಿಯಾಣದಲ್ಲವುನೆ. ಇನ್ನ ನಮ್ಮ ಮೋದಿ ಮಹಾತ್ಮ ಇನ್ನೂ ಗುಜರಾತ್ ಗುಂಗಿನಿಂದ ಈಚಿಗೆ ಬಂದಿಲ್ಲ, ಅವುನು ಯಾವುದೇ ಗಲಭೆನ ಆರಂಭದಲ್ಲೇ ಹತ್ತಿಕ್ಯದಕ್ಕಿಂತ ಕಾದು ನೋಡ್ತನೆ. ಅದೂ ಮೂರು ದಿನ. ಈಗ್ಲು ನೋಡು ಮೂರು ದಿನಾದ ಮ್ಯಾಲೆ ಇವನ್ಯಲ್ಲ ಸಯಿಸದಿಲ್ಲ ಅಂದವುನೆ."

"ಇಂಥೋನು ಚೀಣಾ ದೇಸದ ಮ್ಯಾಲೆ ಯುದ್ಧ ಮಾಡಿ ಗೆಲ್ಲಕ್ಯಾದತೇನೊ" ಎಂದ ಉಗ್ರಿ.

"ಊ ಕಣೊ. ಅಂಥ ನೆಹರು ಕಾಲ್ದಲ್ಲೇ ಆ ಚೀಣಾ ದೇಸದೋರ ಕೆದಕೀ, ಬುರುಡಿಗೆ ಹೊಡಿಸಿಗಂಡ ಕುಪ್ಪ ಅಂಗೇ ಅದೆ. ಈಗ್ಲು ಮುಟ್ಟಿ ನೋಡಿಕಬವುದು. ಅವುತ್ತೇ ಚೀಣಾ ಅಂಗಿತ್ತು ಅಂದ್ರೇ ಇವತ್ತು ಯಂಗಿರಬವುದು. ಅದ ತಿಳಕಳದೆ ಇರವು ದೇಸ ಆಳೆತಾ ಅವ್ರೆ. ಇಂಥೋರ ದೆಸಿಂದ ಪಾಪ ಹರಿಯಾಣದಲ್ಲಿ ಬೇಕಾದೊಟು ಜನ ಸತ್ತೋದ್ರು."

"ಆ ಸ್ವಾಮಿಗೆ ಏಟೋರ್ಸ ಜೈಲಾಯ್ತು?" ಎಂದಳು ಜುಮ್ಮಿ.

"ಇಪ್ಪತ್ತು ವರಸ ಕಣಕ್ಕ, ಮುದುಕಾದ ಮ್ಯಾಲೆ ಈಚಿಗೆ ಬರಬೇಕು."

"ಅಯ್ಯೋ, ಅಯ್ಯೋ ಇಪ್ಪತ್ತು ವರಸವೇನ್ಲ."

"ಊ ಕಣಕ್ಕ, ಅವುನು ಬಡುಗಡೆ ಆಗಿಬಂದಾಗ ನಾವಿರದಿಲ್ಲ. ಯಾರೂ ಬರದ ಒಂದು ಲೆಟ್ರು ಮೇ ತನಿಖೆ ಮಾಡಿ ಇಂಥ ಶಿಕ್ಷೆ ಕೊಟ್ಟವ್ರುರೆ ಅಂದ್ರೆ ಅವುರಿನ್ಯ ಜಡಜು. ರಾಘವೇಶ್ವರನ ಕೇಸು ನಾವು ನ್ಯಡಸದಿಲ್ಲ ಅಂ ಹಿಂದಕೆ ಸರಕಂಡ್ರಲ್ಲ ಐದು ಜನ, ಆ ಪಂಚಪಾಂಡವ ಇನ್ನಂಥಾ ಜಡಜು ಯೇಚನೆ ಮಾಡು."

"ಇದೊಂಥರ ಮಾತಾಡಬೇಕಾದ್ದೆಯ ಕಣೊ ವಾಟಿಸ್"

"ಊ ಕಣೊ ಉಗ್ರಿ. ಪಾಪ ರಾಘವೇಶನ ಆದೇ ಆಗಾಗ್ಗೆ ಬಲಿಯಾದ ಹೆಣಮಗಳ ಎಲ್ಲೆಲ್ಲಿ ಮಾಡಿದ ತೋ ಅಂತ ಮಠಾನಗಟ್ಟೆ ಕರಕಂಡು ತಿರುಗಿದ್ರು, ಕಡಿಗೆ ತೀರ್ಪೇ ಬತ್ತೊ?"

"ಅದು ಗೊತ್ತಾಗಲಿಲ್ಲ, ಹೇಳ್ಳ?"

"ಏನಾಯ್ತು ಗೊತ್ತೇನಕ್ಕ, ಜಡಜು 'ನೀನು ಅತ ಬುದ್ಧಿ ಹೇಳಬೇಕಾಗಿತ್ತು' ಅಂತ ಕೇಸನೆ ಖುಲಾ ಮಾಡಿಬುಟ್ರು."

"ಅಂಗೆ ನೋಡಿದ್ರೆ ರಾಘವುಂದು ರಾಮರಹೀಮ ಕೇಸಿನಿಂಗೆ ಅದೆ ಕಣೊ."


"ಊ ಕಣೊ ಉಗ್ರೀ. ರಾಘವ ಒಬ್ಬ ಹೆಣ್ಣುಮಗಳ ಅಲ್ಲ, ಬಾಯಿಬುಡದೆಯಿರೂರು ಇನ್ನೂ ಇದ್ದರಂತೆ. ಒಬ್ಬನ ಕೊಲೆನೂ ಆಗಿದ್ದತಂತೆ. ಜೊತಿಗೆ ಅವುನ ಹ ಗೂಂಡಾ ಪಡೆನೂ ಇದ್ದತಂತೆ. ರಾಜಕೀಯವಾಗಿ ಯ ಬಿಜೆಪಿ ನಾಯಕರ ಜೊತೆಗೆ ಕುಮಾರಣ್ಣನೂ ರಾಘ ಭಕ್ತನಂತೆ. ಯತ್ತಮುಂದಾಗಿ ನೋಡಿದ್ರೂ ರಾಂರಹಿ ವಳಗೋದ್ರೆ ಈ ರಾಘವ ಮರಗವ್ರುನೆ ಅಷ್ಟೆ."

"ಪಾಪ ಆ ಜನಾಂಗ ಇಂಥೋನೊಬ್ಬ ಸ್ವಾ ಮಡಿಕಂದು ಭಾಳ ಅವ್ರುಮಾನ ಪಡತಾಯಿರಬೇಕ" ಎಂದ ಕಾಳಮಾವ.

"ನಮ್ಮ ದೊಡಪ್ಪನಿಗೆ ಯಾವಾಗ್ಲು ಮಾನ ಮರಿಯಾ ಚಿಂತೆ. ಇದು ಯಾರಿಗಿರಬೇಕಾಗಿತ್ತು ಅಂದ್ರೇ ಮ ಸ್ವಾಮಿಗಳಿಗಿರಬೇಕಾಗಿತ್ತು, ರಾಜಕಾರಣಿಗಳಿಗಿರಬೇಕಾಗಿ ಅಲವೆ ದೊಡಪ್ಪ?"

"ಅವುರಿಗಿರದಿಲ್ಲ ಕಂಡ್ಯ. ಮಾನಮರಿಯಾದಿಯ ಬದುಕ್ತಯಿರೋರು ನಮ್ಮಂಥೋರೆಯ. ಅವು ನಮ್ಮಂಗಾದ್ರೆ ಅಧಿಕಾರದಲ್ಲಿ ಇರಕ್ಯಾದತೇ."

"ಎಜ್ಯಾಕ್ಟ್ಲಿ ಕರಟ್ ದೊಡಪ್ಪ."



ಉದ್ಭವದಿಂದ, ಮಾರ್ಚ್ 22ವರೆಗೆ ಬಹುಸಂಖ್ಯಾತ ವಿಚಾರಧಾರೆಯ ಪರಿ

ಅನಂತನಾಗ್, ಜೈಜಗದೀಶ್, ವಿನಯಾ ಪ್ರಸಾದ್, ಶರತ್ ಲೋಹಿತಾಶ್ವ ಮತ್ತು ಆಶೀಶ್ ವಿದ್ಯಾರ್ಥಿಗಳಂತಹ ನಟ ದಿಗ್ಗಜರ ಉತ್ತಮ ನಟನೆಯ ನಡುವೆಯೂ ಕಳೆದ ವಾರ ತೆರೆಕಂಡ 'ಮಾರ್ಚ್-22' (ನಿರ್ದೇಶನ: ಕೂಡ್ಲು ರಾಮಕೃಷ್ಣ) ಎಂಬ ಕನ್ನಡ ಚಲನಚಿತ್ರ ಯಾಕೆ ನಮ್ಮನ್ನು ಸೆಳೆಯಲು ವಿಫಲಗೊಂಡಿದೆ? ಸಾಮರಸ್ಯ ಮತ್ತು ಭಾವೈಕ್ಯವನ್ನು ಸಾರುವ ಈ ಚಿತ್ರ ಹೆಚ್ಚು ಪ್ರೇಕ್ಷಕರನ್ನು ಸೆಳೆಯಲು ಸೋತಿರುವುದು ಏಕೆ? ಕಾರಣಗಳು ಅನೇಕ. ಆದರೆ ನನಗೆ ಈ ಚಿತ್ರದಲ್ಲಿ ಕಾಣುವ ಪ್ರಮುಖ ಅಂಶ ಒಂದು. ಇದೇ ಕಾರಣಕ್ಕಾಗಿ ಈ ಚಿತ್ರ ಪ್ರೇಕ್ಷಕರ ಮನಸ್ಸನ್ನು ಹಿಡಿದಿಡುವಲ್ಲಿ ಸೋತಿರುವುದು ಎಂದು ನಾನು ಭಾವಿಸುತ್ತೇನೆ. ಅದು 'ಬಹುಸಂಖ್ಯಾತ' ಮೂಲದಿಂದ ಉದ್ಭವಗೊಂಡ ವಿಚಾರಧಾರೆಗೆ ಸಂಬಂಧಿಸಿದ್ದು. ಈ ವಿಚಾರಧಾರೆ ಚಿತ್ರದಲ್ಲಿ ಸಾಮರಸ್ಯ ಮತ್ತು ಭಾವೈಕ್ಯವನ್ನು ನಿರ್ಧರಿಸುವ ಪ್ರಾಬಲ್ಯವನ್ನು ಪ್ರದರ್ಶಿಸುತ್ತದೆ. ಇದು ಈ ಚಿತ್ರವನ್ನು ದುರ್ಬಲವನ್ನಾಗಿಸಿರುವ ಅಂಶವೂ ಕೂಡ ಹೌದು. ಈ ವಿಚಾರಧಾರೆ ಬಲಪಂಥೀಯ ರಾಜಕೀಯವನ್ನು ಸಮರ್ಥಿಸಿಕೊಳ್ಳುತ್ತದೆಯೇ ಹೊರತು, ಚಿತ್ರದ ಕಥೆಯನ್ನು ಬಲಗೊಳಿಸುವುದಿಲ್ಲ. ಸುವರ್ಣ ನ್ಯೂಸ್‌ನಿಂದ ಶುರುವಾಗುವ ಈ ಚಿತ್ರ, ಕೇಂದ್ರ ಸರ್ಕಾರದ ಸ್ಮಾರ್ಟ್ ಸಿಟಿ ಯೋಜನೆಯನ್ನು (ಪೂರ್ವ ಸರ್ಕಾರದ ನರ್ಮ್ ಯೋಜನೆಯ ರೀತಿ) ಪ್ರಶಂಸಿಸುತ್ತಾ, ಮುಖ್ಯಮಂತ್ರಿ ಕಚೇರಿಯಲ್ಲಿ ಸರ್ದಾರ್ ವಲ್ಲಭಭಾಯಿ ಪಟೇಲರ ಫೋಟೋವನ್ನು (ಅಂಬೇಡ್ಕರ್ ಮತ್ತು ಗಾಂಧೀಜಿಯ ಫೋಟೊಗಳ ಪಕ್ಕದಲ್ಲಿ) ರಾರಾಜಿಸುತ್ತಾ ಸಾಗುತ್ತದೆ. ಇಲ್ಲಿಯೇ ಈ ಚಿತ್ರದ ತಾತ್ವಿಕ ಮತ್ತು ರಾಜಕೀಯ ನಿಲುವುಗಳ ಬಗ್ಗೆ ನಮ್ಮಲ್ಲಿ ಅನೇಕ ಗುಮಾನಿಗಳು ಹುಟ್ಟಿಕೊಳ್ಳುವುದು.


'ಮಾರ್ಚ್ 22' ಕಥೆ


'ಮಾರ್ಚ್ 22' (ವಿಶ್ವ ಜಲ ದಿನಾಚರಣೆಯ ದಿನವೂ ಕೂಡ) ಚಿತ್ರದ ಕಥೆ ಉತ್ತರ ಕರ್ನಾಟಕದ ಚಚಡಿ ಗ್ರಾಮದವರ ಸುತ್ತ ತಿರುಗುತ್ತದೆ. ಗ್ರಾಮದಲ್ಲಿ ಹಿಂದೂಗಳು ಮತ್ತು ಮುಸ್ಲಿಂರು ಭಾವೈಕ್ಯದಿಂದ ಇರುತ್ತಾರೆ. ಯಾವುದೇ ಜಗಳ ಅಥವಾ ಭಿನ್ನಾಭಿಪ್ರಾಯಗಳಿರದ ಆದರ್ಶ ಗ್ರಾಮ ಅದು. ಆದರೆ ಈ ಸೌಹಾರ್ದತೆಯನ್ನು ನಾಶಪಡಿಸಲು ಆ ಗ್ರಾಮಕ್ಕೆ ಬರಗಾಲ ಸಿಡಿಲಿನಂತೆ ಬಡಿಯುತ್ತದೆ. ಕುಡಿಯಲು ನೀರಿಲ್ಲದೆ ಗ್ರಾಮದ ಜನ ಬಳಲುತ್ತಾರೆ. ನೀರಿನ ಸಮಸ್ಯೆಯನ್ನು ಬಗೆಹರಿಸಲು ಗ್ರಾಮದ ಜನ ರಾಜಸ್ತಾನದಿಂದ ಡಾ. ರಘುನಂದನ್ (ಚಿತ್ರದಲ್ಲಿ ಅನಂತ ನಾಗ್) ಎಂಬ ಜಲತಜ್ಞನನ್ನು ಕರೆಸುತ್ತಾರೆ. ಆತ ಗ್ರಾಮಕ್ಕೆ ಬಂದು ಎಲ್ಲಾ ಸ್ಥಳಗಳನ್ನು ಪರೀಕ್ಷಿಸುತ್ತಾನೆ. ಎಲ್ಲೂ ನೀರಿನ ನಿಕ್ಷೇಪ ಇಲ್ಲದಿರುವುದು ಆತನಿಗೆ ನಿರಾಶೆಯುಂಟು ಮಾಡುತ್ತದೆ. ಆದರೆ ಆಕಸ್ಮಿಕವಾಗಿ ಆತನಿಗೆ ಗ್ರಾಮದ ಮಸೀದಿಯ ಅಡಿಯಲ್ಲಿ ನೀರಿನ ಸಮೃದ್ಧಿ ಇರುವುದು ತಿಳಿಯುತ್ತದೆ. ಗ್ರಾಮಕ್ಕೆ ನೀರು ಬೇಕೆಂದರೆ ಮಸೀದಿಯನ್ನು ಸ್ಥಳಾಂತರಿಸುವ ಅನಿವಾರ್ಯತೆ ಉದ್ಭವಿಸುತ್ತದೆ. ಮಸೀದಿಯನ್ನು ಸ್ಥಳಾಂತರಿಸಲು ಒಪ್ಪದ ಆ ಮಸೀದಿಯ ಮೌಲ್ವಿ ಹಿಂದೂಗಳ ಕೋಪಕ್ಕೆ ಈಡಾಗುತ್ತಾನೆ. ಗ್ರಾಮದ ಭಾವೈಕ್ಯ ಮತ್ತು ಕೋಮು ಸೌಹಾರ್ದತೆ ಕದಡುತ್ತದೆ. ಹಿಂದೂ ಮತ್ತು ಮುಸ್ಲಿಂರ ನಡುವೆ ಕೋಮು ಗಲಭೆಗಳು ಉಂಟಾಗುತ್ತವೆ. ಹಠ ಬಿಡದ ಮೌಲ್ವಿಯನ್ನು ಸರಿದಾರಿಗೆ ತರಲು ಹಿಂದೂಗಳು ತಮ್ಮ ನೆಚ್ಚಿನ ಗುಡಿಯನ್ನು ಕೆಡವಲು ಸಿದ್ಧರಾಗುತ್ತಾರೆ. ಧರ್ಮಕ್ಕಿಂತ ಜೀವನ ಮೇಲು ಎಂದು ಹಿಂದೂಗಳ ನಾಯಕ ಘೋಷಿಸುತ್ತಾ ಗುಡಿಯನ್ನು ಕೆಡವುವ ಸಂದರ್ಭದಲ್ಲಿ ಮೌಲ್ವಿಗೆ ತಪ್ಪಿನ ಅರಿವಾಗುತ್ತದೆ. ಮನಃಪರಿವರ್ತನೆಗೊಂಡು, ಗ್ರಾಮದ ಮಸೀದಿಯನ್ನು ಸ್ಥಳಾಂತರಿಸಲು ಒಪ್ಪಿಕೊಳ್ಳುತ್ತಾನೆ. ಗ್ರಾಮಕ್ಕೆ ನೀರು ದೊರೆಯುತ್ತದೆ. ಚಿತ್ರದ ಕೊನೆಯಲ್ಲಿ ಹಿಂದೂ-ಮುಸ್ಲಿಂರ ಸೌಹಾರ್ದತೆ ಮತ್ತೆ ಚಿಗುರೊಡೆಯುತ್ತದೆ.

ಬಹುಸಂಖ್ಯಾತ ವಿಚಾರಧಾರೆ

ಚಿತ್ರದುದ್ದಕ್ಕೂ ಬಹುಸಂಖ್ಯಾತ ಹಿಂದೂಗಳ ವಿಚಾರಗಳು ಮತ್ತು ನಂಬಿಕೆಯನ್ನು ಶ್ರೇಷ್ಠಗೊಳಿಸಲಾಗಿದೆ. ಅಷ್ಟೇ ಪ್ರಮಾಣದಲ್ಲಿ ಮುಸ್ಲಿಂರನ್ನು ಕನಿಷ್ಠರನ್ನಾಗಿ ಚಿತ್ರಿಸಲಾಗಿದೆ. ಉದಾಹರಣೆಗೆ,

1) ಮುಸ್ಲಿಂ, ದೇಸಿ ಜಲತಜ್ಞನ ಪಾತ್ರ. ಹಿಂದೂ ಸಮಾಜಕ್ಕೆ ಸೇರಿದ ಜಲತಜ್ಞನ ಶೋಧನೆಯನ್ನು ಒಪ್ಪಿಕೊಳ್ಳದ ಮಸೀದಿಯ ಮೌಲ್ವಿ (ಆಶೀಶ್ ವಿದ್ಯಾರ್ಥಿ) ದೇಸಿ, ಮುಸ್ಲಿಂ ಜಲತಜ್ಞ(ಚಿತ್ರದಲ್ಲಿ ಸಾಧು ಕೋಕಿಲ)ನನ್ನು ಕರೆಸಿಕೊಂಡು ಹಿಂದೂಗಳ ಗುಡಿಯಡಿಯಲ್ಲಿ ನೀರಿರಬಹುದು ಎಂದು ಕಂಡುಹಿಡಿಯಲು ಕರೆಸುತ್ತಾನೆ. ಗುಡಿಯ ಅಡಿಯಲ್ಲಿ ನೀರಿನ ನಿಕ್ಷೇಪ ಸಿಗುವುದಿಲ್ಲ, ಗುಡಿಯ ಕೆಳಗೆ ನೀರನ್ನು ಹುಡುಕಿ ಕೊಡುತ್ತೇನೆಂದು ಜಂಭ ಕೊಚ್ಚಿಕೊಂಡಿದ್ದ ಮುಸ್ಲಿಂ ಜಲತಜ್ಞನಿಗೆ ತಪ್ಪಿನ ಅರಿವಾಗುತ್ತದೆ. ಚಿತ್ರದಲ್ಲಿ ಇದನ್ನು ಆತನ ಅಜ್ಞಾನವೆಂದು ಬಿಂಬಿಸುವುದರ ಜೊತೆಗೆ ರಾಜಸ್ತಾನದಿಂದ ಬಂದಿರುವ ಜಲತಜ್ಞನ ಪರಿಣಿತಿಯನ್ನು ಶ್ಲಾಘಿಸಲಾಗಿದೆ. ಇಷ್ಟೇ ಅಲ್ಲ, ಮುಸ್ಲಿಂ ಜಲತಜ್ಞ ಒಬ್ಬ ಅನೈತಿಕ ಗುಣಗಳುಳ್ಳ ಮನುಷ್ಯ. ತನ್ನ ವಸತಿಯನ್ನು ಸರಿಯಾದ ಜಾಗದಲ್ಲಿ ವ್ಯವಸ್ಥೆ ಮಾಡಿಲ್ಲವೆಂದು, ಸಿಟ್ಟಿನಿಂದ ಗ್ರಾಮದಿಂದ ಹೊರಟುಹೋಗಲು ನಿರ್ಧರಿಸಿದಾಗ ಅವನನ್ನು ಒಬ್ಬ ಮುಸ್ಲಿಂ ಮಹಿಳೆ ಸೆಳೆಯುತ್ತಾಳೆ. ಆ ಮಹಿಳೆಗೆ ಸೋಲುವ ಇವನು ನೀರನ್ನು ಹುಡುಕುವ ಮೊದಲೆ ತನ್ನ ದೌರ್ಬಲ್ಯವನ್ನು ಪ್ರದರ್ಶಿಸುತ್ತಾನೆ. ಒಬ್ಬ ಮಹಿಳೆಗೆ ಆಸೆ ಪಡುವ ವ್ಯಕ್ತಿಯನ್ನಾಗಿ ಈ ಮುಸ್ಲಿಂ ಪಾತ್ರವನ್ನು ತೋರಿಸಲಾಗಿದೆ. ಇದಕ್ಕೆ ವ್ಯತಿರಿಕ್ತವಾಗಿ ಹಿಂದೂ ಜಲತಜ್ಞ ಒಬ್ಬ ವೈಚಾರಿಕತೆಯುಳ್ಳ, ವೈಜ್ಞಾನಿಕ ಮತ್ತು ತೂಕಬದ್ಧ ವ್ಯಕ್ತಿಯೆಂಬಂತೆ ಬಿಂಬಿಸಲಾಗಿದೆ.





2) ಚಿತ್ರದುದ್ದಕ್ಕೂ ಗ್ರಾಮದ ಹಿಂದೂಗಳು ಉದಾರವಾದಿಗಳು, ಸೌಮ್ಯ ಸ್ವಭಾವದವರು ಮತ್ತು ಅವಶ್ಯಕತೆ ಬಿದ್ದಾಗ ಜೀವವನ್ನು ತ್ಯಾಗ ಮಾಡುವ ನಿಸ್ವಾರ್ಥಿಗಳು. ಇದಕ್ಕೆ ತದ್ವಿರುದ್ಧವಾಗಿ ಮುಸ್ಲಿಂರು ಮತಾಂಧರು ಮತ್ತು ಜೀವನಕ್ಕಿಂತ ಧರ್ಮವನ್ನು ಪ್ರೀತಿಸುವ ತೀವ್ರವಾದಿಗಳು. ಅಂತಿಮವಾಗಿ ಈ ಮುಸ್ಲಿಂರಿಗೆ ಬುದ್ಧಿ ಹೇಳುವುದು ಹಿಂದೂಗಳೆ! ಮುಸ್ಲಿಂರ ಮನಃಪರಿವರ್ತನೆಯನ್ನು ಹಿಂದೂಗಳ "ಉದಾರನೀತಿ"ಯಿಂದ ಸಾಧಿಸಲು ಸಾಧ್ಯವೆಂದು ಚಿತ್ರ ಸಾರುತ್ತದೆ. ಅಂದರೆ "ಧರ್ಮಕ್ಕಿಂತ ಜೀವನ ಮುಖ್ಯ" ಎಂಬ ಪಾಠವನ್ನು ಹಿಂದೂಗಳು ಮುಸ್ಲಿಂರಿಗೆ ಕಲಿಸುವುದರ ಮೂಲಕ ಅವರ ಕಣ್ಣುಗಳನ್ನು ತೆರೆಯುತ್ತಾರೆ. ಮುಸ್ಲಿಂರ ತೀವ್ರವಾದಕ್ಕೆ ಹಿಂದೂಗಳ ಉದಾರತೆಯೇ ಮದ್ದು ಎಂದು ಚಿತ್ರ ಸಾರುತ್ತದೆ. ಅಂದರೆ ಹಿಂದೂಗಳು ಉದಾರವಾಗಿರುವುದರಿಂದಲೇ ಮುಸ್ಲಿಂರು ಗ್ರಾಮದಲ್ಲಿ ಯಾವ ಸಮಸ್ಯೆಗಳಿಲ್ಲದೆ ಜೀವನ ಸಾಗಿಸುತ್ತಿದ್ದಾರೆಂಬ ಅಂಶ ಪ್ರೇಕ್ಷಕರ ಮನಸ್ಸಿನಲ್ಲಿ ಉಂಟಾಗುತ್ತದೆ. ಚಿತ್ರದಲ್ಲಿ ಅಜೆಂಡಾವನ್ನು ನಿರ್ಧರಿಸುವುದು ಹಿಂದೂಗಳಾದರೆ (ಹಿಂದೂ ಜಲತಜ್ಞನ ರೂಪದಲ್ಲಿ), ಮುಸ್ಲಿಂರು ಅದನ್ನು ವಿರೋಧಿಸುವ ಮತ್ತು ಡಿಫೆನ್ಸಿವ್ ತಂತ್ರವನ್ನು ಹೂಡುವ ಸಮಾಜ-ವಿಮುಖಿಗಳಾಗಿ ಕಾಣುತ್ತಾರೆ. ಅವರನ್ನು ಕಾಳಜಿ-ಹೀನ ಮತ್ತು ಮತಾಂಧ ಮನುಷ್ಯರನ್ನಾಗಿ ಚಿತ್ರ ಪ್ರದರ್ಶಿಸುತ್ತದೆ.

3) ಚಿತ್ರದ 'ಮುಖ್ಯಮಂತ್ರಿ ಸಭೆ'ಯ ದೃಶ್ಯದಲ್ಲಿ ಒಂದು ಗಮನೀಯ ಅಂಶ ನಮ್ಮನ್ನು ಸೆಳೆಯುತ್ತದೆ. ಮುಖ್ಯಮಂತ್ರಿಯ ಹಿಂಭಾಗದ ಗೋಡೆಯ ಮೇಲೆ ಮೂರು ಫೋಟೋಗಳನ್ನು ನೇತು ಹಾಕಿರುವ ದೃಶ್ಯ ಕಾಣುತ್ತದೆ. ಸಾಮಾನ್ಯವಾಗಿ ನಾವು ಇದುವರೆಗೂ ಸರ್ಕಾರಿ ಕಚೇರಿಗಳಲ್ಲಿ ಅಂಬೇಡ್ಕರ್, ಗಾಂಧಿ ಮತ್ತು ಇಂದಿರಾ ಗಾಂಧಿ/ನೆಹರು ಫೋಟೊಗಳನ್ನು ನೋಡಿರುತ್ತೇವೆ. ಆದರೆ ಈ ಚಿತ್ರದಲ್ಲಿ ಅಂಬೇಡ್ಕರ್, ಗಾಂಧಿಯ ಫೋಟೊಗಳ ಜೊತೆಗೆ ವಲ್ಲಭಭಾಯಿ ಪಟೇಲರ ಫೋಟೊವನ್ನು ಪ್ರಮುಖವಾಗಿ ತೋರಿಸಲಾಗಿದೆ. ಅಂದರೆ ನೆಹರು/ಇಂದಿರಾ ಗಾಂಧಿ ಯುಗ ಹೋಗಿ, ಪಟೇಲರ ಯುಗ ಶುರುವಾಗಿದೆ ಎಂದು ಚಿತ್ರವು ಸಾರುತ್ತದೆಯೇ? ಅಥವಾ ಇತ್ತೀಚಿನ ರಾಜಕೀಯ ಬದಲಾವಣೆಯನ್ನು ಸಾಂಕೇತಿಕವಾಗಿ ಅದು ಸೂಚಿಸುತ್ತಿದೆಯೇ? ಪಟೇಲರ ಯುಗ ಎಂದರೆ ಯಾವುದು? ಅದನ್ನು ಯಾರು ಪ್ರತಿನಿಧಿಸುತ್ತಿದ್ದಾರೆ? ಇಂತಹ ಅನೇಕ ಪ್ರಶ್ನೆಗಳು ನಮ್ಮ ಮನಸ್ಸಿನಲ್ಲಿ ಉದ್ಭವಿಸುತ್ತವೆ.

4) ಚಿತ್ರವನ್ನು ವೀಕ್ಷಿಸುತ್ತಿರುವವರಿಗೆ ಅಯೋಧ್ಯೆಯ ರಾಮ-ಮಂದಿರದ ವಿವಾದ ಮನಸ್ಸಿಗೆ ಬಾರದೆ ಇರದು. ಬಾಬ್ರಿ ಮಸೀದಿ ಜಾಗದಲ್ಲಿ ರಾಮ-ಮಂದಿರದ ಸ್ಥಾಪನೆಗೆ ಮುಸ್ಲಿಂರೆ ಮುಂದಾಗಬೇಕೆಂದು, ಅದಕ್ಕಾಗಿ ಅವರು ತಮ್ಮ ಮಸೀದಿಯನ್ನು ಸ್ಥಳಾಂತರಗೊಳಿಸಿ, ಬೇರೆಡೆ ಸ್ಥಾಪಿಸಿದ್ದಲ್ಲಿ ಹಿಂದೂ-ಮುಸ್ಲಿಂ ಭಾವೈಕ್ಯಕ್ಕೆ ನಾಂದಿ ಹಾಡಿದಂತೆ ಎಂದು ಪ್ರತಿಪಾದಿಸುವ ವಿದ್ವಾಂಸರು ಇದ್ದಾರೆ. ಪ್ರಸ್ತುತ ಚಿತ್ರ ಈ ಸಾಮಾಜಿಕ-ಧಾರ್ಮಿಕ ಅಂಶವನ್ನು ಪದೇ, ಪದೇ ಜ್ಞಾಪಿಸುತ್ತದೆ. ಬರಗಾಲಕ್ಕೆ ಸೂಕ್ತ ಪರಿಹಾರವೇನೆಂದರೆ ಮಸೀದಿಯನ್ನು ಸ್ಥಳಾಂತರಗೊಳಿಸುವುದು. ಇದಕ್ಕಾಗಿ ಚಿತ್ರದ ಅನೇಕ ದೃಶ್ಯಗಳು ಪೂರಕವಾಗಿ ಕೆಲಸ ಮಾಡಿವೆ. ಈ ದಿಸೆಯಲ್ಲಿ ಮುಸ್ಲಿಂರ ಮೇಲೆ ಬಹುಸಂಖ್ಯಾತ ವಿಚಾರಧಾರೆಯನ್ನು ಹೇರಲು ಅನೇಕ ಬಗೆಯ 'ಒತ್ತಡ'ಗಳನ್ನು ಚಿತ್ರದಲ್ಲಿ ತೋರಿಸಲಾಗಿದೆ. ಹಿಂದೂಗಳು, ಮೌಲ್ವಿಯ ಮಗ, ಮಗಳು, ಹೆಂಡತಿ, ಎಲ್ಲರೂ ಆತನ ಮೇಲೆ ಒತ್ತಡ ಹೇರುತ್ತಾರೆ. ಎಲ್ಲವೂ ವಿಫಲವಾದಾಗ ಹಿಂದೂಗಳು ತಮ್ಮ ಗುಡಿಯನ್ನು ಒಡೆದು ಮುಸ್ಲಿಂರಿಗೆ ಮಾದರಿಯಾಗುವ 'ಉದಾರತನ'ವನ್ನು ಪ್ರದರ್ಶಿಸುವ ಪ್ರಯತ್ನ ಮಾಡುತ್ತಾರೆ. ಆದರೆ ಹಿಂದೂಗಳ 'ಉದಾರತನ'ಕ್ಕೆ ಸೋತು ಹೋದ ಮೌಲ್ವಿ ಅವರ 'ನಿಃಸ್ವಾರ್ಥ' ಭಾವನೆಯನ್ನು ಒಪ್ಪಿಕೊಂಡು ಮಸೀದಿಯನ್ನು ಸ್ಥಳಾಂತರಿಸುವುದಕ್ಕೆ ಸಮ್ಮತಿಸುತ್ತಾನೆ. ಚಿತ್ರದಲ್ಲಿ ಇದನ್ನು ನೇರವಾಗಿ ಹೇಳಿಲ್ಲ; ಜೊತೆಗೆ ಮಸೀದಿಯನ್ನು ಸ್ಥಳಾಂತರಿಸುವ ದೃಶ್ಯವೂ ಇಲ್ಲ. ಭೂಮಿಯ ಒಡಲಿನಿಂದ ಚಿಮ್ಮುವ ನೀರು ಮಸೀದಿಯ ಸ್ಥಳಾಂತರದ ಅಂಶವನ್ನು ಪರೋಕ್ಷವಾಗಿ ಸೂಚಿಸುತ್ತದೆ.

5) ಚಿತ್ರದಲ್ಲಿ ಹಿಂದೂಗಳೆಂದರೆ ಗ್ರಾಮದ ಲಿಂಗಾಯತರು (ಬಹುತೇಕ). ಚಿತ್ರದ ಬಹುತೇಕ ಪ್ರಮುಖ ಪಾತ್ರಗಳು ಲಿಂಗಾಯತ ಸಮುದಾಯಕ್ಕೆ ಸೇರಿದವರೆಂದು ಅನೇಕ ಸಾಂಕೇತಿಕ ಹಾಗು ಧಾರ್ಮಿಕ ಅಂಶಗಳು ತೋರಿಸುತ್ತವೆ. ಪ್ರಸ್ತುತ ಸಂದರ್ಭದಲ್ಲಿ ಲಿಂಗಾಯತರನ್ನು ಹಿಂದೂಗಳಾಗಿ ಚಿತ್ರಿಸುವ ದೃಶ್ಯಗಳನ್ನು ಉತ್ತರ ಕರ್ನಾಟಕದ ಲಿಂಗಾಯತರು ಎಷ್ಟರಮಟ್ಟಿಗೆ ಒಪ್ಪಿಕೊಳ್ಳುತ್ತಾರೆಂಬುದು ಕುತೂಹಲದ ಪ್ರಶ್ನೆ.

ಉದ್ಭವದಿಂದ ಮಾರ್ಚ್ 22 ರತ್ತ

'ಮಾರ್ಚ್ 22' ಚಿತ್ರವನ್ನು ನಿರ್ದೇಶಿಸಿದ ಕೂಡ್ಲು ರಾಮಕೃಷ್ಣರವರ ಮತ್ತೊಂದು ಚಿತ್ರ 'ಉದ್ಭವ' (1990). ಈ ಚಿತ್ರ ಕೂಡ್ಲುರವರ ಸಿನಿಪ್ರಯಾಣದಲ್ಲಿ ಒಂದು ಅವಿಸ್ಮರಣೀಯ ಚಿತ್ರ. ನನ್ನಂತ ಅನೇಕರಿಗೆ ಈಗಲೂ ಈ ಚಿತ್ರ ಫೇವರಿಟ್. ಅರ್ಥಪೂರ್ಣವಾದ, ವೈಚಾರಿಕವಾದ ಮತ್ತು ವಿಚಾರ-ಪ್ರಚೋದಕವಾದ ಈ ಚಿತ್ರ ಅನೇಕರ ಗಮನ ಸೆಳೆದು, ಪ್ರಶಂಸೆಗೆ ಒಳಪಟ್ಟಿತು. ಅಂದಿನ ರಾಜ್ಯ ಸರ್ಕಾರ ಈ ಚಿತ್ರಕ್ಕೆ ಪ್ರಶಸ್ತಿಯನ್ನು ನೀಡಿ, ಗೌರವಿಸಿತು. ಈ ಚಿತ್ರದಲ್ಲಿ ತೋರಿಸಲ್ಪಟ್ಟ ಸಿನಿ-ಮಾಂತ್ರಿಕತೆ 'ಮಾರ್ಚ್ 22'ರಲ್ಲಿ ಇಲ್ಲ, 'ಉದ್ಭವ'ದ ಮುಂದೆ ಎಳ್ಳಷ್ಟು ನಿಲ್ಲದ ಈ ಚಿತ್ರ ಪ್ರೇಕ್ಷಕರ ಮನಸ್ಸಿನಲ್ಲಿ ಅನೇಕ ಅನುಮಾನಗಳನ್ನು ಉದ್ಭವಿಸುವುದೇ ಈ ಚಿತ್ರದ ಹೆಗ್ಗಳಿಕೆ. ಈ ಎರಡು ಚಿತ್ರಗಳನ್ನೂ ಒಮ್ಮೆ ಹೋಲಿಸಿ ನೋಡಿದರೆ ಅನೇಕ ಅಂಶಗಳು ನಮ್ಮ ಗೋಚರಕ್ಕೆ ಬರುತ್ತವೆ.

'ಉದ್ಭವ'ದಲ್ಲಿ ಒಂದು ಜ್ವಲಂತ ಸಮಸ್ಯೆಯನ್ನು ಎತ್ತಿಕೊಂಡು ಚಿತ್ರಕಥೆಯನ್ನು ಹೆಣೆಯಲಾಗಿದೆ (ಬಿ.ವಿ.ವೈಕುಂಠರಾಜುರವರ ಕಥೆ). ಸಮಾಜದಲ್ಲಿ ಕೆಲವು ಚಾಣಾಕ್ಷ ವ್ಯಕ್ತಿಗಳು ಹೇಗೆ ಜನರ ಧಾರ್ಮಿಕ ಭಾವನೆಗಳನ್ನು ಬಳಸಿಕೊಂಡು ತಮ್ಮ ಸ್ವಾರ್ಥವನ್ನು ಈಡೇರಿಸಿಕೊಳ್ಳುತ್ತಾರೆಂದು ಬಹಳ ಮಾರ್ಮಿಕವಾಗಿ ಚಿತ್ರಿಸಲಾಗಿದೆ. ಸಿವಿಲ್ ಸೊಸೈಟಿಯ ಚಾಣಾಕ್ಷ ವ್ಯಕ್ತಿಗಳ (ನಾಗರಿಕ ಸಮಾಜದ ಪ್ರಜೆಗಳು) ಮೇಲೆ ಇಲ್ಲಿ ಗಮನ ಹರಿಸಲಾಗಿದೆ. ಜೊತೆಗೆ ರಾಜಕೀಯ ವ್ಯಕ್ತಿಗಳ ಗೋಸುಂಬೆತನವನ್ನು ಸಹ ಬಯಲುಗೊಳಿಸಲಾಗಿದೆ. ಆದರೆ ರಾಜಕಾರಣಿ ಈ ಚಿತ್ರದಲ್ಲಿ ಗೌಣ. ಚಿತ್ರದ ಕೊನೆಯಲ್ಲಿ ಹೇಳುವ ಹಾಗೆ ಧಾರ್ಮಿಕ ಭಾವನೆಗಳನ್ನು ಬಳಸಿಕೊಳ್ಳುವ ವ್ಯಕ್ತಿ ಕೇವಲ ರಾಜಕಾರಣಿ ಮಾತ್ರವಲ್ಲ; ನಾಗರಿಕ ಸಮಾಜದ ಪ್ರಜೆಯೂ ಕೂಡ ಸಮಾಜದ ಸಮಸ್ಯೆಗಳಿಗೆ ಕಾರಣೀಭೂತ. ರಾಜಕಾರಣಿಗಳ ಮೇಲೆ ಹದ್ದಿನ ಕಣ್ಣು ಇಡಬೇಕಾದ ಒಬ್ಬ ಸತ್ಪ್ರಜೆ ಅವನನ್ನು ಬಳಸಿಕೊಂಡು ಹೇಗೆ ತನ್ನ ಬೇಳೆಯನ್ನು ಬೇಯಿಸಿಕೊಳ್ಳುತ್ತಾನೆ ಎಂದು ಈ ಚಿತ್ರದಲ್ಲಿ ಮನದಟ್ಟಾಗುವಂತೆ ಚಿತ್ರಿಸಲಾಗಿದೆ. ಸಮಾಜದ ಕೆಡುಕಿಗೆ ರಾಜಕಾರಣಿಗಳ ಜೊತೆಗೆ ಸ್ವಾರ್ಥ ನಾಗರಿಕರು ಕೂಡ ಹೊಣೆಗಾರರು ಎಂದು ಈ ಚಿತ್ರದಲ್ಲಿ ತೋರಿಸಲಾಗಿದೆ. ಅಂದರೆ ಈ ಚಿತ್ರದಲ್ಲಿ ಒಬ್ಬ ನಾಗರಿಕನ ಮೇಲೆ ಹೆಚ್ಚು ಗಮನ ಹರಿಸಲಾಗಿದೆ. ಆದರೆ ಈ ಅಂಶ 'ಮಾರ್ಚ್ 22'ರಲ್ಲಿ ಕಣ್ಮರೆಯಾಗುತ್ತದೆ. ಇಲ್ಲಿ ಖಳನಾಯಕನಾಗಿ ಕಾಣುವುದು ಒಬ್ಬ ರಾಜಕಾರಣಿ (ಚಿತ್ರದಲ್ಲಿ ಶರತ್ ಲೋಹಿತಾಶ್ವ). ಸಮಾಜದ ಜ್ವಲಂತ ಸಮಸ್ಯೆಗಳಾಚೆ ಹೋಗಿ, ನೆಲೆಸಿರುವ ರಾಜಸ್ತಾನದ ಜಲತಜ್ಞನ (ಈತ ಸರಸ್ವತಿ ನದಿ ಪ್ರೊಜೆಕ್ಟ್‌ನ ಅಧಿಕಾರಿಯೂ ಕೂಡ ಹೌದು) ಸೂಚನೆಯನ್ನು ತನ್ನ ಸ್ವಾರ್ಥಕ್ಕಾಗಿ ಬಳಸಿಕೊಳ್ಳುವುದು ರಾಜಕಾರಣಿಯೆ ಹೊರತು ಬೇರೆ ಯಾರು ಅಲ್ಲ. ಗ್ರಾಮದ ಜನರನ್ನು ನಾವು ನಾಗರಿಕರೆಂದು ತಿಳಿದರೂ, ಅವರು ಧರ್ಮಕ್ಕಾಗಿ/ನೀರಿಗಾಗಿ ಬಡಿದಾಡುವ ಪ್ರಜೆಗಳಾಗಿ ಕಾಣುತ್ತಾರೆಯೇ ಹೊರತು ಗ್ರಾಮದ ರಾಜಕಾರಣಿಯ ಹಾಗೆ ಸ್ವಾರ್ಥಿಗಳಾಗಿ ಗೋಚರಿಸುವುದಿಲ್ಲ. ಸಮಸ್ಯೆಯನ್ನು ತನ್ನ ಸ್ವಾರ್ಥಕ್ಕಾಗಿ ಬಳಸಿಕೊಳ್ಳುವ ರಾಜಕಾರಣಿಯ ಮೇಲೆ ಗೂಬೆ ಕೂರಿಸುವ ಈ ಚಿತ್ರ, ಗ್ರಾಮದವರು ಆ ಸ್ವಾರ್ಥಕ್ಕೆ ಬಲಿಯಾಗುವ ಪ್ರಾಣಿಗಳಾಗಿ ಚಿತ್ರೀಕರಿಸಲ್ಪಟ್ಟಿದ್ದಾರೆ. ಕೊನೆಗೆ ರಾಜಕಾರಣಿ ತನ್ನ ತಪ್ಪೊಪ್ಪಿಗೆಯನ್ನು ನೀಡುವುದರ ಮೂಲಕ ಸಮಸ್ಯೆಯ ಪರಿಹಾರಕ್ಕೆ ಕಾರಣಕರ್ತನಾಗುತ್ತಾನೆ. ಸಾಮಾನ್ಯ ಪ್ರೇಕ್ಷಕರಿಗೆ ಇದರಿಂದ ತಿಳಿಯುವದೇನೆಂದರೆ ಸಮಾಜದ ಸಮಸ್ಯೆಗಳಿಗೆ ಮೂಲಭೂತ ಕಾರಣ ರಾಜಕಾರಣಿ; ಅವನನ್ನು ಸರಿಪಡಿಸಿದರೆ ಸಮಾಜ ಪ್ರಗತಿಯನ್ನು ಸಾಧಿಸುತ್ತದೆ ಎಂಬ ಬಾಲಿಶವಾದ ಸಿದ್ಧಾಂತ. ಈ ಸಿದ್ಧಾಂತವನ್ನು 'ಮಾರ್ಚ್ 22' ಬಳಸಿಕೊಳ್ಳುತ್ತದೆ. ಪ್ರಸ್ತುತ ಭಾರತದಲ್ಲಿ ರಾಜಕೀಯೇತರ ವ್ಯಕ್ತಿಗಳು, ಸಂಸ್ಥೆಗಳು ಮತ್ತು ಸಿದ್ಧಾಂತಗಳು ಸಮಾಜದ ಸಮಸ್ಯೆಗಳಿಗೆ ಕೊಡುಗೆಯನ್ನು ನೀಡುತ್ತಿವೆಯೆಂಬ ಅಂಶವನ್ನು ಇದು ಗಮನಿಸುವುದೇ ಇಲ್ಲ. ಕ್ಲೀಷೆಗೊಳಗಾಗಿರುವ ರಾಜಕೀಯ/ರಾಜಕಾರಿಣಿಯ ದೃಶ್ಯವನ್ನು ಮತ್ತೆ ಚಿತ್ರಿಸುವುದರ ಮೂಲಕ ಯಥಾಸ್ಥಿತಿಯನ್ನು ಈ ಚಿತ್ರ ಪ್ರತಿಪಾದಿಸುತ್ತದೆ (ಬಹುಸಂಖ್ಯಾತ- ಕೇಂದ್ರಿತ ಸಾಂಸ್ಕೃತಿಕ ಮತ್ತು ಧಾರ್ಮಿಕ ಯಥಾಸ್ಥಿತಿಗಳು).

ಸಮಕಾಲೀನ ಕೇಂದ್ರ ಸರ್ಕಾರದ ಯೋಜನೆಗಳನ್ನು (ಸ್ವಚ್ಛ ಭಾರತ ಮತ್ತು ಸ್ಮಾರ್ಟ್ ಸಿಟಿ) ಪುರಸ್ಕರಿಸುವ ಇತ್ತೀಚಿನ ಚಲನಚಿತ್ರಗಳ ಸಾಲಿಗೆ (ಮತ್ತೊಂದು ಉದಾಹರಣೆ 'ಟಾಯ್‌ಲೆಟ್: ಏಕ್ ಪ್ರೇಮ್ ಕಥಾ') 'ಮಾರ್ಚ್ 22' ಕೂಡ ಸೇರುತ್ತದೆ. ಒಟ್ಟಾರೆಯಾಗಿ ಈ ಚಿತ್ರ ವಿಶ್ವ ಜಲ ದಿನಾಚರಣೆಯನ್ನು ಬಹುಸಂಖ್ಯಾತ ವಿಚಾರಧಾರೆಯ ಮೂಲಕ ಜ್ಞಾಪಿಸಿಕೊಳ್ಳುವುದು ದಿನಾಚರಣೆಯ ಔಚಿತ್ಯವನ್ನು ಅನುಮಾನದಿಂದ ನೋಡುವ ಹಾಗೆ ಪ್ರೇಕ್ಷಕರನ್ನು ಪ್ರಚೋದಿಸುತ್ತದೆ.

ಪ್ರಸ್ತುತ ಕೇಂದ್ರ ಸರ್ಕಾರ 'ಮಾರ್ಚ್ 22'ನ್ನು ಪುರಸ್ಕರಿಸಿದರೆ ಆಶ್ಚರ್ಯ ಪಡಬೇಕಾಗಿಲ್ಲ, ಪ್ರಸ್ತುತ ರಾಜ್ಯ ಸರ್ಕಾರ ಇದನ್ನು ಕಡೆಗಣಿಸಿದರೆ ಗಾಬರಿಪಡಬೇಕಾಗಿಲ್ಲ. ಯಾಕೆ ಹೇಳಿ? ನೀವೇ ಯೋಚಿಸಿ.

■ ಡಾ.ವಿಜಯಕುಮಾರ್ ಎಂ ಬೋರಟ್ಟಿ

ತ್ರಿವಳಿ ತಲಾಖ್ ತೀರ್ಪು, ಸಂಘ ಪರಿವಾರ ಮತ್ತು ಹುಲಿಯ ಪಟ್ಟೆಗಳು



■ ಸುರೇಶ್ ಭಟ್ ಬಾಕ್ರಬೈಲ್

ತ್ರಿವಳಿ ತಲಾಖ್ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪು ಹೊರಬಿದ್ದ ತಕ್ಷಣ ಪ್ರಧಾನಿ ಮೋದಿ ಸೇರಿದಂತೆ ಪರಿವಾರಕ್ಕೆ ಪರಿವಾರವೇ ಹರ್ಷ ವ್ಯಕ್ತಪಡಿಸುತ್ತಿದೆ. ಸಂಘಿ ನಾಯಕರೆಲ್ಲ ಇದು ಮುಸ್ಲಿಂ ಮಹಿಳೆಯರ ಹಕ್ಕುಗಳಿಗಾಗಿ ತಾವು ಮಾಡಿದ ಹೋರಾಟದ ಫಲವೆಂದು ಪ್ರಚಾರ ಮಾಡತೊಡಗಿದ್ದಾರೆ. ಇದೊಂದು ಒಳ್ಳೆಯ ಸಾಮಾಜಿಕ ಸುಧಾರಣೆಯ ಕ್ರಮ ಎಂಬಿತ್ಯಾದಿ ಸಾರ್ವಜನಿಕ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಹೀಗೆ ಸದ್ಯಕ್ಕಂತೂ ಈ ತೀರ್ಪಿನ ರಾಜಕೀಯ ಲಾಭವನ್ನು ಪಡೆದುಕೊಳ್ಳಲೆತ್ನಿಸುತ್ತಿದ್ದಾರೆ. ಆದರೆ... ಮುಸ್ಲಿಮರನ್ನು ಗುರಿಯಾಗಿಸಿದ ಗುಂಪು ಹತ್ಯಾ ದಾಳಿ ಮೊದಲಾದ ಕೋಮುದ್ವೇಷದ ಘಟನೆಗಳು ಹೆಚ್ಚುತ್ತಲೆ ಇರುವ ಇಂದಿನ ಸನ್ನಿವೇಶದಲ್ಲಿ ಇವರ ಅಮಿತೋತ್ಸಾಹವನ್ನು ಕಂಡಾಗ ಇದರ ಹಿಂದೆ ಏನೋ ಹೂಟ ಇರಬಹುದು ಎಂಬ ಸಣ್ಣದೊಂದು ಆತಂಕ ಕಾಡುವುದು ಸಹಜವೇ ಆಗಿದೆ. ಏಕೆಂದರೆ ಇವರು ತಮ್ಮ ಅಜೆಂಡಾದ ಒಂದು ಪ್ರಮುಖ ಅಂಶವಾದ, ಅಲ್ಪಸಂಖ್ಯಾತರನ್ನು ಗುರಿಯಾಗಿಸಿದ ಸಮಾನ ನಾಗರಿಕ ಸಂಹಿತೆಯ ಜಾರಿಗಾಗಿ ಹಿಂದಿನಿಂದಲೂ ಪಟ್ಟುಬಿಡದೆ ಆಗ್ರಹಿಸುತ್ತಾ ಬಂದಿರುವವರು. ಮತ್ತೊಂದು ಮುಖ್ಯ ವಿಷಯವೆಂದರೆ ಸುಪ್ರೀಂ ಕೋರ್ಟು ಈಗಾಗಲೆ 2002ರ ಶಮೀಮ್ ಆರಾ ಪ್ರಕರಣದಲ್ಲಿ ತ್ರಿವಳಿ ತಲಾಖ್‌ಅನ್ನು ಅನೂರ್ಜಿತಗೊಳಿಸಿದ್ದರೂ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿ ಯಾವುದೇ ಕ್ರಮ ಕೈಗೊಳ್ಳದ ಹಿನ್ನೆಲೆಯಲ್ಲಿ ಪುನಃ ಸುಪ್ರೀಂಕೋರ್ಟಿನ ಮೊರೆಹೋದಾಗ ಮೋದಿ ಸರ್ಕಾರವೂ ಅಸಾಧಾರಣ ಆಸಕ್ತಿ ವಹಿಸಿರುವುದನ್ನು ಗಮನಿಸಬೇಕು. ಸರ್ಕಾರದ ಅಫಿಡವಿಟ್‌ನಲ್ಲಿ ತ್ರಿವಳಿ ತಲಾಖ್ ಅಷ್ಟೆ ಅಲ್ಲ, ತಲಾಖ್‌ನ ಇನ್ನೆರಡು ವಿಧಗಳು ಮತ್ತು ಬಹುಪತ್ನಿತ್ವವೂ ನ್ಯಾಯಸಮ್ಮತವೆ ಎಂಬುದನ್ನು ಪರಿಗಣಿಸುವಂತೆ ಕೋರಲಾಯಿತು. ಭಾರತದ ಪ್ರಧಾನ ಸರಕಾರಿ ವಕೀಲರು (ಅಡ್ವೊಕೇಟ್ ಜನರಲ್) ತಲಾಖ್‌ನ ಮೂರೂ ವಿಧಗಳೂ ಅಸಾಂವಿಧಾನಿಕ ಎನ್ನುತ್ತಾ ಅವೆಲ್ಲವನ್ನು ಮತ್ತು ಬಹುಪತ್ನಿತ್ವವನ್ನು ರದ್ದುಪಡಿಸಬೇಕೆಂದು ವಾದಿಸಿದರು. ಶರಿಯತ್‌ನಿಂದ ತಲಾಖ್‌ಅನ್ನು ತೆಗೆದುಹಾಕಿದರೆ ಸರ್ಕಾರ ಹೊಸ ಕಾನೂನನ್ನು ರಚಿಸಲು ಸೂಕ್ತ ಕ್ರಮ ಕೈಗೊಳ್ಳಲಿದೆ ಎಂದಾತ ನ್ಯಾಯಾಲಯದಲ್ಲಿ ಹೇಳಿರುವುದು ಗಮನಾರ್ಹವಿದೆ. ಮೋದಿ ಸರ್ಕಾರ ಸಂಸತ್ತಿನಲ್ಲಿ ಭಾರಿ ಬಹುಮತ ಹೊಂದಿರುವ ಸಂದರ್ಭದಲ್ಲಿ ಸ್ವಾಭಾವಿಕವಾಗಿ ಆ ಹೊಸ ಕಾನೂನು ಸಮಾನ ನಾಗರಿಕ ಸಂಹಿತೆಯ ದಿಕ್ಕಿನಲ್ಲಿ ಮೊದಲ ಹೆಜ್ಜೆ ಆಗಿರಬಹುದೆಂಬ ಅನುಮಾನಗಳನ್ನು ಆಧಾರರಹಿತ ಎನ್ನಲಾಗುವುದಿಲ್ಲ.

ಆದರೆ ಸರಕಾರಿ ವಕೀಲರ ಕೋರಿಕೆಯನ್ನು ತಳ್ಳಿಹಾಕಿ ತೀರ್ಪನ್ನು ಕೇವಲ ತ್ರಿವಳಿ ತಲಾಖ್ ಒಂದಕ್ಕೇ ಸೀಮಿತಗೊಳಿಸಿದ ನ್ಯಾಯಪೀಠ ಮಹಿಳೆಯ ಘನತೆಗೆ ಕುಂದುಂಟುಮಾಡುವ ತ್ರಿವಳಿ ತಲಾಖ್ ವೈಯಕ್ತಿಕ ಕಾನೂನಿಗೆ ಸಂಬಂಧಪಟ್ಟುದಲ್ಲ, ಅದು ಕಾನೂನುಬಾಹಿರ ಎಂದು ಸ್ಪಷ್ಟಪಡಿಸಿದೆ. ಅದೇವೇಳೆ ಇಬ್ಬರು ನ್ಯಾಯಮೂರ್ತಿಗಳ ತೀರ್ಪು ಸರಕಾರ ಅಲ್ಪಸಂಖ್ಯಾತರ ವೈಯಕ್ತಿಕ ಕಾನೂನುಗಳನ್ನು ಸಂವಿಧಾನಬಾಹಿರವೆಂದು ಕರೆಯುವ ಮೂಲಕ ಅವುಗಳಲ್ಲಿ ಇನ್ನಷ್ಟು ಹಸ್ತಕ್ಷೇಪ ಮಾಡುವ ಸಾಧ್ಯತೆಗಳನ್ನು ತಡೆಯಲು ಪ್ರಯತ್ನಿಸಿದೆ. ನ್ಯಾಯಾಲಯ ವೈಯಕ್ತಿಕ ಕಾನೂನುಗಳ ಪ್ರಪಂಚದೊಳಗೆ ಪ್ರವೇಶಿಸಬಾರದು ಎಂದಿರುವ ಅವರ ಪ್ರಕಾರ 'ಧಾರ್ಮಿಕ ಆಚರಣೆಗಳು ವಿವೇಕಯುತವೆ ಅಥವಾ ಪುರೋಗಾಮಿಯೆ ಅಥವಾ ತಿರೋಗಾಮಿಯೆ ಎಂದು ನಿರ್ಧರಿಸುವುದು ನ್ಯಾಯಾಲಯದ ಕೆಲಸವಲ್ಲ, ಧರ್ಮ ಮತ್ತು ವೈಯಕ್ತಿಕ ಕಾನೂನುಗಳನ್ನು ಗ್ರಹಿಸಬೇಕಿರುವುದು ಆ ಧರ್ಮದ ಅನುಯಾಯಿಗಳು ಅವನ್ನು ಸ್ವೀಕರಿಸುವ ರೀತಿಯಲ್ಲಿ ಹೊರತು ಇನ್ನೊಬ್ಬ (ಸ್ವಘೋಷಿತ ವಿಚಾರವಾದಿಗಳನ್ನು ಒಳಗೊಂಡಂತೆ) ಅದು ಹೇಗಿರಬೇಕೆಂದು ಹೇಳುವಂತೆ ಅಲ್ಲ.' ಬಹಳ ಮುಖ್ಯವಾಗಿ ಸರಕಾರಿ ವಕೀಲರ ವಾದಕ್ಕೆ ವಿರುದ್ಧವಾಗಿ 'ಎಲ್ಲಾ ಸಾಂವಿಧಾನಿಕ ನ್ಯಾಯಾಲಯಗಳು ವೈಯಕ್ತಿಕ ಕಾನೂನುಗಳನ್ನು ಕಾಪಿಡಬೇಕೆ ಹೊರತು ಅದರಲ್ಲಿ ತಪ್ಪು ಕಂಡುಹುಡುಕಬಾರದಾಗಿ ಸಂವಿಧಾನದ ವಿಧಿ 25 ನಿರ್ಬಂಧಿಸುತ್ತದೆ. ವೈಯಕ್ತಿಕ ಕಾನೂನುಗಳ ವಿಷಯದಲ್ಲಿ ನ್ಯಾಯಾಲಯ ಹಸ್ತಕ್ಷೇಪ ಮಾಡಲಾಗುವುದಿಲ್ಲ' ಎಂದು ಹೇಳಿದ್ದಾರೆ.

ಮುಸ್ಲಿಂ ಮಹಿಳೆಯರು ಪುರುಷರ ದಬ್ಬಾಳಿಕೆಯಿಂದ ಬಿಡುಗಡೆ ಪಡೆಯುವಂತಾಗಿರುವುದು ತಮ್ಮಿಂದಾಗಿ ಎಂದು ಸನ್ನಿವೇಶದ ಪೂರ್ಣ ಲಾಭವನ್ನು ಪಡೆಯಲೆತ್ನಿಸುತ್ತಾ ಮುಸ್ಲಿಂ ಮಹಿಳೆಯರ ಹಕ್ಕುಗಳ ಬಗ್ಗೆ ಭಾರಿ ಚಿಂತಿತರಾದಂತೆ ತೋರಿಸಿಕೊಳ್ಳುತ್ತಿರುವ ಸಂಘಿಗಳ ಅಸಲಿ ಮುಖವೇನೆಂಬುದು ಇತಿಹಾಸದ ಪುಟಗಳಲ್ಲಿ ದಾಖಲಿಸಲ್ಪಟ್ಟಿದೆ. ಗುಜರಾತ್ 2002ನ್ನೂ ಒಳಗೊಂಡಂತೆ ಕಳೆದ ಹಲವು ದಶಕಗಳಿಂದ ನಡೆದಿರುವ ನೂರಾರು, ಸಾವಿರಾರು ಕೋಮು ಗಲಭೆಗಳ ದಾಖಲೆಗಳನ್ನು ಪರಿಶೀಲಿಸಿದರೆ ಸಾಕು ಇವರು ಮುಸ್ಲಿಂ ಸ್ತ್ರೀಯರ ಮೇಲೆ ನಡೆಸಿದ ಅನೇಕಾನೇಕ ದೌರ್ಜನ್ಯ ಅತ್ಯಾಚಾರಗಳ ಭಯಾನಕ ಚಿತ್ರ ನಮ್ಮ ಮುಂದೆ ತೆರೆದುಕೊಳ್ಳುತ್ತದೆ. ಇನ್ನು ಚುನಾವಣೆಗಳ ಕಾಲದಲ್ಲಿ ಮೋದಿಯಾದಿಯಾಗಿ ಅನೇಕ ಸಂಘಿಗಳು "ಹಮ್ ಪಾಂಚ್ ಹಮಾರೆ ಪಚ್ಚೀಸ್" ಮುಂತಾದ ಘೋಷಣೆಗಳ ಮೂಲಕ ಮುಸ್ಲಿಮರೆಲ್ಲರೂ ಒಂದಕ್ಕಿಂತ ಹೆಚ್ಚು ಪತ್ನಿಯರನ್ನು ಹೊಂದಿ, ಹಿಂಡು ಹಿಂಡು ಮಕ್ಕಳನ್ನು ಹುಟ್ಟಿಸಿ, ತಮ್ಮ ಜನಸಂಖ್ಯೆಯನ್ನು ಬೆಳೆಸಿ, ಹಿಂದೂ ಸಮುದಾಯಕ್ಕೆ ಅಪಾಯ ಒಡ್ಡುತ್ತಾರೆಂದು ಹೇಳಿ ಚುನಾವಣಾ ಲಾಭ ಪಡೆಯುವ ವಿಷಯ ಯಾರಿಗೆ ತಾನೆ ಗೊತ್ತಿಲ್ಲ? ಅಂಕಿಅಂಶಗಳ ಆಧಾರವಿಲ್ಲದ ಈ ಹೇಳಿಕೆಗಳ ಉದ್ದೇಶ ಹಿಂದೂಗಳಲ್ಲಿ ಬೆದರಿಕೆ ಹುಟ್ಟಿಸಿ ಅವರನ್ನು ಭಾವೋದ್ರೇಕವಾಗಿ ಕೆರಳಿಸಿ ಅವರಲ್ಲಿ ಮುಸ್ಲಿಂ ವಿರೋಧಿ ಭಾವನೆಗಳನ್ನು ಬೆಳೆಸುವುದಾಗಿದೆ. ಆದರೆ ಮುಸ್ಲಿಂ ದೊರೆಗಳು ದೇಶವನ್ನು ಸುಮಾರು ಏಳು ಶತಮಾನಗಳ ಕಾಲ ಆಳಿದ್ದಾರಾದರೂ ಇಂದು ಕೇವಲ ಶೇಕಡಾ 14.23ರಷ್ಟಿರುವ ಮುಸ್ಲಿಮರ ಜನಸಂಖ್ಯೆ ಅದ್ಯಾವ ಅಪಾಯದ ಸೂಚಕವೆಂಬ ಪ್ರಶ್ನೆಗೆ ಸಂಘಿಗಳಲ್ಲಿ ಉತ್ತರ ಇಲ್ಲ. ಮುಸ್ಲಿಮರು ಐದು ಹೆಂಡಿರನ್ನು ಇಟ್ಟುಕೊಳ್ಳುತ್ತಾರೆಂದು ಆರೋಪಿಸುವ ಇವರು ಹಿಂದೂಗಳಲ್ಲಿ ಶೇಕಡಾ 1.8ರಷ್ಟು ಬಹುಪತ್ನಿವಲ್ಲಭರಿದ್ದರೆ ಮುಸ್ಲಿಮರಲ್ಲಿರುವುದು ಶೇಕಡಾ 1.2 ಎಂಬ ಸತ್ಯವನ್ನು ಮುಚ್ಚಿಡುತ್ತಿರುವುದರ ಅರಿವು ಬಹುತೇಕ ಜನರಿಗೆ ಇಲ್ಲ.



ಇಂದು ಮುಸ್ಲಿಂ ಮಹಿಳೆಯರ ಉದ್ಧಾರದ ಬಗ್ಗೆ ಎಲ್ಲಿಲ್ಲದ ಕಾಳಜಿ ಇರುವವರಂತೆ ನಟಿಸುವ ಸಂಘಿಗಳು ಇನ್ನಿತರ ಧರ್ಮಗಳ ಮಹಿಳೆಯರ ಹಕ್ಕುಗಳಿಗಾಗಿ ಏನು ಮಾಡಿದ್ದಾರೆ? ಹೋಗಲಿ, ತಮ್ಮದೆ ಹಿಂದೂ ಮಹಿಳೆಯರ ಸಬಲೀಕರಣಕ್ಕೆ ಇವರ ಕೊಡುಗೆ ಏನು? ವಾಸ್ತವ ಏನೆಂದರೆ ಇವರು ಹಿಂದೂ ಮಹಿಳೆಯರ ಸಬಲೀಕರಣವನ್ನು ತೀವ್ರವಾಗಿ ವಿರೋಧಿಸಿದವರು! ಇತಿಹಾಸದ ಪುಟಗಳನ್ನು ಸ್ವಲ್ಪ ತಿರುವಿ 40 ಮತ್ತು 50ರ ದಶಕಗಳಿಗೆ ಹೋದರೆ ಇವರು ಹಿಂದೂ ಮಹಿಳೆಯರ ದುರ್ಬಲೀಕರಣಕ್ಕಾಗಿ ಅಥವಾ ಹಿಂದೂ ಪುರುಷರ ಪ್ರಾಧಾನ್ಯವನ್ನು ಉಳಿಸುವುದಕ್ಕಾಗಿ ಯಾವ ನಮೂನೆಯ "ಹೋರಾಟ" ಮಾಡಿದ್ದರೆಂದು ತಿಳಿಯುತ್ತದೆ. ಜವಹರ್‌ಲಾಲ್ ನೆಹರೂ ದೇಶದ ಪ್ರಧಾನಿಯಾಗಿದ್ದ ಕಾಲವದು. ಅಂದು ಹಿಂದೂ ಸಮಾಜದಲ್ಲಿದ್ದ ಅನೇಕ ಅನಿಷ್ಟ ಸಂಪ್ರದಾಯಗಳನ್ನು ತೊಲಗಿಸಿ ಸುಧಾರಣೆ ತರುವ ಉದ್ದೇಶದಿಂದ ನೆಹರೂ ಸರಕಾರ ಹಿಂದೂ ಸಂಹಿತೆಯೊಂದನ್ನು ರಚಿಸಲು ಮುಂದಾಗಿತ್ತು. ಹೆಣ್ಣುಮಕ್ಕಳಿಗೆ ಅಪ್ಪನ ಆಸ್ತಿಯಲ್ಲಿ, ವಿಧವೆಯರಿಗೆ ಗಂಡನ ಆಸ್ತಿಯಲ್ಲಿ ಪಾಲಿನ ವಿಷಯಗಳಲ್ಲಿ ಮತ್ತು ಬಹುಪತ್ನಿತ್ವದ ವಿಷಯದಲ್ಲಿ ಅದುವರೆಗಿನ ಕಾನೂನುಗಳು ಮಹಿಳೆಯರಿಗೆ ಅನ್ಯಾಯವಾಗುವ ರೀತಿಯಲ್ಲಿದ್ದವು. ಬಾಲ್ಯವಿವಾಹ, ಉಪಪತ್ನಿಯರನ್ನು ಇಟ್ಟುಕೊಳ್ಳುವುದು, ವಿಧವೆಯರನ್ನು ಮನೆಯಿಂದ ಹೊರಹಾಕುವುದು ಇವೇ ಮುಂತಾದ ಹಲವಾರು ಅನಿಷ್ಟ ಪದ್ಧತಿಗಳು ಜಾರಿಯಲ್ಲಿದ್ದವು. ಅಂದು ಕಾನೂನು ಸಚಿವರಾಗಿದ್ದ ಡಾ.ಅಂಬೇಡ್ಕರ್ ಸಂವಿಧಾನ ರಚನಾ ಸಭೆಯಲ್ಲಿ ಹಿಂದೂ ಸಂಹಿತೆ ವಿಧೇಯಕವನ್ನು ಮಂಡಿಸಿದರು. ಅದರ ಪ್ರಧಾನ ಉದ್ದೇಶ ಅಂದಿನ ಹಿಂದೂ ಕಾನೂನುಗಳಲ್ಲಿದ್ದ ಬ್ರಾಹ್ಮಣಶಾಹಿಯ ಅನವಶ್ಯಕ ಅಂಶಗಳು ಮತ್ತು ಜಾತಿ ವ್ಯವಸ್ಥೆಯನ್ನು ತೆಗೆದುಹಾಕಿ, ಅಂತರ್ಜಾತೀಯ ವಿವಾಹಗಳನ್ನು ಸಾಧ್ಯವಾಗಿಸಿ, ಹಿಂದೂ ಸ್ತ್ರೀಯರ ದಮನ ಮತ್ತು ಬಹುಪತ್ನಿತ್ವಗಳನ್ನು ಕೊನೆಗಾಣಿಸಿ ವಿಚ್ಛೇದನೆ ಮತ್ತು ಆಸ್ತಿಯ ಹಕ್ಕುಗಳು ದೊರೆಯುವಂತೆ ಮಾಡುವುದಾಗಿತ್ತು. ಆದರೆ ಇಂದು "ಮಹಿಳಾ ಸಬಲೀಕರಣದ ಪರ" ಎಂದು ಬಿಂಬಿಸಿಕೊಳ್ಳಲು ಯತ್ನಿಸುತ್ತಿರುವ ಇದೇ ಸಂಘ ಪರಿವಾರ ವಿಧೇಯಕವನ್ನು ತೀವ್ರವಾಗಿ ಖಂಡಿಸಿದುದಲ್ಲದೆ ಕೆಲವು ಸಮಾನಮನಸ್ಕ ಸಂಘಟನೆಗಳ ಜೊತೆಗೂಡಿ ಅದರ ವಿರುದ್ಧ ದೇಶವ್ಯಾಪಿ ಚಳವಳಿಯೊಂದನ್ನು ಆರಂಭಿಸಿತು. ಹೆಸರಾಂತ ಇತಿಹಾಸಕಾರ ರಾಮಚಂದ್ರ ಗುಹಾ ಬರೆದಿರುವ "India After Gandhi" ಎಂಬ ಪುಸ್ತಕದಲ್ಲಿ ಆ ಚಳವಳಿಯ ವಿವರಗಳಿವೆ. ಸಂಘಿಗಳ ಅಪಾಧಭೂತಿತನ, ಕಪಟನಾಟಕಗಳನ್ನೆಲ್ಲ ಬಯಲಿಗೆಳೆಯುವ ಆ ವೃತ್ತಾಂತ ಇಲ್ಲಿದೆ:

"ವಿಧೇಯಕದ ವಿರುದ್ಧ ಕೂಗುಗಳೇಳಲಾರಂಭಿಸಿದವು. 1949ರ ಮಾರ್ಚ್‌ನಲ್ಲಿ 'ಅಖಿಲ ಭಾರತ ಹಿಂದೂ ಸಂಹಿತೆ ವಿರೋಧಿ ಸಮಿತಿ'ಗೆ ಚಾಲನೆ ನೀಡಲಾಯಿತು. ನಂತರ ಅದು ಧರ್ಮಶಾಸ್ತ್ರಗಳ ಆಧಾರದಲ್ಲಿ ರಚಿಸಲಾಗಿರುವ ಹಿಂದೂ ವೈಯಕ್ತಿಕ ಕಾನೂನುಗಳಲ್ಲಿ ಹಸ್ತಕ್ಷೇಪ ಮಾಡುವ ಅಧಿಕಾರ ಸಂವಿಧಾನ ರಚನಾ ಸಭೆಗೆ ಇಲ್ಲವೆಂದು ಹೇಳಿತು. ಆಗ ಸಂಪ್ರದಾಯವಾದಿ ಲಾಯರುಗಳು, ಸ್ವಾಮಿಗಳು ಸಮಿತಿಯ ನಿಲುವನ್ನು ಬೆಂಬಲಿಸಿದರು. ದ್ವಾರಕಾ ಪೀಠದ ಪ್ರಭಾವಶಾಲಿ ಸ್ವಾಮಿ ಶಂಕರಾಚಾರ್ಯರು ಸಂಹಿತೆಯ ವಿರುದ್ಧ ಸುತ್ತೋಲೆಯೊಂದನ್ನು ಹೊರಡಿಸಿ 'ಧರ್ಮ ಎನ್ನುವುದು ಅತ್ಯಂತ ಉದಾತ್ತವಾದ ಬೆಳಕು, ಸ್ಫೂರ್ತಿ ಮತ್ತು ಮಾನವನ ಆಸರೆ. ಅದನ್ನು ಸಂರಕ್ಷಿಸುವುದು ಸರಕಾರದ ಅತ್ಯುನ್ನತ ಕರ್ತವ್ಯವಾಗಿದೆ' ಎಂದು ಅಭಿಪ್ರಾಯಿಸಿದರು.

ಚಳವಳಿಯನ್ನು ಸಂಪೂರ್ಣವಾಗಿ ಬೆಂಬಲಿಸಿದ ಆರೆಸ್ಸೆಸ್ ಅದಕ್ಕಾಗಿ ತನ್ನೆಲ್ಲಾ ಶಕ್ತಿಯನ್ನು ವಿನಿಯೋಗಿಸಿತು. ಚಳವಳಿಯನ್ನು ಸ್ವಾಮಿ ಕರ್ಪಾತ್ರೀಜಿ ಮಹಾರಾಜ್ ಎಂಬಾತನ ನೇತೃತ್ವದಲ್ಲಿ ನಡೆಸಲಾಯಿತು. ಆರೆಸ್ಸೆಸ್ ವತಿಯಿಂದ ಭಾರತದ ಉದ್ದಗಲಕ್ಕೂ ನೂರಾರು ಸಭೆಗಳನ್ನು ಏರ್ಪಡಿಸಲಾಯಿತು. ಎಲ್ಲಾ ಸಭೆಗಳಲ್ಲಿ ಹೆಚ್ಚಾಗಿ ಸ್ವಾಮಿ ಕರ್ಪಾತ್ರೀಜಿ ಪ್ರಮುಖ ಭಾಷಣಕಾರ. ಇದರಲ್ಲಿ ಭಾಗವಹಿಸಿದ ಸ್ವಾಮಿಗಳು ಮತ್ತಿತರ ವ್ಯಕ್ತಿಗಳು ತಮ್ಮನ್ನು ಧರ್ಮಯುದ್ಧದಲ್ಲಿ ತೊಡಗಿರುವ ಧರ್ಮವೀರರೆಂದು ಕರೆದುಕೊಂಡರು. ಸ್ವಾಮಿ ಕರ್ಪಾತ್ರೀಜಿ ಅಂಬೇಡ್ಕರರ ಜಾತಿಯನ್ನು ಉಲ್ಲೇಖಿಸುತ್ತಾ ಒಂದು ಕಾಲದಲ್ಲಿ ಅಸ್ಪೃಶ್ಯನಾಗಿದ್ದ ಈತನೀಗ ಬ್ರಾಹ್ಮಣರ ವ್ಯವಹಾರಗಳಲ್ಲಿ ಮೂಗು ತೂರಿಸುವುದೇಕೆ ಎಂದು ಪ್ರಶ್ನಿಸಿದರು. ಶಾಸ್ತ್ರಗಳ ವ್ಯಾಖ್ಯಾನದ ವಿಷಯದಲ್ಲಿ ಸಾರ್ವಜನಿಕ ಚರ್ಚೆಗೆ ಬರುವಂತೆ ಸವಾಲು ಹಾಕಿದರು. ಶಾಸ್ತ್ರಗಳಲ್ಲಿ ಬಹುಪತ್ನಿತ್ವಕ್ಕೆ ಸಮ್ಮತಿ ನೀಡಲಾಗಿಲ್ಲವೆಂಬ ಅಂಬೇಡ್ಕರರ ವಾದವನ್ನು ತಳ್ಳಿಹಾಕುತ್ತಾ ಯಾಜ್ಞವಲ್ಕ್ಯ ಸ್ಮೃತಿಯ ಮೂರನೆ ವಿಭಾಗದ ಮೂರನೆ ಅಧ್ಯಾಯದ ಮೂರನೆ ಶ್ಲೋಕ... ಉದ್ಧರಿಸಿದರು. ಆದರೆ ಸದರಿ ಸ್ಮೃತಿಯಲ್ಲಿ ಗಂ... ಕುಡುಕನಾಗಿದ್ದರೆ, ಚಟುನಾಲಿಗೆಯವನಾಗಿ... ದುಂದುಗಾರನಾಗಿದ್ದರೆ ಹೆಂಡತಿ ಬೇರೊಬ್ಬನ... ವಿವಾಹವಾಗಲು ಅವಕಾಶ ನೀಡಲಾಗಿದೆಯೆ ಎ... ಪ್ರಶ್ನೆಯನ್ನೆಸೆದಾಗ ಮೌನಕ್ಕೆ ಶರಣಾದರು. ಹಿಂ... ಸಂಪ್ರದಾಯದಲ್ಲಿ ವಿಚ್ಛೇದನೆಯನ್ನು ನಿಷೇಧಿಸಲಾಗಿದೆ ಎ... ಸ್ವಾಮಿ ಕರ್ಪಾತ್ರಿಜಿ ಯಾವುದೆ ಜಾತಿಯ ಮಗುವನ್ನು ದ... ತೆಗೆದುಕೊಳ್ಳುವುದೂ ಶಾಸ್ತ್ರ ವಿರೋಧಿ ಹಾಗೂ ಜಾತಿ... ವಿರೋಧಿ ಎಂದು ಸಾರಿದರು. ಶಾಸ್ತ್ರಗಳ ಪ್ರಕಾರ ಮಹಿ... ಆಸ್ತಿಯಲ್ಲಿ ಕೇವಲ ಎಂಟನೆ ಒಂದಂಶವನ್ನು ಪ... ಪಡೆಯುವ ಹಕ್ಕು ಇದೆ ಹೊರತು ಅಂಬೇಡ... ಪ್ರಸ್ತಾಪಿಸಿದಂತೆ ಅರ್ಧ ಪಾಲು ಅಲ್ಲ. ಅವರ ಮಸ... ಹಿಂದೂ ಶಾಸ್ತ್ರಗಳನ್ನು ಸಂಪೂರ್ಣವಾಗಿ ಉಲ್ಲಂಘಿಸುವ... ಸರಕಾರ ಜನರ ತೀವ್ರ ವಿರೋಧದ ನಡುವೆಯ... ಮಸೂದೆಯನ್ನು ಅಂಗೀಕರಿಸಿದರೆ ಭೀಕರ ಪರಿಣಾಮಗ... ಎದುರಿಸಬೇಕಾಗಿ ಬರಬಹುದು, ದೇವರ ಮತ್ತು ಧರ್ಮ... ನಿಯಮಗಳನ್ನು ಉಲ್ಲಂಘಿಸಿದರೆ ಸರಕಾರಕ್ಕೆ ಭ... ಹಾನಿಯಾಗಬಹುದೆಂದು ಎಚ್ಚರಿಕೆ ನೀಡಿದರು.

ಡಿಸೆಂಬರ್ 11, 1949ರಂದು ದಿಲ್ಲಿಯ ರಾಮಲೀ... ಮೈದಾನದಲ್ಲಿ ಬೃಹತ್ತಾದ ಖಂಡನಾ ಸಭೆ ನಡೆಯಿ... ಒಬ್ಬ ಭಾಷಣಕೋರನಂತೂ ವಿಧೇಯಕವನ್ನು 'ಹಿಂದೂ ಧರ್ಮದ ಮೇಲೆ ಎಸೆದ ಅಟಂಬಾಂಬ್' ಎಂದು ಬಣ್ಣಿ... ಮರುದಿನ ಆರೆಸ್ಸೆಸ್ ಮಂದಿ ಘೋಷಣೆ ಕೂಗು... ಸಂವಿಧಾನ ರಚನಾ ಸಭೆಯ ಕಟ್ಟಡಗಳತ್ತ ಮೆರವಣಿಗೆ... ಸಾಗಿದರು. ಅಲ್ಲಿ ನೆಹರೂ, ಅಂಬೇಡ್ಕರ್ ಪ್ರತಿಕೃತಿಗಳ... ಸುಟ್ಟುಹಾಕಿದರು. ಶೇಖ್ ಅಬ್ದುಲ್ಲಾ ಕಾರ... ಧ್ವಂಸಗೊಳಿಸಿದರು. "ಪಾಕಿಸ್ತಾನವನ್ನು ನಾಶಮಾಡಿ", "ನೆಹ... ಅಧಿಕಾರ ತ್ಯಜಿಸಲಿ" ಎಂದು ಮುಂತಾಗಿ ಘೋ... ಕೂಗಿದರು.

1951ರ ಸೆಪ್ಟಂಬರ್ 16ರಂದು ನಡ... ಸಭೆಯೊಂದರಲ್ಲಿ ಸ್ವಾಮಿ ಕರ್ಪಾತ್ರೀಜಿ 'ಪಂಡಿತ್ ನೆಹ... ಮತ್ತಾತನ ಸಹಚರರು ಪ್ರಸ್ತಾಪಿತ ಹಿಂದೂ ಸಂಹಿತೆ... ಒಂದೇ ಒಂದು ವಿಭಾಗವೂ ಶಾಸ್ತ್ರಗಳಿಗೆ ಅನುಗುಣ... ಇದೆ ಎಂದು ತೋರಿಸಿದರೆ ನಾನು ಇಡೀ ಸಂಹಿತೆಯ... ಒಪ್ಪಿಕೊಳ್ಳುವೆ' ಎಂದು ಘೋಷಿಸಿದರು. ಮರುದಿನ ಸ್ವಾ... ನೇತೃತ್ವದಲ್ಲಿ ಸಂಘಿಗಳ ಗುಂಪೊಂದು ಮೆರವಣಿಗೆ ನ... ಸಂಸತ್ತಿಗೆ ನುಗ್ಗಲೆತ್ನಿಸಿತು. ಆ ಸಂದರ್ಭದ... ಪೊಲೀಸರೊಂದಿಗೆ ನಡೆದ ಘರ್ಷಣೆಯಲ್ಲಿ 'ಸನ್ಯಾಸಿ... ಜನಿವಾರದಂತಿರುವ' ಎಂದು ಹಿಂದಿ ನಿಯತಕಾಲಿಕದ... ಬಣ್ಣಿಸಲ್ಪಟ್ಟ ಸ್ವಾಮಿಯ ದಂಡ ತುಂಡಾಯಿತು."

ಅಂತಿಮವಾಗಿ ಇವರ ಒತ್ತಡಕ್ಕೆ ಮಣಿದ ಸರ... ಇವರೊಂದಿಗೆ ಒಮ್ಮತಕ್ಕೆ ಬರುವ ಸಲುವಾಗಿ ಮಹಿಳೆ... ಹಕ್ಕುಗಳನ್ನು ದುರ್ಬಲಗೊಳಿಸಿತು. 1955-56... ಹಿಂದೂ ಸಂಹಿತೆಯನ್ನು ನಾಲ್ಕು ಭಾಗಗಳಾಗಿ ವಿಭ... ಹಿಂದೂ ವಿವಾಹ ಕಾಯ್ದೆ ಹಿಂದೂ ಉತ್ತರಾಧಿಕಾ... ಕಾಯ್ದೆ ಹಿಂದೂ ಅಪ್ರಾಪ್ತ ವಯಸ್ಕತೆ ಮತ್ತು ಪಾಲಕ... ಕಾಯ್ದೆ ಹಿಂದೂ ದತ್ತುಸ್ವೀಕಾರ ಮತ್ತು ಸಂರಕ್ಷಣೆ ಕಾ... ಹೆಸರಿನ ನಾಲ್ಕು ಪ್ರತ್ಯೇಕ ಮಸೂದೆಗಳಾಗಿ ಮಂಡಿ... ಬಳಿಕ ಅವುಗಳನ್ನು ಅಂಗೀಕರಿಸಲಾಯಿತು. ಮ... ಮಸೂದೆಯನ್ನು ಕೈಬಿಟ್ಟಿರುವುದರಿಂದ ನಿರಾಶರ... ಅಂಬೇಡ್ಕರ್ ಸಚಿವಸಂಪುಟಕ್ಕೆ ರಾಜೀನಾಮೆ ನ... ಹೊರನಡೆದರು. ಪ್ರಸಕ್ತವಾಗಿ ಜಾರಿಯಲ್ಲಿರುವ ಈ ಹಿಂ... ಕೌಟುಂಬಿಕ ಕಾಯ್ದೆಗಳ ಬಗ್ಗೆ ಮಹಿಳಾ ಹ... ಹೋರಾಟಗಾರರಿಗೆ ತುಂಬಾ ಅಸಮಾಧಾನ ... ಉದಾಹರಣೆಗೆ ಹಿಂದೂ ವಿವಾಹ ಕಾಯ್ದೆ... ಹೊರತಾಗಿಯೂ ಹಿಂದೂಗಳಲ್ಲಿ ದ್ವಿಪತ್ನೀವಲ್ಲಭರು ಸಾ... ಸಂಖ್ಯೆಯಲ್ಲಿರುವುದು ಕಾಯ್ದೆಯ ದೌರ್ಬಲ್ಯವ... ತೋರಿಸುತ್ತದೆ.

ಕೇವಲ ತ್ರಿವಳಿ ತಲಾಖ್ ಪದ್ಧತಿಯನ್ನು ನಿಷೇ... ವೈಯಕ್ತಿಕ ಕಾನೂನುಗಳನ್ನು ತನ್ನ ಪರಿಧಿಯಿಂದ ಹೊರ... ಈ ತೀರ್ಪಿನಿಂದ ಮೇಲುನೋಟಕ್ಕಂತೂ ಸಂಘ ಪರಿವಾ... ನಿರೀಕ್ಷಿಸಿದಷ್ಟು ಪ್ರಯೋಜನವಾಗಿರುವಂತೆ ತೋರುವುದ... ಆದರೆ ಹುಲಿ ತನ್ನ ಪಟ್ಟೆಗಳನ್ನು ಎಂದ... ಬದಲಾಯಿಸುವುದಿಲ್ಲ ಎಂಬ ಗಾದೆ ಮಾತಿದೆ. ಹೀ... ಹುಟ್ಟಾ ಅಲ್ಪಸಂಖ್ಯಾತ ವಿರೋಧಿಯಾದ ಸಂಘ ಪರಿ... ತನ್ನ ಬತ್ತಳಿಕೆಯಲ್ಲಿ ಬೇರೆ ಅಸ್ತ್ರಗಳನ್ನು ಬಚ್ಚಿಟ್ಟಿ... ಸಾಧ್ಯತೆಗಳನ್ನು ಖಂಡಿತಾ ತಳ್ಳಿಹಾಕಲು ಸಾಧ್ಯವಿಲ್ಲ.

(ಆಧಾರ: ನ್ಯೂಸ್‌ಕ್ಲಿಕ್‌ನಲ್ಲಿ ಸೀಮಾ ಮುಸ... *28.10.2016*ರ ದ ಹಿಂದೂ ನಲ್ಲಿ ಫೈಜ... ರಹಮಾನ್; ಸಬ್‌ರಂಗ್ ಇಂಡಿಯ ದಲ್ಲಿ ಎಲ್.ಎ... ಹರ್ದೇನಿಯ ಲೇಖನಗ...


EPW ಸಂಪಾದಕೀಯ


ಒಂದು ಸಣ್ಣ ಸರಿಹೆಜ್ಜೆ

ಕೃಪೆ: *Economic and Political Weekly*
Aug 26, 2017. Vol. 52. No. 34

■ ಅನು: ಶಿವಸುಂದರ್

ತ್ರಿವಳಿ ತಲಾಖ್ ಪ್ರಕರಣದಲ್ಲಿ ಸುಪ್ರೀಂಕೋರ್ಟು ನೆಲಬಾಂಬುಗಳಿಂದ ಕೂಡಿದ್ದ ಪ್ರದೇಶವೊಂದರ ಮೇಲೆ ಯಶಸ್ವಿ ಪ್ರಯಾಣ ಮಾಡಿದೆ.





ಭಾರತೀಯ ಮುಸ್ಲಿಂ ಮಹಿಳೆಯರು ಒಂದು ಸಣ್ಣ ವಿಜಯವನ್ನು ಪಡೆದಿದ್ದಾರೆ. ಇದರ ಶ್ರೇಯಸ್ಸು ಸ್ವಯಂ ಮುಸ್ಲಿಮ್ ಮಹಿಳೆಯರಿಗೆ ಮತ್ತು ನ್ಯಾಯಾಂಗಕ್ಕೆ ಸಲ್ಲಬೇಕೇ ವಿನಃ ಅದರಲ್ಲಿ ಪಾಲು ಕದಿಯಲು ಹೊಂಚುಹಾಕುತ್ತಿರುವ ಭಾರತೀಯ ಜನತಾ ಪಕ್ಷಕ್ಕಲ್ಲ. ಈ ಮಹಿಳೆಯರ ಸತತ ಪರಿಶ್ರಮದಿಂದಾಗಿಯೇ ಆ ಅಹವಾಲು ಸುಪ್ರೀಂಕೋರ್ಟಿನಲ್ಲಿ ದಾಖಲಾಯಿತು. ಈಗ ಸುಪ್ರೀಂಕೋರ್ಟು ಅವರ ಅಹವಾಲಿಗೆ ಸಕಾರಾತ್ಮಕವಾಗಿ ಸ್ಪಂದಿಸಿದೆ. ಮುಸ್ಲಿಂ ಪುರುಷನೊಬ್ಬ ತಲಾಖ್ ಎಂದು ಒಂದೇ ಬಾರಿಗೆ ಮೂರು ಸಲ ಮೌಖಿಕವಾಗಿ ಹೇಳುವ ಮೂಲಕ ತನ್ನ ಹೆಂಡತಿಗೆ ವಿಚ್ಛೇದನ ಕೊಡುವ ತಲಾಖ್-ಎ-ಬಿದ್ದತ್ ಆಚರಣೆಯನ್ನು ಕಾನೂನು ಬಾಹಿರವೆಂದು ಘೋಷಿಸಿದೆ.

ಸುಪ್ರೀಂಕೋರ್ಟಿನ ಮುಂದೆ ತ್ರಿವಳಿ ತಲಾಖ್ ಮತ್ತು ಬಹುಪತ್ನಿತ್ವದಂಥ ತಾರತಮ್ಯ ಮಾಡುವ ಆಚರಣೆಗಳನ್ನು ರದ್ದು ಮಾಡಬೇಕೆಂದು ಐವರು ವಿಚ್ಛೇದಿತ ಮುಸ್ಲಿಮ್ ಮಹಿಳೆಯರು ಹಾಗೂ ಭಾರತೀಯ ಮುಸ್ಲಿಮ್ ಮಹಿಳಾ ಆಂದೋಲನ ಎಂಬ ಮುಸ್ಲಿಮ್ ಮಹಿಳೆಯರ ಸಂಘಟನೆಯು ಜೊತೆಗೂಡಿ ಸಲ್ಲಿಸಿದ್ದ ಅಹವಾಲಿತ್ತು. ಆದರೆ ನ್ಯಾಯಾಲಯವು ತಲಾಖ್-ಎ-ಬಿದ್ದತ್ ವಿಷಯದ ಪರಿಶೀಲನೆಗೆ ಮಾತ್ರ ವಿಚಾರಣೆಯನ್ನು ಸೀಮಿತಗೊಳಿಸಿತ್ತು. ನ್ಯಾಯಾಲಯವು ನೀಡಿರುವ ತೀರ್ಪು 395 ಪುಟಗಳಷ್ಟು ದೊಡ್ಡದಾಗಿದ್ದು ಅಷ್ಟೇ ಸಂಕೀರ್ಣವಾಗಿಯೇ ಇದೆ; ಐದು ನ್ಯಾಯಾಧೀಶರು ಮೂರು ಪ್ರತ್ಯೇಕ ತೀರ್ಪುಗಳನ್ನು ನೀಡಿದ್ದಾರೆ. ನ್ಯಾಯಮೂರ್ತಿ ಆರ್. ಎಫ್. ನಾರಿಮನ್ ಮತ್ತು ಯು. ಯು. ಲಲಿತ್ ಅವರು ನೀಡಿರುವ ಜಂಟಿ ತೀರ್ಪು ಮತ್ತು ನ್ಯಾಯಮೂರ್ತಿ ಕುರಿಯನ್ ಜೋಸೆಫ್ ಅವರು ಪ್ರತ್ಯೇಕವಾಗಿ ನೀಡಿರುವ ತೀರ್ಪು ತ್ರಿವಳಿ ತಲಾಖ್ ರದ್ದಾಗಬೇಕೆಂಬ ವಿಷಯದಲ್ಲಿ ಏಕೀಭವಿಸಿದೆ. ಐವರು ನ್ಯಾಯಮೂರ್ತಿಗಳ ಪೀಠದಲ್ಲಿ ಮೂವರು ನೀಡಿರುವ ಈ ಏಕಾಭಿಪ್ರಾಯದ ತೀರ್ಪೇ ಬಹುಸಂಖ್ಯಾತರ ತೀರ್ಪು ಆಗಿರುವುದರಿಂದ ಅದೇ ಈಗ ಚಾಲ್ತಿಗೆ ಬರುವ ಆದೇಶವೂ ಆಗಿದೆ. ಗಮನಿಸಬೇಕಾದ ಮತ್ತೊಂದು ಸಂಗತಿಯೆಂದರೆ 2002ರ ಶಮೀಮ್ ಆರಾ ಮತ್ತು ಉತ್ತರಪ್ರದೇಶ ಸರ್ಕಾರ ಪ್ರಕರಣದಲ್ಲೇ ಸುಪ್ರೀಂಕೋರ್ಟು ಈ ಆಚರಣೆಯು ಕಾನೂನು ಬಾಹಿರವಾದದ್ದೆಂದು ಆದೇಶ ನೀಡಿತ್ತು. ಆದರೆ ಆ ತೀರ್ಪು ಮಾಧ್ಯಮಗಳ, ರಾಜಕೀಯ ಪಕ್ಷಗಳ ಮತ್ತು ನಾಗರಿಕ ಸಮಾಜದ ಗಮನ ಸೆಳೆಯದಿರುವುದು ಆಶ್ಚರ್ಯಕರವಾಗಿದೆ.

ಬರಲಿರುವ ದಿನಗಳಲ್ಲಿ ಈ ಭಿನ್ನ ಭಿನ್ನ ಅಭಿಪ್ರಾಯಗಳ, ಸಂಕೀರ್ಣವಾದ ಮತ್ತು ಹಲವು ಪದರಗಳನ್ನು ಹೊಂದಿರುವ ಆದೇಶಗಳಲ್ಲಿರುವ ಸೂಕ್ಷ್ಮವಾದ ಅಂಶಗಳ ಬಗ್ಗೆ ಹಲವು ವಿಶ್ಲೇಷಣೆಗಳು ಮತ್ತು ಚರ್ಚೆಗಳು ನಡೆಯಲಿವೆ. ಈ ಆದೇಶವು ಇಡೀ ಮುಸ್ಲಿಂ ಸಮುದಾಯದ ಮೇಲೆ ಒಂದೇ ಬಗೆಯ ಪರಿಣಾಮವನ್ನೇನೂ ಬೀರುವುದಿಲ್ಲ, ಏಕೆಂದರೆ ಇಡೀ ಮುಸ್ಲಿಂ ಸಮುದಾಯ ಏಕರೂಪಿಯಾದ ಆಚರಣೆಗಳನ್ನೇನೂ ಅನುಸರಿಸುವುದಿಲ್ಲ. ಇಸ್ಲಾಮಿನಲ್ಲಿ ಶ್ರದ್ಧೆಯುಳ್ಳ ಎಲ್ಲರನ್ನೂ ಒಂದೇ ಎಂದು ಭಾವಿಸುವ ಪ್ರವೃತ್ತಿ ಇರುವುದರಿಂದ ಈ ಅಂಶವನ್ನು ಒತ್ತುಕೊಟ್ಟು ಹೇಳುವ ಅಗತ್ಯವಿದೆ. ಹೀಗಾಗಿ ಸ್ಪಷ್ಟವಾಗುವ ವಿಷಯವೇನೆಂದರೆ ಸುನ್ನಿ ಮುಸ್ಲಿಮರಲ್ಲಿ ಒಂದು ಪಂಥವು ಮಾತ್ರ ಅನುಸರಿಸುವ ಒಂದು ಆಚರಣೆಯನ್ನು ಮಾತ್ರ ವಿವಿಧ ಪ್ರತಿಪಾದನೆಗಳ ಮೂಲಕ ಬಹುಸಂಖ್ಯಾತ ಆದೇಶವು ರದ್ದುಪಡಿಸಿದೆ.


ಈ ಆದೇಶದಲ್ಲಿ ಕಳವಳಕಾರಿಯಾದ ಭಾಗವೇನೆಂದರೆ ಮುಖ್ಯ ನ್ಯಾಯಮೂರ್ತಿ ಜೆ. ಎಸ್. ಖೇಹರ್ ಮತ್ತು ನ್ಯಾಯಮೂರ್ತಿ ಎಸ್. ಅಬ್ದುಲ್ ನಜೀರ್ ಅವರುಗಳು ನೀಡಿರುವ ಅಲ್ಪಸಂಖ್ಯಾತ ತೀರ್ಪು. ಅವರ ಪ್ರಕಾರ ತಲಾಖ್-ಎ-ಬಿದ್ದತ್ ಎಂಬುದು ಸುನ್ನಿ ಮುಸ್ಲಿಮರ ವೈಯಕ್ತಿಕ ಕಾನೂನಿಗೆ ಸಂಬಂಧಪಟ್ಟ ವಿಷಯವಾಗಿರುವುದು ಮಾತ್ರವಲ್ಲದೆ ಧಾರ್ಮಿಕ ಶ್ರದ್ಧೆಗೆ ಸಂಬಂಧಪಟ್ಟ ವಿಷಯವೂ ಆಗಿರುವುದರಿಂದ ಸಂವಿಧಾನದ 25ನೇ ಕಲಮಿನ ರಕ್ಷಣೆಯನ್ನು ಪಡೆದಿದೆ. ಮುಂದುವರೆದು ಧರ್ಮವನ್ನು ಮತ್ತು ವೈಯಕ್ತಿಕ ಕಾನೂನುಗಳನ್ನು ಆಯಾ ಧಾರ್ಮಿಕ ಶ್ರದ್ಧೆಯ ಅನುಚರರು ಹೇಗೆ ಆಚರಿಸಿಕೊಂಡು ಬಂದಿದ್ದಾರೋ ಹಾಗೆಯೇ ಗ್ರಹಿಸಬೇಕೇ ವಿನಃ ಇತರರು ಅಥವಾ ಆಯಾ ಧರ್ಮಕ್ಕೆ ಸೇರಿದ ಸ್ವಘೋಷಿತ ವಿಚಾರವಾದಿಗಳು ಅವು ಹೇಗಿರಬೇಕೆಂದು ಬಯಸುತ್ತಾರೋ ಹಾಗಲ್ಲ ಎಂಬ ತರ್ಕವನ್ನು ಆ ಇಬ್ಬರು ನ್ಯಾಯಮೂರ್ತಿಗಳು ಮುಂದಿರಿಸಿದ್ದಾರೆ. ಒಂದು ವೇಳೆ ಈ ಅಭಿಪ್ರಾಯವೇ ಬಹುಸಂಖ್ಯಾತ ನ್ಯಾಯಮೂರ್ತಿಗಳ ಆದೇಶವೂ ಆಗಿಬಿಟ್ಟಿದ್ದರೆ ಮಹಿಳೆಯರಾಗಲೀ, ಇತರರಾಗಲೀ ವೈಯಕ್ತಿಕ ಕಾನೂನುಗಳಲ್ಲಿ ಸುಧಾರಣೆಯನ್ನು ಆಗ್ರಹಿಸುವ ಅವಕಾಶಗಳೇ ಇರುತ್ತಿರಲಿಲ್ಲ. ವೈಯಕ್ತಿಕ ಕಾನೂನುಗಳಲ್ಲಿ ಯಾವುದೇ ತಿದ್ದುಪಡಿಗಳನ್ನು ಮಾಡಬೇಕಿರುವುದು ಸಂಸತ್ತೇ ಹೊರತು ನ್ಯಾಯಾಂಗವಲ್ಲವೆಂದು ಅಭಿಪ್ರಾಯಪಟ್ಟಿರುವ ಈ ನ್ಯಾಯಾಧೀಶರು ಅರ್ಜಿದಾರರ ಆಗ್ರಹಕ್ಕೆ ಪ್ರತಿಕ್ರಿಯಿಸಿ ಆರು ತಿಂಗಳೊಳಗೆ ಒಂದು ಕಾನೂನನ್ನು ರಚಿಸಬೇಕೆಂದು ಸರ್ಕಾರಕ್ಕೆ ಆದೇಶಿಸಿದ್ದರು. ಅದೃಷ್ಟವಶಾತ್ ಈ ಸಲಹೆಗಳನ್ನು ಸಹ ಈಗ ಜಾರಿಗೆ ತರುವ ಅಗತ್ಯವಿಲ್ಲ. ಒಂದು ವೇಳೆ ಈ ಅಭಿಪ್ರಾಯವನ್ನು ಜಾರಿಗೆ ತರುವ ಸಣ್ಣ ಅವಕಾಶವಿದ್ದರೂ ಬಿಜೆಪಿಯು ಅದನ್ನು ಏಕರೂಪಿ ನಾಗರಿಕ ಸಂಹಿತೆಯನ್ನು ತರಲು ಬಳಸಿಕೊಂಡುಬಿಡುತ್ತಿತ್ತು.

ಇದೀಗ ನ್ಯಾಯಾಲಯವು ತನ್ನ ಆದೇಶವನ್ನು ನೀಡಿಯಾಗಿದೆಯಾದ್ದರಿಂದ ನಾವೀಗ ಭವಿಷ್ಯದತ್ತ ಮುಖಮಾಡಬೇಕು. ಮೊಟ್ಟಮೊದಲ ಬಾರಿಗೆ ಮುಸ್ಲಿಮ್ ಮಹಿಳೆಯರನ್ನು ಪ್ರತಿನಿಧಿಸುವ ಸಂಘಟನೆಯೊಂದು ತನ್ನ ಸಮುದಾಯದಲ್ಲಿರುವ ತಾರತಮ್ಯಕಾರಿ ಆಚರಣೆಗಳನ್ನು ನಿವಾರಿಸಬೇಕೆಂಬ ದಾವೆಯಲ್ಲಿ ಕಕ್ಷಿದಾರನಾಗಿದೆ. ಇದೊಂದು ಮಹತ್ವದ ಬೆಳವಣಿಗೆಯೂ ಆಗಿದೆ. 1985ರ ಶಾ ಬಾನು ಪ್ರಕರಣದಲ್ಲಿ ಅಪರಾಧ ಸಂಹಿತೆಯ 125ನೇ ಕಲಮಿನ ಪ್ರಕಾರ ವಿಚ್ಛೇದಿತ ಮುಸ್ಲಿಮ್ ಮಹಿಳೆಯು ಪರಿಹಾರಕ್ಕೆ ಅರ್ಹಳೆಂಬ ತೀರ್ಪನ್ನು ಸುಪ್ರೀಂ ಕೋರ್ಟು ನೀಡಿತ್ತು. ಆದರೆ ಮುಸ್ಲಿಮ್ ಪುರೋಹಿತಶಾಹಿಗಳ ಒತ್ತಡಕ್ಕೆ ಮಣಿದು ಅಂದಿನ ರಾಜೀವ ಗಾಂಧಿ ಸರ್ಕಾರ ಮುಸ್ಲಿಮ್ ಮಹಿಳೆಯರ (ವಿಚ್ಛೇದನ ಹಕ್ಕಿನ ರಕ್ಷಣೆ) ಕಾಯಿದೆ-1986ನ್ನು ಜಾರಿಗೆ ತಂದು ಸುಪ್ರೀಂ ಕೋರ್ಟಿನ ಸಕಾರಾತ್ಮಕ ಆದೇಶದ ಪರಿಣಾಮವನ್ನೇ ಶೂನ್ಯಗೊಳಿಸಿತು. ಹೀಗಾಗಿ ಮುಸ್ಲಿಮ್ ವೈಯಕ್ತಿಕ ಕಾನೂನಿನಲ್ಲಿ ಯಾವುದೇ ಬದಲಾವಣೆ ಬರಬೇಕೆಂದರೂ ಸಮುದಾಯದ ಒಳಗಿನಿಂದಲೇ ಅಂಥಾ ಆಗ್ರಹವು ಮೂಡಿಬರಬೇಕೆಂದು ಅಂದಿನಿಂದ ಪ್ರತಿಪಾದಿಸಿಕೊಂಡು ಬರಲಾಗಿತ್ತು. ಸಮಾನತೆ ಮತ್ತು ಲಿಂಗಾಧಾರಿತ ನ್ಯಾಯಕ್ಕಾಗಿ ಹೋರಾಡುತ್ತಿರುವ ಮಹಿಳಾ ಸಂಘಟನೆಗಳೂ ಸಹ ಮುಸ್ಲಿಮ್ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ದೊಡ್ಡ ದನಿಯೆತ್ತಲು ಹಿಂಜರಿಯುತ್ತಿದ್ದರು. ಮುಸ್ಲಿಮ್ ಮಹಿಳೆಯರ ಸಮಸ್ಯೆಗಳನ್ನು ಮುಂದುಮಾಡಿ ಇಡೀ ಮುಸ್ಲಿಮ್ ಸಮುದಾಯವನ್ನೇ ಖಳರನ್ನಾಗಿಸಲು ಸದಾ ತುದಿಗಾಲಲ್ಲಿ ನಿಂತಿರುವ ಹಿಂದೂ ಬಲಪಂಥೀಯರು ತಮ್ಮ ಪ್ರಯತ್ನಗಳನ್ನು ಬಳಸುವಂತಾಗಬಾರದೆಂಬ ಕಾಳಜಿಯೇ ಆ ಹಿಂಜರಿಕೆಗೆ ಕಾರಣವಾಗಿತ್ತು. ಆದರೆ ಈಗ ಕಾಲ ಸಾಕಷ್ಟು ಬದಲಾಗಿದೆ. ಅತ್ಯಂತ ಮುಖ್ಯವಾಗಿ ಮುಸ್ಲಿಮ್ ಮಹಿಳೆಯರು ಸಂಘಟಿತರಾಗಿದ್ದಾರೆ. ತಮ್ಮ ಆಗ್ರಹಗಳನ್ನು ಮುಂದಿಡುತ್ತಿದ್ದಾರೆ. ಮುಸ್ಲಿಮ್ ಪುರುಷರ ಅಧಿಪತ್ಯದಲ್ಲಿರುವ ಅಖಿಲ ಭಾರತ ಮುಸ್ಲಿಮ್ ವೈಯಕ್ತಿಕ ಕಾನೂನು ಮಂಡಳಿಗೆ ಪರ್ಯಾಯವಾಗಿ ಅಖಿಲ ಭಾರತ ಮುಸ್ಲಿಮ್ ಮಹಿಳಾ ವೈಯಕ್ತಿಕ ಕಾನೂನು ಮಂಡಳಿಯನ್ನು ರಚಿಸಿಕೊಂಡಿದ್ದಾರೆ. ಹಾಗೂ ತಮ್ಮ ಸಮುದಾಯದ ಸಂಪ್ರದಾಯವಾದಿ ನಾಯಕತ್ವವನ್ನು ಉಲ್ಲಂಘಿಸಲು ಸಿದ್ಧವಾಗಿದ್ದಾರೆ.

ಅದೇ ಸಮಯದಲ್ಲಿ, ನ್ಯಾಯಾಲಯದಲ್ಲಿ ಅವರು ಗಳಿಸಿದ ವಿಜಯವು ಮುಸ್ಲಿಮ್ ಮಹಿಳೆಯರ ಮೇಲಿನ ತಾರತಮ್ಯವನ್ನು ಕೊನೆಗೊಳಿಸಿ ಲಿಂಗಾಧಾರಿತ ನ್ಯಾಯವನ್ನು ಪಡೆದುಕೊಳ್ಳುವ ದಿಕ್ಕಿನಲ್ಲಿ ಇಟ್ಟಿರುವ ಮೊದಲ ಹೆಜ್ಜೆಯಷ್ಟೇ ಆಗಿದೆ. ನ್ಯಾಯಾಲಯದ ಮೆಟ್ಟಿಲನ್ನು ಹತ್ತಿದ ವ್ಯಕ್ತಿಗತ ಮುಸ್ಲಿಮ್ ಮಹಿಳಾ ಅಹವಾಲುದಾರರು ವರ್ಷಗಳಿಂದ ತಾವು ಅನುಭವಿಸುತ್ತಿದ್ದ ಚಿತ್ರಹಿಂಸೆಗಳ ಮತ್ತು ವರದಕ್ಷಿಣೆ ಕಿರುಕುಳಗಳ ಕಥೆಗಳನ್ನು ಬಿಚ್ಚಿಟ್ಟಿದ್ದಾರೆ. ಬೇಕಾಬಿಟ್ಟಿಯಾಗಿ ವಿಚ್ಛೇದನ ನೀಡುವ ಬಗ್ಗೆ ಮಾತ್ರ ಸೀಮಿತವಾಗಿರುವ ಈ ತೀರ್ಪಿನಿಂದ ಮುಸ್ಲಿಮ್ ಮಹಿಳೆಯರು ಎದಿರಿಸುತ್ತಿರುವ ಇತರ ಹಿಂಸೆಗಳೇನೂ ಕಣ್ಮರೆಯಾಗುವುದಿಲ್ಲ.

ಇಂದು ಭಾರತವು ಎದುರಿಸುತ್ತಿರುವ ಕೋಮುವಾದೀ ಪರಿಸ್ಥಿತಿಯ ಹಿನ್ನೆಲೆಯಲ್ಲಿ ನೋಡುವುದಾದರೆ ಸುಪ್ರೀಂಕೋರ್ಟಿನ ಐವರು ನ್ಯಾಯಮೂರ್ತಿಗಳ ಪೀಠವು ನೆಲಬಾಂಬುಗಳಿಂದ ಕೂಡಿದ್ದ ಪ್ರದೇಶವೊಂದರ ಮೇಲೆ ಯಶಸ್ವಿಯಾಗಿ ಪ್ರಯಾಣ ಮಾಡಿದೆಯೆಂದು ಹೇಳಬಹುದು. ಈ ತೀರ್ಪಿನಿಂದಾಗಿ ಮುಸ್ಲಿಮರು ಅದರಲ್ಲೂ ಮುಸ್ಲಿಮ್ ಮಹಿಳೆಯರು ತಮ್ಮ ವೈಯಕ್ತಿಕ ಕಾನೂನುಗಳಲ್ಲಿ ತಾವು ಬಯಸುವ ಮಾರ್ಪಾಡುಗಳನ್ನು ಹೇಗೆ ತರಬಹುದೆಂಬ ಚರ್ಚೆಗೆ ಬೇಕಾದ ದಾರಿಯು ತೆರೆದುಕೊಂಡಿದೆ. ಇದೇ ಈ ತೀರ್ಪಿನ ಮಹತ್ವವೂ ಆಗಿದೆ. ■

'ಲಿಂಗಾಯತ'ದ ಪುನಃಶ್ಚೇತನ- ಬಸವಣ್ಣನಿಗೆ ಸಲ್ಲುವ ಪರಮ ಗೌರವ



ಕರಾವಳಿಯ ಯಾವುದೋ ಕೇಸಿಗೆ ಸಂಬಂಧಿಸಿ ಗೌರಿ ಲಂಕೇಶ್‌ರವರು ಸಂಬಂಧಿಸಿದವರೊಂದಿಗೆ ತಮ್ಮ ವಿವರಗಳನ್ನು ಕೊಡುತ್ತಾ ಧರ್ಮದ ವಿಚಾರ ಬಂದಾಗ ಯಾವ ಧರ್ಮವೂ ಇಲ್ಲ ಎಂದರೂ ಕೂಡ ಕೊನೆಗೆ ಒತ್ತಾಯಪೂರ್ವಕವಾಗಿ ಹಿಂದೂ ಧರ್ಮ ಎಂದು ಬರೆಯಿಸಿಕೊಳ್ಳಲೇಬೇಕಾಯಿತೆಂದು ಸಂಪಾದಕೀಯ ವೊಂದರಲ್ಲಿ ಓದಿದ ನೆನಪು. ಅಂದರೆ, ಒಂದು ಸಾಮಾಜಿಕ ಪರಿಧಿಯೊಳಗೆ ನಾವು ಬಂಧಿಯಾದ ಮೇಲೆ ಬೇಡವೆಂದರೂ ನಾವು ಜಾತಿ ಧರ್ಮಗಳಂತಹ ಬಲೆಯೊಳಗೆ ಸಿಕ್ಕಿಹಾಕಿಕೊಳ್ಳಲೇಬೇಕಾದಂತಹ ಅನಿವಾರ್ಯತೆ ಕೆಲವೊಮ್ಮೆ ಎದುರಾಗುವುದುಂಟು. ಮನುಷ್ಯರು ತಮಗೆ ಹಾಗು ತಮ್ಮವರಿಗೆ ಬೇಕಾದಂತೆ ಬೇರೆ ಬೇರೆ ಹೆಸರಿಟ್ಟುಕೊಳ್ಳುವಂತೆ ಈ ಜಾತಿ ಹಾಗು ಧರ್ಮದ ಹೆಸರಿನೊಳಗಿನ ಸಾಮುದಾಯಿಕ ವಿಂಗಡನೆಗಳೆಲ್ಲ ಕೇವಲ ಅನುಕೂಲಾಧಾರಿತವೇ ಹೊರತು ಯಾವುದೇ ವೈಜ್ಞಾನಿಕ ತಳಹದಿಯಲ್ಲಿ ರೂಪುಗೊಂಡವುಗಳಂತೂ ಖಂಡಿತಾ ಅಲ್ಲ. ಯಾವುದೋ ರಾಜಕೀಯ ಕಾರಣಗಳಿಗಾಗಿ ಅಥವ ಯಾವುದೋ ಧಾರ್ಶನಿಕನ ತತ್ವಾದರ್ಶಗಳಿಗೆ ಬದ್ಧತೆ-ತೋರುವ ಸಲುವಾಗಿ ವಿಶ್ವದಾದ್ಯಂತ ಅನೇಕ ಹೊಸ ಹೊಸ ಧರ್ಮಗಳು ಹುಟ್ಟಿ ಬೆಳೆದದ್ದುಂಟು. ಅದೇ ರೀತಿ, ಈ ಜಾತಿ ಧರ್ಮಗಳ ಯಾವ ಹಂಗಿಲ್ಲದೆಯೂ ಕೂಡ ಈ ಪ್ರಕೃತಿಯಲ್ಲಿ ಬದುಕಲು ಯಾವ ಸ್ವಾಭಾವಿಕ ತಡೆಗಳೂ ಇಲ್ಲವೆಂಬುವುದೂ ಕೂಡ ಅಷ್ಟೇ ಸತ್ಯ.

ಕ್ರಿಶ್ಚಿಯಾನಿಟಿಗೆ ಬೈಬಲ್, ಇಸ್ಲಾಮ್‌ನಲ್ಲಿ ಕುರಾನ್, ಸಿಖಿಸಮ್‌ನಲ್ಲಿ ಗ್ರಂಥಸಾಹಿಬ್, ಬೌದ್ಧರಲ್ಲಿ ತ್ರಿಪಿಟಿಕ ಇರುವಂತೆ ಸಮಸ್ತ ಹಿಂದೂಗಳಿಗೆ ಮಾತ್ರ ಮೂಲ ಧಾರ್ಮಿಕ ಗ್ರಂಥವೆಂಬುವುದೇ ಇಲ್ಲ (ಮಹಾಭಾರತ ರಾಮಾಯಣ ಗೀತೆ ಪುರಾಣಗಳೆಲ್ಲ ಗುಪ್ತರಕಾಲದಲ್ಲಿ ರಚನೆಯಾದಂತವುಗಳೇ ಹೊರತು ಕೆಲವರು ಆರೋಪಿಸುವಂತೆ ಸಹಸ್ರಾರು ವರ್ಷಗಳ ಹಿಂದಿನದ್ದಲ್ಲ). ಆದರೆ, ಇದಕ್ಕೂ ಮುಂಚೆ ವೇದೋಪನಿಷತ್ತುಗಳೇ ಪ್ರಾಮಾಣ್ಯವಾಗಿ ಸ್ವೀಕರಿಸಿರುವ ಸಣ್ಣಮಟ್ಟದ ವೈದಿಕ ಧರ್ಮವೆನ್ನುವುದು ಭಾರತದಲ್ಲಿ ಅಸ್ತಿತ್ವದಲ್ಲಿದ್ದಿರುವುದೇನೋ ಹೌದು. ಬಳಿಕ ಇದೇ ವೈದಿಕ ಸಮುದಾಯ ಪ್ರಭುತ್ವದ ಮೇಲೆ ಪ್ರಭಾವ ಬೀರಿ ವೇದೋಪನಿಷತ್ತಿನ ಯಾವ ಸೋಂಕೂ ಇರದ ಇಲ್ಲಿನ ಬಹುಸಂಖ್ಯಾತ ಅವೈದಿಕರನ್ನೂ ಕೂಡ ಜತೆಗೆಳೆದುಕೊಂಡು ವೈದಿಕ ಕೇಂದ್ರಿತ ಹಿಂದೂ ಧರ್ಮವೊಂದನ್ನು ರೂಪುಗೊಳಿಸಿದ್ದು ಮಾತ್ರ ಪಕ್ಕಾ ರಾಜಕೀಯದ ನೆಲೆಯಿಂದ.


ಗೌತಮ ಬುದ್ಧನ ತತ್ವಾದರ್ಶಗಳಿಂದ ಪ್ರಭಾವಿತರಾದವರು ಬಳಿಕ ಬೌದ್ಧ ಧರ್ಮವನ್ನು ಕಟ್ಟಿಕೊಂಡರೆ, (ಬುದ್ಧನ ಸಮಕಾಲೀನ ಮಹಾವೀರ ಜೈನರನ್ನು ಹೆಚ್ಚು ಪ್ರಭಾವಿಸಿ ಜೈನ ಧರ್ಮವನ್ನು ಮತ್ತೆ ಉಚ್ಛ್ರಾಯಕ್ಕೇರಿಸಿದಂತಹ ಇಪ್ಪತ್ನಾಲ್ಕನೇ ತೀರ್ಥಂಕರನೇ ಹೊರತು ಜೈನ ಧರ್ಮದ ಸ್ಥಾಪಕನಲ್ಲ. ಇಸ್ಲಾಮ್‌ನಲ್ಲಿರುವ ಪೈಗಂಬರರೇ "ಕೊನೆಯ ಪ್ರವಾದಿ" ಎಂಬಂತಹ 'ದಿ ಎಂಡ್' ಕಲ್ಪನೆ ಜೈನರಲ್ಲಿಲ್ಲದ ಕಾರಣ ಜೈನ ಧರ್ಮೀಯರೇ ಆದ ಆಚಾರ್ಯ ರಜನೀಶರನ್ನು ಇಪ್ಪತ್ತೈದನೆಯ ತೀರ್ಥಂಕರನ್ನಾಗಿಸುವ ಆಲೋಚನೆಯೂ ದಶಕಗಳ ಹಿಂದೆ ಕೆಲವರಿಗೆ ಬಂದಿತ್ತಂತೆ) ಗುರುನಾನಕ್ ರಂತವರಿಂದ ಸಿಖ್ ಧರ್ಮ ಪ್ರತ್ಯೇಕವಾಗಿ ಬೆಳೆದು ನಿಂತಿತು. (ಮೊಗಲ್ ದೊರೆ ಅಕ್ಬರ್ ಬಾದಷಾ ದೀನ್ ಇ ಲಾಹಿ ಎಂಬ ಸೌಹಾರ್ದಮಯ ಧರ್ಮಸ್ಥಾಪನೆಗೆಳೆದಿದ್ದ ಎಂಬುವುದು ಪಠ್ಯಪುಸ್ತಕಗಳಲ್ಲಿ ಓದಿದ ನೆನಪು). ಅದೇ ರೀತಿ ದಕ್ಷಿಣದಲ್ಲಿ ಸಾಮಾಜಿಕ ಕ್ರಾಂತಿ ಮಾಡಿದ ಬಸವಣ್ಣ ಹೊಸ ಜನಪರ ಸಿದ್ಧಾಂತವುಳ್ಳ ಧರ್ಮ ಸಂಸ್ಥಾಪಕನಾಗಿ ಇಲ್ಲಿ ಮನೆಮಾತಾದರು.

ಇದು ನಮ್ಮ ಕೀಳರಿಮೆಯೋ, ಅವರ ಮೇಲರಿಮೆಯೋ ಅಥವ ತಾರತಮ್ಯವೋ ಒಂದೂ ತಿಳಿಯದು. ಎಲ್ಲವನ್ನೂ ನಾವು ಉತ್ತರ ಭಾರತೀಯರನ್ನು ಮೂಲವನ್ನಾಗಿಟ್ಟುಕೊಂಡೇ ಅಳೆದು ತೂಗುತ್ತೇವೆ. ದಕ್ಷಿಣ ಭಾರತದಲ್ಲಿ ಖ್ಯಾತ ಹಾಡುಗಾರ್ತಿಯಿದ್ದರೆ ಅವರು ದಕ್ಷಿಣದ ಲತಾ ಮಂಗೇಶ್ಕರ್ ಆಗುತ್ತಾರೆ. ಆದರೆ, ಉತ್ತರದವರು ಯಾರೂ ಯಾರನ್ನೂ ಕೂಡ ಉತ್ತರದ ಜಾನಕಿಯಮ್ಮ ಎಂದು ಕರೆಯಲು ಹೋಗರು. ಆದ್ಯಾತ್ಮಿಕ ಲೋಕದಲ್ಲಿ ಆತ ಯಾರೇ ಆಗಿರಲಿ (ಗಮನಿಸಿ ಖಾವಿ ಧರಿಸಿದ ಮಾಮೂಲಿ ಕಳ್ಳ ಸಂತರಲ್ಲ, ಆಧ್ಯಾತ್ಮಿಕ ಭಾಷೆಯಲ್ಲಿ ಹೇಳುವಂತೆ ಆತ್ಮ ಸಾಕ್ಷಾತ್ಕಾರ ಹೊಂದಿದಂತಹ ವಿರಾಗಿ ಸಂತ ಸನ್ಯಾಸಿಗಳು) ಅವರೆಲ್ಲರೂ ಯಾವತ್ತಿಗೂ ಒಂದೇ. ಆದರೂ ಕೂಡ ನಮ್ಮ ಶಿಶುನಾಳ ಷರೀಫರು ದಕ್ಷಿಣದ ಕಬೀರ ಎನಿಸಿಕೊಳ್ಳುತ್ತಾರೆ. ಆದರೆ ಕಬೀರರನ್ನು ಯಾರೂ ಉತ್ತರದ ಷರೀಫ್ ಎನ್ನುವ ದುಸ್ಸಾಹಸಕ್ಕೆ ಹೋಗರು.

ಅದೇ ರೀತಿ, ಅಲ್ಲಿ ಬುದ್ಧ, ನಾನಕ್ ರಂತಹವರ ತತ್ವಾದರ್ಶಗಳ ಧರ್ಮಕ್ಕೆ ಯಾವ ತಕರಾರುಗಳೂ ಇಲ್ಲದಿದ್ದರೆ ದಕ್ಷಿಣದ ಬಸವಣ್ಣ ಮಾತ್ರ ಧರ್ಮಸ್ಥಾಪಕ ಎಂದಾಕ್ಷಣ ಕೆಲವರ ಪಿತ್ಥ ನೆತ್ತಿಗೇರಿ ಬಿಡುತ್ತದೆ ಯಾಕೋ? ಅಂದರೆ ಧರ್ಮ ಸಂಸ್ಥಾಪಕನಾಗಲು ಬಸವಣ್ಣ ಉತ್ತರದಲ್ಲಿ ಹುಟ್ಟಬೇಕಿತ್ತೇನೋ..!! ಬುದ್ಧ, ನಾನಕರಂತೆಯೇ ಬಸವಣ್ಣನೂ ಒಬ್ಬ ದಾರ್ಶನಿಕ ಮಾತ್ರವಲ್ಲ; ಒಬ್ಬ ಸಮಾಜ ಸುಧಾರಕ ಕೂಡ ಹೌದು. "ದಯೆಯೇ ಧರ್ಮದ ಮೂಲ"ವೆಂಬ ಸಿದ್ಧಾಂತದ ಪ್ರತಿಪಾದಕನಾದ ಬಸವಣ್ಣ ತನ್ನ ಕಾರ್ಯಕ್ಷೇತ್ರದಲ್ಲಿ ಮಾಡಿದಂತಹ ಸಾಮಾಜಿಕ ಹಾಗು ಮೌಢ್ಯರಹಿತ ಆಧ್ಯಾತ್ಮಿಕ ಕ್ರಾಂತಿಯ ಪ್ರಭಾವ ಭಗವಾನ್ ಬುದ್ಧನಂತೆ ಅದು ಅವರ ಅನುಯಾಯಿಗಳಿಗಷ್ಟೇ ಅವರನ್ನು ಸೀಮಿತಗೊಳಿಸದೇ ಧರ್ಮಾತೀತವಾಗಿ ಪ್ರಭಾವಿಸುವಂತೆ ಮಾಡಿದ್ದು ಸುಳ್ಳಲ್ಲ.

ಮೂಲತಃ ಪ್ರಭಾವೀ ಮನೆತನದಲ್ಲೇ ಹುಟ್ಟಿ ಬೆಳೆದಂತಹ ಬುದ್ಧ ಬಸವಣ್ಣನಂತವರಿಗೆ ತಮ್ಮ ಹೆಸರನ್ನು ಶಾಶ್ವತಗೊಳಿಸಿಕೊಳ್ಳುವ ತೆವಲಿಗಾಗಿ ಹೊಸ ಧರ್ಮವನ್ನು ಹುಟ್ಟುಹಾಕುವ ಅವಶ್ಯಕತೆಯಿದ್ದಿರಲಿಲ್ಲ, ಅವರ ಸ್ವಾರ್ಥರಹಿತ ಸಾಮಾಜಿಕ ತುಡಿತಗಳು ಅವರಿಗೆ ಅನೇಕ ಶತ್ರುಗಳನ್ನು ಸೃಷ್ಟಿಸಿದ ರೀತಿಯಲ್ಲಿ ಪ್ರಭಾವಕ್ಕೊಳಗಾದಂತಹ ದೊಡ್ಡ ಅನುಯಾಯಿ ವರ್ಗವನ್ನೂ ಸೃಷ್ಟಿಸಿತ್ತು, ಬುದ್ಧ ನಿರ್ವಾಣ ಹೊಂದಿದ ಎಷ್ಟೋ ಸಮಯದ ಬಳಿಕವಷ್ಟೆ ಆತನನ್ನು ಚಿತ್ರಿಸುವ ಶಿಲ್ಪಗಳು, ಕೃತಿಗಳೆಲ್ಲ ಹೆಚ್ಚುಹೆಚ್ಚಾಗಿ ಹೊರ ಬಂದವು. ಬುದ್ಧ ಯೇಸು, ಪೈಗಂಬರ್ ಬಸವಣ್ಣನಂತಹ ದಾರ್ಶನಿಕರ ಅನುಯಾಯಿಗಳು ಕೇವಲ ಅನುಯಾಯಿಗಳೇ ಹೊರತು ಮೇಲೆ ತಿಳಿಸಿದಂತಹ ಮಹಾಪುರುಷರ ಪಡಿಯಚ್ಚುಗಳಂತೂ ಖಂಡಿತಾ ಅಲ್ಲ, ಇಂತಹ ದಾರ್ಶನಿಕರ ಸಂದೇಶಗಳನ್ನು ಜತನವಾಗಿ ಕಾಪಾಡಿಕೊಂಡ ಹೆಗ್ಗಳಿಕೆ ಇವರದೆನ್ನಬಹುದೇ ಹೊರತು ಆ ಮಹಾತ್ಮರ ತತ್ವಸಂದೇಶಗಳನ್ನು ಯಥಾವತ್ತಾಗಿ ಇವರೆಲ್ಲ ಪಾಲಿಸುತ್ತಿದ್ದಾರೆಂದು ಯಾವತ್ತಿಗೂ ಹೇಳಲಾಗದು.


ಜಾತೀಯತೆ, ಲಿಂಗ ತಾರತಮ್ಯಗಳೆಲ್ಲ ಸಮಾಜದಲ್ಲಿ ಹಾಸುಹೊಕ್ಕಾಗಿದ್ದ 12ನೆಯ ಶತಮಾನದಲ್ಲಿ ಕಾಯಕ ಹಾಗು ಸಮಾನತೆಗೆ ಮಹತ್ವ ನೀಡಿದಂತಹ 'ಅನುಭವ ಮಂಟಪ'ವನ್ನು ಸ್ಥಾಪಿಸಿ ಜಾತೀಯತೆ ಭೇದಗಳಿಲ್ಲದೆ ಎಲ್ಲಾ ಶರಣರೊಂದಿಗೆ ಚಿಂತನೆ ನಡೆಸುತ್ತಿದ್ದ ಬಸವಣ್ಣನ ವಿಚಾರಧಾರೆಗೂ ಆಗಿನ ವೈದಿಕ ವಿಚಾರಧಾರೆಗೂ ಅಜಗಜಾಂತರ ಅಂತರಗಳಿದ್ದವು. ಅಲ್ಲಮ ಪ್ರಭು, ಬಸವಣ್ಣಾದಿ ಶರಣರು ರಚಿಸಿ ಸಮಾಜಕ್ಕೆ ಕೊಟ್ಟುಹೋದಂತಹ ವಚನ ಸಾಹಿತ್ಯವಂತೂ ಯಾವ ಧಾರ್ಮಿಕ ಗ್ರಂಥಗಳು



ಉಪದೇಶಿಸುವಂತಹ ತತ್ವಾದರ್ಶಗಳಿಗೂ ಕಡಿಮೆಯಿರ ಉತ್ಕೃಷ್ಟವಾಗಿ ಮಾರ್ಗದರ್ಶಿಯೆನಿಸಿವೆ.

ಎರಡು ಸಾವಿರ ವರ್ಷಗಳ ಹಿಂದೆ ಭಗವಾನ್ ಆತ್ಮ ಸಾಕ್ಷಾತ್ಕಾರಗೊಂಡ ತತ್ವಜ್ಞಾನಿಯಾಗಿಯೂ ಧರ್ಮ-ದೈವ ಎಂದಾಕ್ಷಣ ಆ ಕಾಲದಲ್ಲಿ ಪ್ರಚಲಿತ ವೈದಿಕ ಹಿನ್ನೆಲೆಯ ಧಾರ್ಮಿಕ ಕಲ್ಪನೆಯ ಪರ ಯಾವತ್ತೂ ಮಾತನಾಡಲೇ ಇಲ್ಲ. ವರ್ಣಾಶ್ರಮ ಪದ್ಧ ಮೊದಲಾದ ಧಾರ್ಮಿಕತೆಯ "ಜೊಳ್ಳು"ಗಳೇ ರಾರಾಜಿಸುತ್ತಿದ್ದ ಆ ಕಾಲದಲ್ಲಿ ಜನರನ್ನು ಮತ ಗೊಂದಲಪಡಿಸುವಂತಹ ಗೋಜಿಗೆ ಬುದ್ಧ ಕೈಹಾ ವೈದಿಕತೆಯಿಂದ ಪ್ರತ್ಯೇಕವಾಗಿ ನಿಂತು ತನ್ನದೇ ರೀತಿ ಜನಪರ ಸಂದೇಶಗಳನ್ನು ತಲುಪಿಸುತ್ತಾ ಹೋದ. ಅದೇ ಬಸವಣ್ಣನವರೂ ಪ್ರಚಲಿತ ನಂಬಿಕೆಗಳಿಗೆ ಪ್ರತಿ (ಜಾತೀಯತೆಯಿಂದ ಹೊರತಾದ ಹಿಂದೂ ಧರ್ಮ ಕಲ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ; ಬಸವಣ್ಣನದ್ದು ಇಲ್ಲಿ ತದ್ವಿ ಸಿದ್ಧಾಂತ) ಆಧ್ಯಾತ್ಮಿಕ ಲೇಪನವುಳ್ಳ ಸಾಮಾಜಿಕ ಕ್ರಾ ಬೇರೆಯದೇ ರೀತಿಯಲ್ಲಿ ತೊಡಗಿ ಜಾತಿ ಭ ಮೇಲುಕೀಳುಗಳೇ ಮೊದಲಾದ ತಾರತಮ್ಯಗಳನ್ನು ನಿಲ್ಲುವಂತಹ ದಿಟ್ಟ ನಡೆಗೆ ಮುಂದಾಗಿ ಹೊಸ ಸಾಮ ಚಿಂತನೆಯನ್ನೇ ಸಮಾಜದಲ್ಲಿ ಹರಿಯಬಿಟ್ಟರು. ಇದೇ ಕಾಯಕ ಹಾಗು ಸಾಮಾಜಿಕ ನ್ಯಾಯದ ಪರವಿರುವ ಮ ಕಾಂಕ್ಷೆಯ ಪ್ರತ್ಯೇಕವಾದ ಲಿಂಗಾಯತ ಧರ್ಮವೆ ಹೊರತು ಗೊಡ್ಡುವೈದಿಕ ಧರ್ಮದ ಕಾಂಡಕ್ಕೆ ಯಾವ ಕಟ್ಟಲ್ಪಟ್ಟ ಕಸಿಯಂತಿರುವ ವೀರಶೈವ ಗೆಲ್ಲಿನ ಮತ್ತೊ ಟಿಸಿಲೇ ಈ ಲಿಂಗಾಯತವೆಂದು ಕೊಂಡರೆ ಅದು ವ ಢಂಬಾಚಾರಗಳಿಗೆ ವಿರುದ್ಧವಾಗಿ ಸೆಟೆದು ಸಮಾನ ನೆಲೆಯಲ್ಲಿ ಕ್ರಾಂತಿ ಮಾಡಿದ ಆದರ ಜನಕ ಬಸವ ಮಾಡಿದಂತಹ ಅಪಚಾರವಲ್ಲದೇ ಬೇರೇನಲ್ಲ.

ಸದೃಢವಾದಂತಹ ಮಾವಿನ ಮರದ ಯಾವು ಗೆಲ್ಲಿಗೆ ಬಂದಳಿಕೆ ಬೀಜವೊಂದು ಬಿದ್ದು ಅದೇ ಬೆಳೆ ಕೊನೆಗೆ ಇಡೀ ಮರವನ್ನೇ ಆಶ್ರಯಿಸಿ ಕೊನೆಗೆ ಮ ಮರದ ಅಸ್ತಿತ್ವವನ್ನೇ ಅದು ಇಲ್ಲವಾಗಿಸು



ಕಲ್ಲಡ್ಕ, ಇಗೋ ನನ್ನ ಕ್ಷೇತ್ರ ಪುರಾಣ ರೆಸಿಪಿ

ಕಲ್ಲಡ್ಕ ಭಟ್ಟನ ಶಾಲೆಯ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟಕ್ಕೆ ಬೇಕಾಗುವ ಹಣವನ್ನು ಜನರಿಂದ ಭಿಕ್ಷೆ ಬೇಡಿ ತರಲು ಕಲ್ಲಡ್ಕ ಭಟ್ಟನು ತನ್ನ ಎಪ್ಪತ್ತಾರು ವರ್ಷ ವಯಸ್ಸಿನ ವೃದ್ಧ ಹೆಂಡತಿಯನ್ನು ಧಾರವಾಡ ಹುಬ್ಬಳ್ಳಿ ಬೆಳಗಾವಿಗೆ ಕಳುಹಿಸಿ ಅಲ್ಲಿ ಭಿಕ್ಷೆ ಬೇಡಿಸಿದ ಫೋಟೋಗಳು ನಿನ್ನೆಯ ಪ್ರಮುಖ ಕನ್ನಡ ಪತ್ರಿಕೆಗಳಲ್ಲಿ ರಾರಾಜಿಸಿತ್ತು. ಸರಕಾರಿ ಬಿಸಿಯೂಟ ಯೋಜನೆ ನಿರಾಕರಿಸಿ ಭಟ್ಟ ಹೀಗೆ ಮುದಿ ಹೆಂಡತಿಯಿಂದ ಅಥವಾ ಬೇಬಿಯಿಂದ ಬೀದಿಯಲ್ಲಿ ಭಿಕ್ಷೆ ಬೇಡಿಸುವ ಬದಲು ಶಾಲೆಯ ಮಕ್ಕಳ ಊಟಕ್ಕೆ ಬೇಕಾಗುವ ಹಣ ಸಂಗ್ರಹಿಸಲು ಒಂದು ಸುಲಭದ ತಂತ್ರ ನನ್ನ ಹತ್ತಿರವಿದೆ. ಅದು ಹೀಗಿದೆ- ಕಲ್ಲಡ್ಕದ ಹತ್ತಿರವೇ ಮಾಣಿ ಗ್ರಾಮದ ಬದಿಗಿರುವ 'ಪೆರಾಜೆ' ಎಂಬಲ್ಲಿ ಗೋಸ್ವಾಮಿಯ ಶಾಖಾ ಮಠವಿದೆ. ಅಲ್ಲಿ ಮೂಕಾಂಬಿಕೆಯ ತಂಗಿ ಕಿವುಡಾಂಬಿಕೆಯ ಒಂದು ಹೊಸ ದೇವಸ್ಥಾನ ಸ್ಥಾಪಿಸಿ ಅದನ್ನೂ ಆದಿ ಶಂಕರರೇ 1200 ವರ್ಷಗಳ ಹಿಂದೆ ಕೊಲ್ಲೂರಿನಿಂದ ಕೇರಳಕ್ಕೆ ಮರಳಿ ಹೋಗುವ ದಾರಿಯಲ್ಲಿ ದೇಹಬಾಧೆ ಮತ್ತು ನೀರಡಿಕೆ ನಿವಾರಿಸಲು ಎರಡು ನಿಮಿಷ ನಿಂತಾಗ ಈ ಕ್ಷೇತ್ರ ಸ್ಥಾಪಿಸಿದ್ದು ಎಂದು ಕಥೆ ಕಟ್ಟಿ ಹರಡಿದರಾಯಿತು. ಜತೆಗೆ ಒಂದು ಮುಂಬೈ ಕಮಿಟಿ ರಚಿಸಿ ಅದಕ್ಕೆ ಕೆಲವು ಭಂಡ ಬಂಟರನ್ನು ಅಧ್ಯಕ್ಷರನ್ನಾಗಿ ನೇಮಿಸಿದರಾಯಿತು. ಅವರು ಆಗಾಗ ಮುಂಬೈಗೆ ಹೋಗಿ ಅಲ್ಲಿ ತಮ್ಮ ಬಂಟ ಡ್ಯಾನ್ಸ್ ಬಾರ್ ಮಾಲಕರಿಂದ ಲಕ್ಷಗಟ್ಟಲೆ ಚಂದಾ ಎತ್ತಿ ತರುತ್ತಾರೆ. ಜತೆಗೆ ಈ ಹೊಸ ದೇವಸ್ಥಾನಕ್ಕೆ ಒಂದು ಕ್ಷೇತ್ರ ಪುರಾಣ ರಚಿಸಿ ಅಲ್ಲಿ ಪುರಾಣ ಕಾಲದಲ್ಲಿ ಪೆರಾಜೇಶ್ವರ ಎಂಬ ಋಷಿ ತಪಸ್ಸು ಮಾಡಿದ್ದನು. ಹಾಗಾಗಿ ಈ ಹಳ್ಳಿಯ ಮೂಲ ಸಂಸ್ಕೃತ ಹೆಸರು ಪೆರಾಜಪುರ ಎಂದು ಇತ್ತು, ಅದನ್ನು ದಡ್ಡ ತುಳುವರು ಪೆರಾಜೆ ಎಂದು ಕುಲಗೆಡಿಸಿದರು ಎಂಬ ಅಜ್ಜಿಕಥೆ ಹರಡಿದರಾಯಿತು. ಜತೆಗೆ 'ಪೆರಜಾಸುರ' ಎಂಬ ಘೋರ ರಾಕ್ಷಸನ ಕತೆಯೂ ಇರಲಿ. ಒಬ್ಬ ರಾಜನ ಪ್ರೇಮಕಾಮ ರಸಿಕತೆಯೂ ಇರಲಿ. ಇದರಿಂದ ಯಕ್ಷಗಾನ ಪ್ರಸಂಗ ರಚಿಸುವುದು ಸುಲಭವಾಗುತ್ತದೆ.

ನನ್ನ ಈ 'ಕ್ಷೇತ್ರಪುರಾಣ ರೆಸಿಪಿ' ಬಹಳಷ್ಟು ದೇವಸ್ಥಾನಗಳಲ್ಲಿ ಉಪಯೋಗವಾಗಿದೆ. ಪೆರಾಜೆಯಲ್ಲಿಯೇ ಗೋಸ್ವಾಮಿಯ ಶಾಖಾ ಮಠದ ಬದಿಗೆ 'ಬೆಟ್ಟ ಚಾಮುಂಡಿ' ಎಂಬ ನಿಜವಾಗಿ 500 ವರ್ಷ ಹಳೆಯ ಒಂದು ದೈವದ ಗುಡಿಯೂ ಇದೆ. ಇದು ಕಲ್ಲುರ್ಟಿಯಷ್ಟೆ ಬಹಳ ಕಾರ್ಣಿಕದ ದೈವ ಎಂದು ಪ್ರತೀತಿ ಇರುವುದು ಸತ್ಯ. ಸುತ್ತಲಿನ ಬಹಳಷ್ಟು ಹಳ್ಳಿಯವರು ಅಲ್ಲಿಗೆ ಹಂದಿ ಮತ್ತು ಕೋಳಿ ಬಲಿಯ ಹರಕೆ ಹೊರುತ್ತಾರೆ. ಅದು ಈಗ ಪೆರಾಜೆಯ ಬಂಟರ ಗುತ್ತಿನ ಆಡಳಿತದಲ್ಲಿ ಇದೆ. ಆ ಗುತ್ತಿನವರು ಶುದ್ಧ ಕೇಸರಿ ಬಂಟರು. ಹಾಗಾಗಿ ಆ ಕಾರ್ಣಿಕದ ದೈವವನ್ನು ಪೆರಾಜೆಯ ಗೋಸ್ವಾಮಿ ಶಾಖಾ ಮಠದವರು ವಹಿಸಿಕೊಳ್ಳುವುದು ಸಾಧ್ಯ. ಬೆಟ್ಟ ಚಾಮುಂಡಿ ಭೂತದ್ದೂ ಒಂದು ದೊಡ್ಡ ದೇವಾಲಯ ಸ್ಥಾಪಿಸಿ ಅದಕ್ಕೆ 'ಚಾಮುಂಡೇಶ್ವರಿ' ಎಂಬ ವೈದಿಕ



ಹೆಸರಿಟ್ಟರೆ ಹಣದ ಸುರಿಮಳೆಯಾಗುತ್ತದೆ. ಕರಾವಳಿಯಲ್ಲಿ ಧರ್ಮದ ಬಿಜ್ನೆಸ್ ತು ಲಾಭದಾಯಕ ಹಾಗೂ ಸುಲಭ. ಈ ಮೂಲಕ ಕಲ್ಲಡ್ಕ ಭಟ್ಟನ ಶಾಲೆಗೆ ಕೊಲ ಅನುದಾನಕ್ಕಿಂತ ಹೆಚ್ಚು ಹಣ ಒಟ್ಟುಗೂಡುತ್ತದೆ. ಆಗ ಬೇಬಿ ಕರಂದ್ಲಾಜೆ ಅ ಮುದಿ ಕಮಲಾ ಭಟ್ಟತಿಯ ಭಿಕ್ಷಾಂದೇಹಿ ಬೇಕಾಗುವುದಿಲ್ಲ.

ಜತೆಗೆ ಪೆರಾಜೆಯ ಶಾಖಾಮಠ ಹಾಗೂ ಹೊಸ ದೇವಸ್ಥಾನವನ್ನು ಭ್ರಷ್ಟ ರಾಜಕಾರ ಹಾಗೂ ಕಳ್ಳ ಉದ್ಯಮಿಗಳ 'ಸ್ವಿಸ್ ಬ್ಯಾಂಕ್' ಆಗಿ ಪರಿವರ್ತಿಸಬಹುದು. ಏಪ್ರಿಲ್ ತಿಂಗಳಲ್ಲಿ ಕಾರ್ಕಳ ತಾಲೂಕಿನಲ್ಲಿ ನಮ್ಮ ಅವಳಿ ಜಿಲ್ಲೆಯ ಮರಾಠಿ ಬ್ರಾಹ್ಮ ತಮ್ಮ ಜಾತಿಯ ಗಣೇಶ್ ಕಾರ್ನಿಕ್ ಮುಖಂಡತ್ವದಲ್ಲಿ ತಮ್ಮದೇ ಆದ ಹೊಸ ಮಹಾಲಿಂಗೇಶ್ವರ ದೇವಸ್ಥಾನ ಕಟ್ಟಿಸಿದ್ದಾರೆ. ಈಗ ಅಲ್ಲಿ ಭರ್ಜರಿ ಧ ಬಿಜ್ನೆಸ್ ನಡೆಯುತ್ತಿದೆ. ಹೀಗೆ ಪೆರಾಜೆಯಲ್ಲಿಯೂ ಆಗಲು ಸಾಧ್ಯ. ಕಲ್ಲಡ್ಕದವರೇ ಕ್ಷೇತ್ರ ಪುರಾಣ ರೆಸಿಪಿ ಒಮ್ಮೆ ಪ್ರಯತ್ನಿಸಿ ನೋಡಿ.


- ಉದಯರಾಜ್ ಹೆಗಡೆ, ಬಂ


ವೈದಿಕತೆಯಿಂದ ಪ್ರತ್ಯೇಕಗೊಂಡು ಬೆಳೆದ ಬಸವಣ್ಣನ ಲಿಂಗಾಯತ ಧರ್ಮ ಆವರ ಶೈವಾರಾಧನೆಯ ನೆಲೆಯಲ್ಲಿ ವೈದಿಕತೆಯಿಂದಲೇ ಬಳಿಕ ಕಲಬೆರಕೆಗೊಂಡು ದಿಕ್ಕು ತಪ್ಪಿ ಹೋದದ್ದು ಐತಿಹಾಸಿಕ ಸತ್ಯ. ಇಂತಹ ಸದುದ್ದೇಶದ ಲಿಂಗಾಯತ ಧರ್ಮವನ್ನು ವೈದಿಕತೆಯ ಕಪಿಮುಷ್ಟಿಯಿಂದ ಬಿಡಿಸಿ ಬಸವಣ್ಣಾದಿ ಶರಣರ ಆದರ್ಶದ ನೆಲೆಯಲ್ಲಿ ಮರು ಸ್ಥಾಪಿಸಗೊಳಿಸುವಂತಹ ಸಂಗತಿಯೇ ಸಂತೋಷದಾಯಕ. ಅಕ್ಷರಶಃ ಜಗಜ್ಯೋತಿಯೇ ಆದ ಬಸವೇಶ್ವರನನ್ನು ಹಾಗು ಅವರ ಆದರ್ಶವನ್ನು ಬೆಳಗಲು ಪ್ರೇರೇಪಿಸುವಂತಹ ಇಂತಹ ಮಹತ್ಕಾರ್ಯಕ್ಕೆ ಖಂಡಿತಾ ಯಶಸ್ಸು ದೊರೆಯುವಂತಾಗಲಿ.

- ಶಂಕರ್. ಬ್ರಹ್ಮಾವರ

ರೇಪ್-ಬಾಬಾ ಮತ್ತು ರೇಪ್-ಸ್ವಾಮಿಯ ಸಮಾಗಮ

ಹರ್ಯಾಣದ ಡೇರಾ ಬಾಬಾ ರಾಮ್ ರಹೀಮನ ಸುದ್ದಿಯನ್ನು ಪ್ರಸಾರ ಮಾಡುವಾಗ, ಸಂಘಿಪರ ಪೇಡ್ ಟಿವಿ ಚಾನೆಲ್ಲುಗಳು ರಾಮ್ ಶಬ್ದವನ್ನು ತೆಗೆದು ಹಾಕಿ ಕೇವಲ 'ಬಾಬಾ ರಹೀಮ್' ಎಂದಷ್ಟೇ ಬರೆಯುತ್ತಿವೆ. ಕಾರಣ ಈ ರೇಪ್ ಬಾಬಾ ಮುಸ್ಲಿಂ ಎಂಬ ಭಾವನೆ ಜನರಲ್ಲಿ ಹುಟ್ಟಿಸಲು ರಹೀಮ್ ಹೆಸರಿನ ಆಟ.






ಈ ರೇಪ್ ಬಾಬಾನ ವಕೀಲರು ಮೇಲಿನ ಕೋರ್ಟುಗಳಲ್ಲಿ ಮೇಲ್ಮನವಿ ಸಲ್ಲಿಸಿ ಶಿಕ್ಷೆ ಕಡಿಮೆ ಮಾಡಿಸಿ ಬೇಲ್ ಕೊಡಿಸುವ ವ್ಯವಸ್ಥೆ ಅಮಿತ್ ಶಾ ಮಾಡುತ್ತಿದ್ದಾನೆಂದು ವರದಿಯಿದೆ. ರೇಪ್ ಬಾಬಾನಿಗಿಂತ ಹೆಚ್ಚು ಅಪರಾಧ ಮಾಡಿದ ಬಿಳಿ-ದಾಡಿ ಕರಿ-ದಾಡಿಗಳು ಇಂದು ದೇಶವನ್ನೇ ಆಳುತ್ತಿಲ್ಲವೇ! ಈ ರೇಪ್ ಬಾಬನಿಗೆ ಬೇಲ್ ಸಿಕ್ಕ ಮೇಲೆ ಅವನನ್ನು ನಮ್ಮ ಕರಾವಳಿಗೆ ಕರೆತಂದು ರೇಪ್-ಬಾಬಾ ಮತ್ತು ರೇಪ್-ಸ್ವಾಮಿಗಳ ಸಮಾಗಮ ಮಾಡಿಸಿ, ನಂತರ ಏಳೇಳು ನ್ಯಾಯಾಧೀಶರನ್ನು ವಿಚಾರಣೆಯಿಂದ ಹಿಂದೆ ಸರಿಸುವುದು ಹೇಗೆ ಎಂಬ ತಂತ್ರವನ್ನೂ ಡೇರಾ ಬಾಬಾನಿಗೆ ಗೋಸ್ವಾಮಿ ಕಲಿಸಿಕೊಡಬೇಕೆಂದು ಅಮಿತ್ ಶಾ ಹೇಳಿದ್ದಾನಂತೆ.

- ಹರೀಶ್ ಎಂ ರೈ. ಉಡುಪಿ

ಮೋದಿ ಮತ್ತು ರಣಹದ್ದು

ಗಣಪತಿಯ ದೇಹಕ್ಕೆ ಆನೆಯ ತಲೆ ಜೋಡಿಸಿದ್ದು ಪ್ಲಾಸ್ಟಿಕ್ ಸರ್ಜರಿಯಿಂದ ಎಂದು ವಿಶ್ವದ ಮಹಾನ್ ವಿಜ್ಞಾನಿ ಮತ್ತು ಹಿಂದೂ ಪುರಾಣದ ಭಾರಿ ಸಂಶೋಧಕ ನಮ್ಮ ನರೇಂದ್ರ ಮೋದಿಯೇ ಮುಂಬೈಯ ವಿಜ್ಞಾನ ಕಾಂಗ್ರೆಸ್ಸಿನಲ್ಲಿ ಮೂರು ವರ್ಷಗಳ ಹಿಂದೆ ಹೇಳಿದ್ದರು. ಈ ವಿಜ್ಞಾನ ಕಾಂಗ್ರೆಸ್ಸಿನಲ್ಲಿ ಆಗ ಬಂದಿದ್ದ ಸದಸ್ಯರಲ್ಲಿ ಹೆಚ್ಚಿನವರು ವಿದೇಶಿ



ವಿಜ್ಞಾನಿಗಳು. ಶಿವನೇ ಪ್ಲಾಸ್ಟಿಕ್ ಸರ್ಜರಿಯ ಹರಿಕಾರ ಹಾಗೂ ಗಣಪತಿಯ ತಲೆಯೇ ಪ್ಲಾಸ್ಟಿಕ್ ಸರ್ಜರಿಗೆ ಜೀವಂತ ಸಾಕ್ಷಿ ಎಂದು ಮೋದಿ ಎಡಗೈ ಬೀಸುತ್ತಾ ಹೇಳಿದಾಗ ಈ ಎಲ್ಲಾ ವಿದೇಶಿ ವಿಜ್ಞಾನಿಗಳು ಭಾರಿ ಕರತಾಡನದೊಂದಿಗೆ ಮೆಚ್ಚುಗೆ ಸೂಚಿಸಿದರೆಂದು ಸಂಘಿಗಳು ಬಡಾಯಿ ಕೊಚ್ಚುತ್ತಾರೆ. ಹಾಗಾಗಿ ಮೋದಿ ಹೇಳಿದ್ದು ನೂರಕ್ಕೆ ನೂರು ನಿಜವಿರಲೇ ಬೇಕು. ಆದುದರಿಂದ 'ವಿಶ್ವ ಪ್ಲಾಸ್ಟಿಕ್ ಸರ್ಜರಿ ದಿನ'ವನ್ನು ಮುಂದಿನ ವರ್ಷದ ಗಣೇಶ್ ಚತುರ್ಥಿಯಂದು ಆಚರಿಸಲು ಯುನೆಸ್ಕೋ ಮೇಲೆ ಈಗಿನಿಂದಲೇ ಬಿಜೆಪಿ ಸರಕಾರ ಒತ್ತಡ ಹಾಕಬೇಕು. ಎಷ್ಟೇ ಆಗಲಿ ಯುನೆಸ್ಕೋದವರು ಮೋದಿಯನ್ನು ಜಗತ್ತಿನ ಬೆಸ್ಟ್ ಪ್ರಧಾನಿ ಎಂದು ಘೋಷಿಸಿ ಎರಡು ವರ್ಷ ಆಗಿದೆ ತಾನೇ!

ಈಗ ಒಂದೊಂದು ಕ್ಷೇತ್ರಕ್ಕೆ, ಒಂದೊಂದು ವಿಷಯಕ್ಕೆ, ಬೇರೆ ಬೇರೆ 'ವಿಶ್ವ ದಿನಾಚರಣೆ' ಇದೆ. ವಿಶ್ವ ಡಾಕ್ಟರ್‌ಗಳ ದಿನವಿದೆ, ವಿಶ್ವ ನರ್ಸಿಂಗ್ ದಿನವಿದೆ, ಅದೇ ರೀತಿ ಒಂದೊಂದು ರೋಗದ ನಿವಾರಣೆಗೆ ಒಂದೊಂದು ವಿಶ್ವ ದಿನಾಚರಣೆಯೂ ಇದೆ. ಆದರೆ 'ವಿಶ್ವ ಪ್ಲಾಸ್ಟಿಕ್ ಸರ್ಜರಿ' ದಿನವಿಲ್ಲ, ಹಾಗಾಗಿ ಗಣೇಶ್ ಚತುರ್ಥಿಯನ್ನು ಪ್ರತಿ ವರ್ಷ ವಿಶ್ವ ಪ್ಲಾಸ್ಟಿಕ್ ಸರ್ಜರಿ ದಿನ ಎಂದು ಆಚರಿಸಬೇಕು ಎಂದು ಸಂಘ ಪರಿವಾರದ ಪರವಾಗಿ ನಾನು ಬೇಡಿಕೆ ಇಡುತ್ತಿದ್ದೇನೆ.

ಮೊನ್ನೆ ಸ್ವಾತಂತ್ರ್ಯ ದಿನಾಚರಣೆಯಂದು ಕೆಂಪು ಕೋಟೆಯಲ್ಲಿ ಮೋದಿ ಭಾಷಣ ಜಡಿಯುವಾಗ ಬಿಗಿ ಭದ್ರತೆಯನ್ನು ಸೀಳಿ ಒಂದು ರಣಹದ್ದು ಬಂದು ಮೋದಿಯ ಪೋಡಿಯಂ ಸಮೀಪವೇ ಬಹಳ ಹೊತ್ತು ಕುಳಿತಿತ್ತು! ಭದ್ರತಾ ಪಡೆಯವರು ಅದನ್ನು ಓಡಿಸಲು ಪ್ರಯತ್ನಿಸಿದರೂ ಅದು ಹಾರಿಹೋಗಲಿಲ್ಲ, ಅದು ಕೇವಲ ಮೋದಿಯನ್ನೇ ಸಿಟ್ಟಿನಿಂದ ದಿಟ್ಟಿಸುತ್ತಿತ್ತಂತೆ. ಈ ಸುದ್ದಿ ಯಾಕೆ ಟಿವಿ ಮಾಧ್ಯಮಗಳಿಗೆ ಅಪಥ್ಯವಾಯಿತು? ಕಳೆದ ವರ್ಷ ಸಿದ್ದರಾಮಯ್ಯನವರ ಹಳೆಯ ಕಾರಿನ ಮೇಲೆ ಒಂದು ರೆಕ್ಕೆ ಮುರಿದ ಕಾಗೆ ಕೂತಿದ್ದಾಗ ಹಾಗೂ ಮಂಗಳೂರಿನಲ್ಲಿ ಸಿದ್ದು ಹೆಗಲ ಮೇಲೆ ಕಾಗೆಯ ಹಿಕ್ಕೆ ಬಿದ್ದಾಗ ಎಲ್ಲಾ ಕನ್ನಡ ಟಿವಿ ಚಾನೆಲ್ಲುಗಳು ಅರೆ-ಹುಚ್ಚರಂತೆ ಕಾಣುವ ಜ್ಯೋತಿಷಿಗಳನ್ನು ಕರೆದು ಕಾಗೆ ಶಕುನದ ಬಗ್ಗೆ ಕೊರೆಸಿದ್ದೇ ಕೊರೆಸಿದ್ದು. ಆದರೆ ಗುಂಡ್ಲುಪೇಟೆ-ನಂಜನಗೂಡು ಉಪ ಚುನಾವಣೆಯಲ್ಲಿ ಬಿಜೆಪಿ ಬೋರಲು ಬಿದ್ದಾಗ ಅವರೆಲ್ಲರ ಬಾಯಿ ಮುಚ್ಚಿತ್ತು. ಆದರೂ ಈಗ ಕೆಂಪುಕೋಟೆಯಲ್ಲಿ ಸ್ವಾತಂತ್ರ್ಯ ದಿನಾಚಾರಣೆ ವೇಳೆಯೇ ಸರಿಯಾಗಿ ರಣಹದ್ದು ಮತ್ತು ಮೋದಿಯ ಮುಖಾಮುಖಿಯ ಬಗ್ಗೆ ಯಾಕೆ ಟಿವಿ ಜ್ಯೋತಿಷಿಗಳು ಬೊಗಳುವ ಧೈರ್ಯ ಮಾಡುತ್ತಿಲ್ಲ? ಕುರುಕ್ಷೇತ್ರ ಯುದ್ಧಕ್ಕೆ ಮೊದಲು ದುರ್ಯೋಧನನ ಮುಂದೆ ಹೀಗೆಯೇ ರಣಹದ್ದು ಒಂದು ಕಾಣಿಸಿಕೊಂಡು ಯುದ್ಧಕ್ಕೆ ಹೋಗಬಾರದು ಎಂದು ಸಂಕೇತ ಕೊಟ್ಟಿತ್ತು. ಅಶೋಕ ಮತ್ತು ಕಳಿಂಗ ಯುದ್ಧಕ್ಕೂ ಮುಂಚೆ ರಣಹದ್ದು ಅಶೋಕನ ರಥದ ಮೇಲೆ ಬಂದು ಕುಳಿತಿತ್ತಂತೆ. ಎರಡನೇ ವಿಶ್ವಯುದ್ಧಕ್ಕೆ ಮುಂಚೆ ಹಿಟ್ಲರನ ಎದುರಿಗೂ ಹೀಗೆ ರಣಹದ್ದು ಬಂದು ಕುಳಿತಿತ್ತಂತೆ. ಒಟ್ಟಾರೆ ಎಲ್ಲೆಡೆ ರಣಹದ್ದು ಯಾವಾಗಲೂ ರಕ್ತಪಾತ ತಪ್ಪಿಸುವಂತೆ ದುಷ್ಟರಿಗೆ ಸಂಕೇತ ನೀಡಲು ಬರುವ ಚಿತ್ರಗುಪ್ತ ಎನ್ನಲಾಗುತ್ತದೆ!

- ಮಲ್ಲಿಕಾರ್ಜುನ ಶೆಟ್ಟರ್. ಬೆಳಗಾವಿ


ಮೋದಿಯ ಪ್ರಚಾರದ ತೆವಲು

ಭಾರತದಲ್ಲಿ ಈಗ ಹಲವೆಡೆ ಭೀಕರ ಪ್ರವಾಹ ಬಂದಿರುವ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಕೆಲವು ಕಡೆ ಆಕಾಶದಿಂದಲೇ ನೆರೆಪೀಡಿತ ಪ್ರದೇಶ ವೀಕ್ಷಿಸಿದರು ಹಾಗೂ ಸ್ವಾತಂತ್ರ್ಯ ದಿನಾಚರಣೆಯ ಭಾಷಣದಲ್ಲಿ ಅದರ ಬಗ್ಗೆ ಬಾಯಿಮಾತಿನ ಕಳವಳ ವ್ಯಕ್ತ ಮಾಡಿದರು ಅಷ್ಟೇ. ಇದಕ್ಕಾಗಿ ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷದ ಮೀಡಿಯಾ ಸೆಲ್ಲಿನ ಮುಖ್ಯಸ್ಥೆಯಾಗಿರುವ ಮಾಜಿ ಸಂಸದೆ ರಮ್ಯಾ ಇತ್ತೀಚೆಗೆ ತನ್ನ ಟ್ವೀಟರ್‌ನಲ್ಲಿ ಪ್ರಧಾನಿ ಮೋದಿಯವರು ನೆರೆ ಪೀಡಿತರನ್ನು ಭೇಟಿಯಾಗಿದ್ದ ಅಸಲಿ ಫೋಟೋ ಯಾರಾದರೂ ತನಗೆ ಕಳುಹಿಸಿದರೆ ಅವರಿಗೆ ರೂ. 25,000 ಬಹುಮಾನ ಕೊಡುವುದಾಗಿ ಘೋಷಿಸಿದರು. ಇದಕ್ಕಾಗಿ ಮೋದಿಯ ಭಕ್ತಗಣ ರಮ್ಯಾರವರ ಮೇಲೆ ಟ್ವೀಟರ್‌ನಲ್ಲಿ ದಾಳಿ ಮಾಡುತ್ತಾ ತಮ್ಮ ಮನುವಾದಿ ಮಹಿಳಾ ವಿರೋಧಿ ಕೀಳು ಮನಸ್ಥಿತಿ ಪ್ರದರ್ಶಿಸಿ ಎಂದಿನಂತೆ ಅತಿ ತುಚ್ಛ ಭಾಷೆಯಲ್ಲಿ ಅವಮಾನಿಸುವ ಅಭಿಯಾನ ನಡೆಸಿತು. ಎಷ್ಟಾದರೂ ಅವರ ಮನುಸ್ಮೃತಿಯಲ್ಲೇ ಮಹಿಳೆಯನ್ನು ದಿನಾಲೂ ಏನಾದರೂ ನೆವದಲ್ಲಿ ಅವಮಾನಿಸುತ್ತಾ ಇರಬೇಕೆಂದು ಬರೆದಿದೆ ತಾನೇ. ಹಾಗಾಗಿ ಸಂಘಿಗಳಿಗೆ ಮಹಿಳೆಯರೆಂದರೆ ಯಾವಾಗಲೂ ತುಚ್ಛ ಭಾವನೆಯೇ ಇರುವುದು.

2013 ರಲ್ಲಿ ಉತ್ತರಾಖಂಡ್ ರಾಜ್ಯದ ಕೇದಾರನಾಥದಲ್ಲಿ ಭಾರಿ ಪ್ರವಾಹ ಬಂದಿದ್ದಾಗ ಗುಜರಾತ್ ಮುಖ್ಯಮಂತ್ರಿ ಆಗಿದ್ದ ಮೋದಿ ಕೇದಾರನಾಥಕ್ಕೆ ಹೋಗಿ ಪ್ರವಾಹದ ಹಿನ್ನೆಲೆಯಿಟ್ಟು ತನ್ನ ಫೋಟೋ ಮಾತ್ರ ತೆಗೆಸಿಕೊಂಡು ಯಾವುದೇ ಪರಿಹಾರ ಕಾರ್ಯ ಮಾಡಿಸದೇ ಹಿಂದೆ ಬಂದು ತಾನು ಅಲ್ಲಿ ತೆಗೆಸಿಕೊಂಡ ಫೋಟೋಗಳನ್ನು ಪತ್ರಿಕೆಗಳಲ್ಲಿ ಹಾಕಿಸಿ ತಾನು ಸ್ವತಃ ನೆರೆಪೀಡಿತರ ಸಹಾಯಕ್ಕೆ ಧಾವಿಸಿದ್ದೆ ಎಂದು ಬೊಗಳೆ ಬಿಟ್ಟಿದ್ದರು. ನಂತರ ನಿಜ ಬಹಿರಂಗವಾದಾಗ ಅದು ಮಾಧ್ಯಮದಲ್ಲಿ ತಮಾಷೆಗೊಳಗಾಗಿತ್ತು. ಜೂನ್ 2013 ರಲ್ಲಿ ಇಡೀ ಕೇದಾರನಾಥ ಊರಿಗೆ ಊರೇ ನಾಶವಾಗಿತ್ತು. ಕೇದಾರನಾಥ ದೇವಸ್ಥಾನದಲ್ಲಿದ್ದ ಯಾತ್ರಿಗಳು ಮಾತ್ರವಲ್ಲ ಪೂಜಾರಿಗಳೆಲ್ಲಾ ಪ್ರವಾಹದಲ್ಲಿ ಮುಳುಗಿ ಸತ್ತಿದ್ದರು. ಇಂದಿಗೆ ಕೇದಾರನಾಥ ಊರು ನಾಶವಾಗಿ ನಾಲ್ಕು ವರ್ಷವಾಗಿದ್ದರೂ ಅದು ಇನ್ನೂ ಸುಸ್ಥಿತಿಗೆ ಬಂದಿಲ್ಲ. ಕೇದಾರನಾಥದಲ್ಲಿ ಪ್ರವಾಹದ ಹಿನ್ನೆಲೆಯಿಟ್ಟು ನಕಲಿ ಫೋಟೋ ತೆಗೆಸಿಕೊಂಡಿದ್ದ ಮೋದಿ ಈಗ ಪ್ರಧಾನಿಯಾಗಿ ಮೂರು ವರ್ಷವಾಗಿದ್ದರೂ ಅವರು ಮತ್ತೊಮ್ಮೆ ಕೇದಾರನಾಥಕ್ಕೆ ಹೋಗಿ ಆ ಕ್ಷೇತ್ರದ ಮರುಸ್ಥಾಪನೆಗೆ ಅಥವಾ ಅಲ್ಲಿಯ ನಿವಾಸಿಗಳ ಕಷ್ಟ ಪರಿಹಾರಕ್ಕೆ ಒಂದಿಷ್ಟೂ ಸಹಾಯ ಮಾಡಿಲ್ಲ. ಇದುವೇ ಮೋದಿಗೆ ಹಿಂದೂ ಪವಿತ್ರ ಕ್ಷೇತ್ರಗಳ ಮೇಲಿರುವ ನಕಲಿ ಭಕ್ತಿಗೆ ಪುರಾವೆ.

2015 ರಲ್ಲಿ ನೇಪಾಳದಲ್ಲಿ ಭೂಕಂಪವಾದಾಗ ಎಲ್ಲಕ್ಕಿಂತ ಮೊದಲು ನೇಪಾಳದ ಪ್ರಧಾನಿಗಳಿಗೆ ತಾನೇ ಫೋನ್ ಮಾಡಿ ನಿದ್ದೆಯಿಂದ ಎಬ್ಬಿಸಿ ಭೂಕಂಪದ ಸೂಚನೆ ಕೊಟ್ಟಿದ್ದು ಎಂದು ಸಹ ಮೋದಿ ಆಗ ಪ್ರಚಾರ ಮಾಡಿದ್ದರು. ಆದರೆ ಅದೂ ಸಹ ಸುಳ್ಳಾಗಿತ್ತು. ಆಗ ಭಾರತ ಸರಕಾರ ನೇಪಾಳಕ್ಕೆ ಕಳುಹಿಸಿದ್ದ ಪರಿಹಾರ ಸಾಮಗ್ರಿ ಮತ್ತು ಆಹಾರದ ಪ್ರತಿ ಪ್ಯಾಕೆಟ್ಟಿಗೂ ಮೋದಿಯ ಫೋಟೋ ಹಚ್ಚಿ ನೇಪಾಳದಲ್ಲೂ ಮೋದಿಗೆ ವೈಯಕ್ತಿಕ ಪ್ರಚಾರ ಕೊಡಲು ಪ್ರಯತ್ನಿಸಿದಾಗ ನೇಪಾಳ ಸರಕಾರ ಮೋದಿಯ ನಾಟಕದಿಂದ ಬೇಸತ್ತು ಭಾರತದ ಪರಿಹಾರ ಸಾಮಗ್ರಿ ಸ್ವೀಕರಿಸಲು ನಿರಾಕರಿಸಿತ್ತು. ಅದರ ಬದಲು ನೇಪಾಳ ಚೀನಾದ ಪರಿಹಾರ ಸಾಮಗ್ರಿ ಸ್ವೀಕರಿಸಿತ್ತು. ಹೀಗೆ ಪ್ರತಿಯೊಂದು ವಿಷಯದಲ್ಲೂ ವೈಯಕ್ತಿಕ ಪ್ರಚಾರ ಪಡೆಯುವ ಮೋದಿಯ ತೆವಲು ಮತ್ತು ಅವರ ಫೋಟೋಶಾಪಿಂಗ್ ಸರ್ಕಸ್ಸುಗಳು ಅವರ ಮಾತಿನ ವಿಶ್ವಾಸಾರ್ಹತೆಯನ್ನು ದೇಶ-ವಿದೇಶದೆಲ್ಲೆಡೆ ಕುಂದಿಸಿಬಿಟ್ಟಿದೆ. ಇನ್ನಾದರೂ ಮೋದಿ ತಮ್ಮ ಬಿಜೆಪಿ ಮೀಡಿಯಾ ಸೆಲ್ಲಿಗೆ ತಮ್ಮ ಚಿತ್ರಗಳ ಫೋಟೋಶಾಪಿಂಗ್ ಮತ್ತು ಸುಳ್ಳು ಪ್ರಚಾರಗಳನ್ನು ನಿಲ್ಲಿಸುವಂತೆ ಹೇಳಿದರೆ ಪ್ರಧಾನ ಮಂತ್ರಿ ಹುದ್ದೆಯ ಘನತೆ ಉಳಿದೀತು.

- ಕೇಶವರಾಮ ಅಡಪ. ಕಿನ್ನಿಗೋಳಿ



ಬಿಕರಿಯಾದ ಮಾಧ್ಯಮಗಳು

ಬಿಜೆಪಿ ನೇತಾರರು ದೇಶದಲ್ಲಿ ಸಮಸ್ಯೆಗಳೇ ಇಲ್ಲ, ಕೇವಲ 2019 ರ ಲೋಕಸಭಾ ಚುನಾವಣೆ ಗೆಲ್ಲುವುದಷ್ಟೇ ಉಳಿದಿರುವ ವಿಷಯ ಎನ್ನುವ ರೀತಿಯಲ್ಲಿ ಚುನಾವಣಾ ತಯಾರಿ ಆರಂಭಿಸಿ ಬೋಂಗು ಮಾತುಗಳಿಂದ ಮಂಟಪ ಕಟ್ಟುತ್ತಿದ್ದಾರೆ. ಕೆಲ ಎಲೆಕ್ಟ್ರಾನಿಕ್ ಮಾಧ್ಯಮಗಳೂ ಶುದ್ಧ ಸುಳ್ಳುಗಳನ್ನು ಮತ್ತೆ ಮತ್ತೆ ವಿಪರೀತ ರಂಜನೆಯೊಂದಿಗೆ ಪ್ರಚಾರ ಮಾಡುತ್ತಿರುವುದು ಖೇದನೀಯ. ಆದರೆ ಹರಿಯಾಣದಲ್ಲಿ ಡೇರಾ ಸಚ್ಚಾ ಸೌದದ ಅಂಧ ಭಕ್ತರ ಹಿಂಸೆ, ಇತ್ತೀಚಿನ ರೈಲು ಅಪಘಾತಗಳು, ಅಮಾಯಕರ ಸಾವುಗಳು ಬಿಜೆಪಿ ಆಡಳಿತದ ವೈಫಲ್ಯವನ್ನು ಬಯಲಾಗಿಸಿವೆ.

ಡೇರಾ ಸಚ್ಚಾ ಸೌಧದ ಭಕ್ತರ ದಾಂಧಲೆ ಅರಾಜಕತೆಯ ವಾತಾವರಣವನ್ನು ಉಂಟುಮಾಡಿತ್ತು. ಕೇಂದ್ರ ಸರ್ಕಾರದ ಅಧೀನದಲ್ಲಿರುವ ಗೃಹ ಖಾತೆ, ಇಂಟೆಲಿಜೆನ್ಸ್ ವಿಭಾಗ-ದೆಹಲಿಗೆ ತುಂಬಾ ಸಮೀಪದಲ್ಲಿದ್ದು ಕೂಡ ಆಗಿರುವ ವಿಫಲತೆಗಳ ಬಗ್ಗೆ ನ್ಯಾಯಾಂಗ




ವ್ಯವಸ್ಥೆ ವ್ಯಕ್ತಪಡಿಸಿರುವ ಕಳವಳ ಆಡಳಿತದ ಅಧಕ್ಷತೆಗೆ ಹಿಡಿದ ಕನ್ನಡಿಯಂತಿದೆ. ಹರ್ಯಾಣದಲ್ಲಿ ಫೆಬ್ರುವರಿ 2016 ರಲ್ಲಿ ಕೂಡ ಜಾಟ್‌ರ ಮೀಸಲಾತಿ ಚಳವಳಿ ಹಿಂಸಾರೂಪಕ್ಕೆ ತಿರುಗಿ ಸಾವಿರಾರು ಕೋಟಿ ರೂಪಾಯಿಗಳ ಸರ್ಕಾರೀ ಆಸ್ತಿ ನಾಶವಾಗಿತ್ತು ಹಾಗು ಅನೇಕರು ಸಾವಿಗೀಡಾಗಿದ್ದರು. ಒಂದು ಲಕ್ಷ ಕೋಟಿಯ ಮುಂಬೈ-ಅಹಮದಾಬಾದ್ ಬುಲೆಟ್ ರೈಲಿನ ಬಗ್ಗೆ ಮಾತನಾಡುವ ಬಿಜೆಪಿಗರ ಬಣ್ಣದ ಮಾತುಗಳು ಇತ್ತೀಚಿನ ರೈಲು ಅಪಘಾತಗಳ ಬಗ್ಗೆ ಸಂವೇದನಾ ಹೀನತೆಯನ್ನು ಬಯಲಾಗಿಸಿವೆ. ಯುಪಿಎ ಸರ್ಕಾರ ಅಧಿಕಾರದಲ್ಲಿದ್ದಾಗ ಪ್ರಯಾಣ ದರ, ನಿಲ್ದಾಣದ ಟಿಕೆಟ್ ದರಗಳನ್ನೂ ಕಡಿಮೆಯಾಗಿರಿಸಿತ್ತು. ಬಿಜೆಪಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಮೇಲೆ ದರಗಳನ್ನು ಹೆಚ್ಚಿಸಲಾಗಿದೆ. ಆದರೆ ಪ್ರಯಾಣದ ಸುರಕ್ಷೆ ನೆಲ ಕಚ್ಚಿದೆ. 2012-13 ಹಾಗು 2013-14 ರಲ್ಲಿ, ದೇಶದಲ್ಲಿ ಕ್ರಮವಾಗಿ 5 ಹಾಗು 6 ದೊಡ್ಡ ರೈಲು ಅಪಘಾತಗಳಾಗಿದ್ದರೆ, ಈ ಸಾಲಿನಲ್ಲಿ 28 ದೊಡ್ಡ ಅಪಘಾತಗಳಾಗಿ 250ಕ್ಕೂ ಹೆಚ್ಚು ಜನ ಅಸುನೀಗಿದ್ದಾರೆ ಎನ್ನುವ ಮಾಹಿತಿ ಎಲ್ಲೆಡೆ ಲಭ್ಯವಿದೆ.

ಕೆಲ ಕಾರ್ಪೊರೇಟ್ ವಲಯದ ಅಥವಾ ಹಣಕ್ಕಾಗಿ ಬಿಕರಿಯಾಗಿರುವ ದೃಶ್ಯ ಮಾಧ್ಯಮಗಳಿಂದಾಗಿ ಇಂತಹ ಆಡಳಿತದ ಅಧಕ್ಷತೆಯ ಕುರಿತು ಸರಿಯಾದ ಜನಾಭಿಪ್ರಾಯ ದೇಶದಲ್ಲಿ ಮೂಡದಿರುವುದು ದೇಶಕ್ಕೆ ಒದಗಿರುವ ದುರಂತ. ಅಂತೆಯೇ ವಿರೋಧ ಪಕ್ಷಗಳು ಮತ್ತು ಸರಿಯಾದ ದಿಕ್ಕಿನಲ್ಲಿ ಯೋಚಿಸುವ ಮಾಧ್ಯಮಗಳು ಹೊಸ ಹೊಸ ಹೆಸರಿನ ಯೋಜನೆಗಳು, ಅರ್ಥವಿಲ್ಲದ ಮಾತಿನ ರಂಜನೆಯಲ್ಲಿ ಸಾಮಾನ್ಯರು ಕೊಚ್ಚಿ ಹೋಗದಂತೆ ಅಹಿಂಸಾತ್ಮಕವಾದ ಹೋರಾಟಗಳನ್ನು ರೂಪಿಸಿಬೇಕಿದೆ.

- ಲಕ್ಷ್ಮಣ ನಾಯ್ಕ್. ಬೆಳಗಾವಿ

ಇಂದಿರಾ ಕ್ಯಾಂಟೀನ್ ಸಹಿಸದ ಚೆಡ್ಡಿಗಳು

'ಕೇಸರಿ ಬಾತ್' ಹೆಸರನ್ನು ಇಂದಿರಾ ಕ್ಯಾಂಟೀನವರು ಬದಲಿಸಬೇಕು ಎಂದು ಮೈಸೂರು ಸಂಸದ ಪರಿತಾಪ ಸಿಮ್ಮ ಹೇಳಿದ್ದಾನಂತೆ. ಕಾರಣ 'ಕೇಸರಿ' ಬಣ್ಣ ಮತ್ತು ಹೆಸರಿನ ಮೇಲೆ ಕೇವಲ ಚೆಡ್ಡಿಗಳಿಗೆ ಮತ್ತು ಬಿಜೆಪಿಗೆ ಮಾತ್ರ ಹಕ್ಕು ಇರುವುದಂತೆ! ಸತ್ತ ಹಲ್ಲಿ / ಜಿರಲೆ ತಂದು ಕೆಲವು ಕೇಸರಿ ಕಿಡಿಗೇಡಿಗಳು ಇಂದಿರಾ ಕ್ಯಾಂಟೀನ್‌ನ ತಿಂಡಿಗಳಲ್ಲಿ ಹಾಕಲು ಪಿತೂರಿ ನಡೆಸುತ್ತಿದ್ದಾರೆ ಎಂದು ಸುದ್ದಿಯಿದೆ. ಹಾಗಾಗಿ ಎಲ್ಲರೂ ಎಚ್ಚರಿಕೆಯಿಂದ ಇರಬೇಕು. ನಿನ್ನೆ ಸೋಮವಾರ ಸುಬ್ರಮಣ್ಯನಗರದ ಇಂದಿರಾ ಕ್ಯಾಂಟೀನಿನಲ್ಲಿ ಬೆಳಗ್ಗೆ ಬೇಕಾದಷ್ಟು ತಿಂಡಿ ಇದ್ದರೂ ಏನೋ ಕುಂಟು ನೆಪದಲ್ಲಿ ಕ್ಯಾಂಟೀನ್ ಶಟರ್ ಬಂದ್ ಇಟ್ಟು ಒಳಗೆ ನೌಕರರು ಮತ್ತು ಆರೋಗ್ಯಾಧಿಕಾರಿ ಪಟ್ಟಾಗಿ ತಿಂಡಿ ಮುಕ್ಕುತ್ತಿದ್ದಾಗ ಎಂಜಲು ಕೈಯಲ್ಲಿಯೇ ಬೆಂಗಳೂರಿನ ಮೇಯರ್‌ಗೆ ಸಿಕ್ಕಿಬಿದ್ದು ಅಮಾನತುಗೊಂಡಿದ್ದಾರೆ. ಈ ಪ್ರಕರಣದಿಂದ ಇಂದಿರಾ ಕ್ಯಾಂಟೀನಿನ ಹೆಸರು ಕೆಡಿಸಲು



ವಿರೋಧಿಗಳು ವ್ಯವಸ್ಥಿತವಾಗಿ ಸಂಚು ನಡೆಸುತ್ತಿದ್ದಾರೆ ಎಂಬ ಆರೋಪ ಸತ್ಯವಾಯಿತು. ಅಷ್ಟೇ ಅಲ್ಲಿ ವಾರ್ಡ್ ಕ್ಯಾಂಟೀನ್ ಉಸ್ತುವಾರಿ ಅಧಿಕಾರಿ ಬಿಜೆಪಿಯ ಏಜೆಂಟ್ ಆಗಿದ್ದಾನೆಂದೂ ಖಚಿತವಾಯಿತಂತೆ. ಕಾಂಗ್ರೆಸ್ ಸರಕಾರದ ಜನಪರ ಯೋಜನೆಗಳನ್ನು ಬುಡಮೇಲು ಮಾಡಿ ಕಾಂಗ್ರೆಸ್ಸಿನ ಹೆಸರು ಹಾಳು ಮಾಡಲು ಚೆಡ್ಡಿಗಳು ಯಾವ ಹೀನ ಮಟ್ಟಕ್ಕೂ ಇಳಿಯುತ್ತಾರೆ ಎಂಬುದಕ್ಕೆ ಇದು ಸಾಕ್ಷಿ.

- ಗಿರೀಶ್ ಟಿ.ಎಸ್. ಬೆಂಗಳೂರು


ವಿ.ಸೂ.: ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ಕಳುಹಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರಿಗೂ ಚಿಕ್ಕದಾಗಿ ಮತ್ತು ಚೊಕ್ಕವಾಗಿ SMS ಕಳುಹಿಸಬಹುದು.

Registered No.RNP/KA/BGS/2036/2017-19 Posted at :BGPSO, Mysore Road, Bangalore-26 Thursday R B P LANKESH, Kannada Weekly Price Rs. 15/- 13-09-2017



ಉಪ್ಪಿ 'ಪ್ರಜಾಕೀಯ'ಕ್ಕೆ ಫೋರ್ ಟ್ವೆಂಟಿಗಳ ಕಾಟ!

ನಟ ಉಪೇಂದ್ರ ಒಂದಷ್ಟು ಪೊಲಿಟಿಕಲ್ ಎಬಿಸಿಡಿಗಳನ್ನು ಮುಂದಿಟ್ಟುಕೊಂಡು ರಾಜಕೀಯ ಪಕ್ಷ ಕಟ್ಟಲು ಮುಂದಾಗಿರೋದು ವೆರಿಓಲ್ಡ್ ಬ್ರೇಕಿಂಗ್ ನ್ಯೂಸ್. ಆದರೆ ಸದ್ಯದ ಶಾಕಿಂಗ್ ನ್ಯೂಸ್ ಏನೆಂದ್ರೆ, ಯಾವ ಭ್ರಷ್ಟಾಚಾರದ ವಿರುದ್ಧ ಹೋರಾಡ್ತೀನಿ ಅಂತ ಉಪ್ಪಿ ಬೊಬ್ಬಿರಿಯುತ್ತಿದ್ದಾರೊ ಅದೇ ಭ್ರಷ್ಟ ಫೋರ್ ಟ್ವೆಂಟಿಗಳ ಕಾಟ ಉಪ್ಪಿ ಪಕ್ಷಕ್ಕೆ ಶುರುವಾಗಿದೆಯಂತೆ. ಹಾಗಂತ ಯಾರ್‍ಯಾರೊ ಗಾಳಿ ಸುದ್ದಿ ಹರಡಿಸಿದ್ದಲ್ಲ, ಸ್ವತಃ ಉಪ್ಪಿಯೇ ತನ್ನ ಫೇಸ್‌ಬುಕ್ ಪೇಜ್‌ನಲ್ಲಿ ಅವಲತ್ತುಕೊಂಡಿದ್ದಾರೆ. ಉಪ್ಪಿಯ ಪೊಲಿಟಿಕಲ್ ಪಗಡೆಯಾಟವನ್ನು ಎನ್‌ಕ್ಯಾಶ್ ಮಾಡಿಕೊಳ್ಳುತ್ತಿರುವ ಒಂದಷ್ಟು ಫೋರ್ ಟ್ವೆಂಟಿಗಳು ಕಾಸು ವಸೂಲಿ ಮಾಡುವ ದಂಧೆಗೆ ಇಳಿದಿದ್ದಾರಂತೆ. ಅಂತಹ ಒಬ್ಬ ಮಾಜಿ ಅಭಿಮಾನಿಯ ಕೀಟಲೆ ಸ್ವತಃ ಉಪ್ಪಿಯ ಕಿವಿಗೆ ಬಿದ್ದು ಆತನ ಫೋಟೊ ಸಮೇತ 'ಈತ 420' ಎಂಬ ಸ್ಟೇಟಸ್ ಹಾಕಿರುವ ಉಪ್ಪಿ ದಯವಿಟ್ಟು ಇಂತವರಿಗೆ ಪ್ರೋತ್ಸಾಹ ಕೊಡಬೇಡಿ ಎಂದಿದ್ದಾರೆ. ಅಂದಹಾಗೆ, ಈತ ಉಪ್ಪಿ ಫ್ಯಾನ್ಸ್ ಅಸೋಸಿಯೇಷನ್ನಿನ ಮಾಜಿ ಮೆಂಬರಂತೆ. ಕರಪ್ಷನ್ ವಿರುದ್ಧ ಯುದ್ಧ ಸಾರಿರುವ ಉಪ್ಪಿಗೆ ಆ ಕರಪ್ಷನ್‌ನ ಸೀರೆಯ ನೆರಿಗೆ ಶುರುವಾಗೋದು ತನ್ನಂತಹ ಕಾಮನ್‌ಮ್ಯಾನ್‌ಗಳ ನಾಭಿಯ ಬುಡದಿಂದಲೇ ಎಂಬ ಸತ್ಯ ನಿಧಾನಕ್ಕೆ ಅರ್ಥವಾಗುತ್ತಿರುವಂತಿದೆ. ದಿಢೀರ್ ಕ್ರಾಂತಿಯ ವಿಚಾರದಿಂದ ಕೊಂಚ ವಿಶ್ರಾಂತಿ ತೆಗೆದುಕೊಂಡು ಇಂತಹ ಒಂದಷ್ಟು ಸೂಕ್ಷ್ಮಗಳ ಆಳ ಅಧ್ಯಯನದ ನಂತರ ಉಪ್ಪಿ ಅಖಾಡಕ್ಕಿಳಿದರೆ ಒಬ್ಬ ಸಂವೇದನಾಶೀಲ ಜನನಾಯಕ ಆಗಬಹುದು ಅನ್ನಿಸುತ್ತೆ.





ಪರಪ್ಪನ ರೂಪಾ ಪಾತ್ರಕ್ಕೆ ಯಾರಪ್ಪಾ?



ಇತ್ತೀಚೆಗೆ ಭಾರೀ ಸುದ್ದಿಯಾಗಿದ್ದ ಪರಪ್ಪನ ಅಗ್ರಹಾರ ಸೆಂಟ್ರಲ್ ಜೈಲ್ ರಾಡಿಯನ್ನು ಸೈನೈಡ್ ರಮೇಶ್ ಸಿನಿಮಾ ಮಾಡುತ್ತಿರೋದು ಹೊಸ ವಿಷಯವೇನೂ ಅಲ್ಲ. ತಮಿಳರ ಚಿನ್ನಮ್ಮ ಶಶಿಕಲಾಗೆ ಜೈಲಲ್ಲಿ ವಿವಿಐಪಿ ಟ್ರೀಟ್‌ಮೆಂಟ್ ಸಿಗುತ್ತಿದೆ ಅಂತ ಆರೋಪಿಸಿ ಐಪಿಎಸ್ ರೂಪಾ ನೀಡಿದ್ದ ವರದಿ ರಾಜಕೀಯ ಸಂಚಲನವನ್ನೇ ಹುಟ್ಟುಹಾಕಿತ್ತು. ರಿಟೈರ್ಡ್ ಅಂಚಿನಲ್ಲಿದ್ದ ಜೈಲು ಸೂಪರಿಂಟೆಂಡೆಂಟ್ ಸತ್ಯನಾರಾಯಣರಾವ್ ಮತ್ತು ಡಿಐಜಿ ರೂಪಾ ನಡುವೆ ಪತ್ರಸಮರಕ್ಕೆ ಕಾರಣವಾಗಿದ್ದ ಇಶ್ಯೂ ಇಟ್ಟುಕೊಂಡು ಎಎಂಆರ್ ರಮೇಶ್ ರೀಲು ಸುತ್ತಲು ರೆಡಿಯಾಗಿದ್ದಾರೆ. ಇತ್ತೀಚೆಗಷ್ಟೇ ರೂಪಾರನ್ನು ಭೇಟಿ ಮಾಡಿದ್ದ ನಿರ್ದೇಶಕ ರಮೇಶ್ 'ರೂಪಾ ಐಪಿಎಸ್' ಸಿನಿಮಾ ಕುರಿತಂತೆ ಜೈಲು ಅಕ್ರಮ ಮತ್ತು ವೈಯಕ್ತಿಕ ಬದುಕಿನ ಕುರಿತು ಮಾತಾಡಿ ಗ್ರೀನ್‌ಸಿಗ್ನಲ್ ಗಿಟ್ಟಿಸಿಕೊಂಡಿದ್ದಾರಂತೆ. ಖಡಕ್ ಪೊಲೀಸಿಣಿ ಪಾತ್ರಕ್ಕೆ ಯಾವ ನಟಿಯನ್ನು ಆಯ್ಕೆ ಮಾಡಬೇಕು ಅನ್ನೋದು ರಮೇಶ್ ಮುಂದಿರುವ ಸದ್ಯದ ಪ್ರಶ್ನೆ. ಈ ಸಿನಿಮಾವನ್ನು ಕನ್ನಡ ಮತ್ತು ತಮಿಳು ಭಾಷೆಯಲ್ಲಿ ತಯಾರಿಸೋ ಇರಾದೆ ಇರೋದ್ರಿಂದ ರೂಪಾ ಪಾತ್ರಕ್ಕೆ ನಯನತಾರಾ ಅಥವಾ ಅನುಷ್ಕಾ ಶೆಟ್ಟಿಯನ್ನು ಪ್ರತಿಷ್ಠಾಪಿಸುವ ಐಡಿಯಾ ನಿರ್ದೇಶಕ ರಮೇಶ್ ತಲೆಯಲ್ಲಿ ಗಿರಕಿ ಹೊಡೆಯುತ್ತಿದೆ ಅನ್ನೋ ವಿಚಾರ ಬಲ್ಲ ಭಾತ್ಮೀದಾರರಿಂದ ತಿಳಿದುಬಂದಿದೆ. ಆದರೆ ಇಬ್ಬರಲ್ಲಿ ಇನ್ನೂ ಯಾರನ್ನೂ ಅಪ್ರೋಚ್ ಮಾಡಿಲ್ಲವಂತೆ. ಅಂದಹಾಗೆ, ರಾಜೀವ್ ಗಾಂಧಿ ಹಂತಕರ ಎನ್‌ಕೌಂಟರ್ ಕಥಾಹಂದರದ 'ಸೈನೈಡ್' ಎಂಬ ಥ್ರಿಲ್ಲರ್ ಸಿನಿಮಾ ಕೊಟ್ಟಿದ್ದ ರಮೇಶ್ ಇದೀಗ ಅದೇ ರಾಜೀವ್ ಗಾಂಧಿ ಹತ್ಯೆಗೆ ಸಂಬಂಧಿಸಿದ 'ಆಸ್ಫೋಟ' ಎಂಬ ಮತ್ತೊಂದು ಚಿತ್ರ ನಿರ್ದೇಶನದಲ್ಲಿ ಬ್ಯುಸಿ ಇದ್ದಾರೆ. ಅದು ಮುಗಿದನಂತರವಷ್ಟೇ ಐಪಿಎಸ್ ರೂಪಮ್ಮ ಟೇಕಾಫ್ ಆಗೋದು. ಅಲ್ಲಿವರೆಗೂ ಯಾವ್ಯಾವ ನಟಿಯರ ಹೆಸರು ಹರಿದಾಡುತ್ತೆ ಅನ್ನೋದು ನಮ್ಮ ಭಾತ್ಮೀದಾರರಿಗೂ ಗೊತ್ತಿಲ್ಲ....!

ಸಿನಿಮಾ ಸುದ್ದಿ: ಗಿರೀಶ್ ತಾಳಿಕಟ್ಟೆ

ಅಪ್ಪು ಸಿನಿಮಾಗೆ ಶಶಾಂ[ಕ್] ಆ್ಯಕ್ಷನ್-ಕಟ್?



ಪವರ್‌ಸ್ಟಾರ್ ಪುನೀತ್ ರಾಜ್‌ಕುಮಾರ್ [...] ನಿರ್ಮಾಣಕ್ಕೆ ಇಳಿದಿರೋದು ಬಹಳಷ್ಟು ಜನರಿಗೆ ತಿಳಿದಿರುವಂತದ್ದೆ. 'ಪಿಆರ್‌ಕೆ ಪಿಕ್ಚರ್[...]' ಎಂಬ ತಮ್ಮದೇ ಸ್ವಂತ ಬ್ಯಾನರ್‌ನಡಿ ಈಗಾ[...] 'ಕವಲುದಾರಿ' ಎಂಬ ತಮ್ಮ ನಿರ್ಮಾಣದ ಮೊದಲ ಚಿತ್ರಕ್ಕೆ ಹೊಂಬಾಳೆ ಫಿಲಂಸ್ ಜೊತೆಗೂಡಿ ಕಾಸು ಸುರಿದಿದ್ದಾರೆ. 'ಗೋಧಿಬಣ್ಣ ಸಾಧಾರಣ ಮೈಕಟ್ಟು' ಚಿತ್ರದ ನಿರ್ದೇಶಕ ಹೇಮಂತ್‌ರಾವ್ ಆಕ್ಷನ್ ಕಟ್ ಹೇಳುತ್ತಿರುವ ಚಿತ್ರಕ್ಕೆ ಈ ಮೊದಲು 'ಅರ್ಧಸತ್ಯ' ಅನ್ನೊ ಹೆಸರಿಡಲಾಗಿತ್ತು. ಆದರೆ ಟೈಟಲ್ ಅದಾಗಲೇ ನಿರ್ದೇಶಕ ರಾಮಮೂರ್ತಿ ಹೆಸ[...] ರಿಜಿಸ್ಟರ್ ಆಗಿದ್ದರಿಂದ ಕವಲುದಾರಿ ಎಂಬುದ[...] ಬದಲಿಸಲಾಗಿದೆ. ಆಪರೇಷನ್ ಅಲಮೇಲಮ[...] ಖ್ಯಾತಿಯ ಮನೀಷ್ ರಿಷಿ ಇದಕ್ಕೆ ಹೀರೊ. ಸುದ್ದಿ ಇದಲ್ಲ, ಈ ಚಿತ್ರದ ತರುವಾಯ ತ[...] ಬ್ಯಾನರ್‌ನ ಎರಡನೇ ಸಿನಿಮಾದಲ್ಲಿ ತಾವೇ ಆಗಲು ಪುನೀತ್ ನಿರ್ಧರಿಸಿದ್ದಾರೆ ಅನ್ನೋ[...] ಸುದ್ದಿ ದೊಡ್ಮನೆ ಸರ್ಕಲ್‌ನಿಂದ ಹೊರಬಿದ್ದಿ[...] ಇದಕ್ಕೆ 'ಮೊಗ್ಗಿನ ಮನಸ್ಸು', 'ಕೃಷ್ಣನ್ ಲವ್ ಸ್ಟೋರಿ', 'ಕೃಷ್ಣಲೀಲಾ', 'ಮುಂಗಾರು ಮಳೆ-[...]' ಖ್ಯಾತಿಯ ಶಶಾಂಕ್ ನಿರ್ದೇಶಕರಾಗಲಿದ್[...] ಎಂಬ ಮಾತುಗಳೂ[...] ಕೇಳಿಬರುತ್ತಿವೆ. ಪುನಿ[...] ಸದ್ಯ 'ಅಂಜನಿಪುತ್ರ'ದ[...] ಬ್ಯುಜಿಯಾಗಿ[...] ಅದಾದನಂತ[...] ತಮಿಳು ನಿ[...] ವೆಟ್ರಿಮಾರನ[...] ನಿರ್ದೇಶನದ[...] ಚಿತ್ರದಲ್ಲಿ ಅಭಿನಯಿಸಲಿ[...] ಅಲ್ಲಿಯವರೆಗೆ ಬೇರೇನೂ ಏರುಪೇರು ಆಗದಿದ್ದರೆ ಶಶಾಂಕ್-ಪು[...] ಜೋಡಿಯ ಸೆಟ್ಟೇರಲಿದೆ. ಇಲ್ಲದಿದ್ದರೆ ಸ್ಯಾಂಡಲ್‌ವು[...] ಮತ್ತೊಂದು ಅ[...] ಸುದ್ದಿಯಾಗಲಿದೆ[...]



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 2667642[...]
Fax : 26604536, E-mail :lankesh70@rediffmail.com